ಡಿಸೆಂಬರ್ 7, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

2014

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಶ್ರೀ ಮಂಜುನಾಥ... ಸತ್ಯ ಬಯಲು ಮಾಡಪ್ಪ!

# ಸೌಜನ್ಯ ಕೇಸ್ ಸುಪ್ರೀಂ ಕೋರ್ಟ್‌ಗೆ!





## ಆಸ್ತಿಗಾಗಿ ಹೆತ್ತ ಮಕ್ಕಳೇ ಅಮ್ಮನ ಕೊಂದುಬಿಟ್ರಾ?!

## ಹಿರಿಯ ಪತ್ರಕರ್ತ ಶಿವಕುಮಾರ್ ಅರೆಸ್ಟಾದ!



## ಸೈಕಲ್ -ಬೇಕರಿ ಗ್ಯಾಂಗ್‌ವಾರ್?!





## ಬುರ್ಕಾ ಧರಿಸಿ ಪತಿಯ ಕೊಲೆಗೆ ಯತ್ನಿಸಿದ ಪತ್ನಿ!

## ಸಿಎಂ ಪಟ್ಟದ ಆಟಕ್ಕೆ ತಾತ್ಕಾಲಿಕ ವಿರಾಮ?



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

1975ರಲ್ಲಿ 'ಶಿಕ್ಷಣ ಸುಧಾರಕ'
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

1984ರಲ್ಲಿ 'ಪ್ರದೇಶ ಸಮಾಚಾರ'
(ದಿನಪತ್ರಿಕೆ)

1985ರಲ್ಲಿ 'ಪೊಲೀಸ್ ನ್ಯೂಸ್'
(ಕನ್ನಡ ವಾರಪತ್ರಿಕೆ)

1987ರಲ್ಲಿ 'ಪೊಲೀಸ್ ನ್ಯೂಸ್'
(ತಮಿಳು, ಹಿಂದಿ, ಇಂಗ್ಲೀಷ್)

1989ರಲ್ಲಿ 'ಲೋಕವಾಣಿ'
(ಕನ್ನಡ ದೈನಿಕ)

1990ರಲ್ಲಿ 'ಮಂಗಳೂರು ಮಿತ್ರ'
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

1992ರಲ್ಲಿ 'ಕರ್ನಾಟಕ ಮಲ್ಲ'
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

1996ರಲ್ಲಿ 'ಆದರ್ಶ ಗಂಡ ಹೆಂಡತಿ'
(ಕನ್ನಡ ಮಾಸಪತ್ರಿಕೆ)

1997ರಲ್ಲಿ 'ಕ್ರೀಡಾ ಸಮಯ'
(ಕನ್ನಡ ಮಾಸಿಕ)

1999ರಲ್ಲಿ 'ಶುಭದಿನ'
(ಕನ್ನಡ ವಾಣಿಜ್ಯ ದೈನಿಕ)

1999 ರಲ್ಲಿ 'ಸಿಟಿ ಟುಡೆ'
(ಇಂಗ್ಲೀಷ್ ಸಂಜೆ ದೈನಿಕ)

'ಪೊಲೀಸ್ ನ್ಯೂಸ್'
(ಸಪ್ಲಿಮೆಂಟರಿ)

'ದೇಗುಲ ಪ್ರಭೆ'
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954   ಮರಣ : 22-11-2005

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರ್ತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

'ಸಾಧಕರು'
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

'ವಿಶಿಷ್ಟ ಸೇವಾ ಪದಕ'
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

'ವೈದ್ಯ ಸಾಹಿತ್ಯ ಸಾಧಕ'
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

'ಮುದ್ರಣ ಕಲೆ ಸಾಧಕ'
(ಯೂರೋಪ್ ಕನ್ನಡ ಬಳಗ)

'ಶಾಂತಿ ಧೂತ'
(ಇಂಡಿಯನ್ ಕಲ್ಚರಲ್ ಅಕಾಡೆಮಿ)

'ಕನ್ನಡ ರತ್ನ'
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

'ಪತ್ರಿಕೋದ್ಯಮಿ ಶಿವರತ್ನ'
(ವೀರಶೈವ ವಿಚಾರ ವೇದಿಕೆ)

'ಕರ್ನಾಟಕ ಮಲ್ಲ'
(ಮುಂಬೈ, ಕನ್ನಡ ಬಳಗ)

'ಬಹುಮುಖಿ'
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'

# ಧೀಮಂತ ನಾಯಕ, ಕಾಂಗ್ರೆಸ್ ಕಟ್ಟಾಳು, ಶ್ರೀ ಆರ್.ವಿ. ದೇವರಾಜ್ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ....



**ಕಾಂ**ಗ್ರೆಸ್ ಕಟ್ಟಾಳು, ಮಾಜಿ ಶಾಸಕ ಆರ್.ವಿ. ದೇವರಾಜ್ (67) ಅವರು ನಿನ್ನೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ನಾಳೆ ಬುಧವಾರ ಅವರ ಜನ್ಮದಿನವಿದ್ದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದರ್ಶನ ಪಡೆಯಲು ಮೈಸೂರಿಗೆ ತೆರಳಿದ್ದರು. ಆ ವೇಳೆ ಅವರಿಗೆ ಹೃದಯಾಘಾತವಾಗಿದೆ! ವಿಧಿಯಾಟ ಹೇಗಿದೆ ನೋಡ್ರಿ,ಹುಟ್ಟುಹಬ್ಬದಂದೆ ಅವರ ಅಂತಿಮ ಕಾರ್ಯ!

ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ ಆರ್ .ವಿ. ದೇವರಾಜ್ (67) ಕಲಾಸಿಪಾಳ್ಯದಲ್ಲಿ ಜನಿಸಿ ಅಲ್ಲೇ ಜೀವನ ಕಟ್ಟಿಕೊಂಡು ರಾಜಕೀಯ ಪ್ರವೇಶಗೈದು ಜನಾನುರಾಗಿ ಶಾಸಕರಾಗಿ ಮೆರೆದವರು.ಸೋಲಲಿ ಗೆಲ್ಲಲಿ, ಕೊನೆಯವರೆಗೂ ತಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ ಮಹಾನ್ ನಾಯಕ.

ಆರ್.ವಿ. ದೇವರಾಜ್ ಅವರ ತಂದೆ ರೊನೂರ್ ವೆಂಕಟೇಶಪ್ಪನವರು ಬೆಂಗಳೂರಿನ ಸಿಟಿ ಮಾರ್ಕೆಟ್‌ನಲ್ಲಿ ತರಕಾರಿ ವ್ಯಾಪಾರಿಯಾಗಿದ್ದರು. ಅವರ ಮಗ ಆರ್‌ವಿಡಿ ಯುವ ಕಾಂಗ್ರೆಸ್ ಸದಸ್ಯರಾಗಿ, ಪದಾಶಿಕಾರಿಯಾಗಿ, ಬೆಂಗಳೂರು ನಗರ ಸೇವಾದಳದ ಅಧ್ಯಕ್ಷರಾಗಿ ಹಂತ ಹಂತವಾಗಿ ಬೆಳೆದು ಎಐಸಿಸಿ ಸದಸ್ಯ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆದವರು.

1957 ರಲ್ಲಿ ಜನಿಸಿದ ಅವರು ಮೂರು ಬಾರಿ ಶಾಸಕ, ಒಂದು ಬಾರಿ ಪರಿಷತ್ ಸದಸ್ಯರಾಗಿದ್ದರು. 2004ರಲ್ಲಿ ಅವರು ಚಾಮರಾಜಪೇಟೆ ಕ್ಷೇತ್ರವನ್ನು ಎಸ್.ಎಂ. ಕೃಷ್ಣ ಅವರಿಗೆ ಕ್ಷೇತ್ರ ಬಿಟ್ಟುಕೊಟ್ಟು ವಿಶ್ವದಾದ್ಯಂತ ಸುದ್ದಿಯಾಗಿದ್ದರು. 1989ರಲ್ಲಿ ಮೊದಲ ಬಾರಿಗೆ ಶಾಸಕರಾದ ಅವರು 2 ಬಾರಿ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಹಾಗೂ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿದ್ದರು. ಆದರೆ ಕೊನೆಯವರೆಗೆ ಅವರಿಗೆ ಸಚಿವ ಸ್ಥಾನ ಒಲಿಯಲೇ ಇಲ್ಲಾ!

1989ರಲ್ಲಿ ಚಾಮರಾಜಪೇಟೆಯಲ್ಲಿ ಮೊದಲ ಬಾರಿಗೆ ಶಾಸಕರಾದ ಅವರು 1994ರಲ್ಲಿ ಪ್ರಮೀಳಾ ನೇಸರ್ಗಿ ವಿರುದ್ಧ ಸೋತಿದ್ದರು. 1999ರಲ್ಲಿ ಪ್ರಮೀಳಾ ನೇಸರ್ಗಿ ವಿರುದ್ಧ ಗೆದ್ದು ಸೋಲಿನ ಸೇಡು ತೀರಿಸಿಕೊಂಡಿದ್ದರು. 2004 ರಲ್ಲಿ ಗೆಲ್ಲುವ ಎಲ್ಲಾ ಅವಕಾಶಗಳಿದ್ದರೂ ಎಸ್.ಎಂ. ಕೃಷ್ಣ ಅವರಿಗಾಗಿ ಚಾಮರಾಜಪೇಟೆ ಕ್ಷೇತ್ರ ಬಿಟ್ಟುಕೊಟ್ಟಿದ್ದರು. ಆಗ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಚಂದ್ರು ವಿರುದ್ಧ ಗೆದ್ದಿದ್ದರು. ಬಳಿಕ ಕೃಷ್ಣ ಮಹಾರಾಷ್ಟ್ರ ರಾಜ್ಯಪಾಲರಾಗಿ ತೆರಳಿ ರಾಜೀನಾಮೆ ನೀಡಿದರೂ ಉಪ ಚುನಾವಣೆಯಲ್ಲಿ ದೇವರಾಜ್ ಸ್ಪರ್ಧಿಸಲಿಲ್ಲ. ಬದಲಿಗೆ ಕ್ಷೇತ್ರ ಪುನರ್ ವಿಂಗಡಣೆಯಾದ ಬಳಿಕ ಚಿಕ್ಕಪೇಟೆಯಿಂದ ಸ್ಪರ್ಧಿಸಿದ್ದರು.



2008 ರಲ್ಲಿ ಚಿಕ್ಕಪೇಟೆಯಿಂದ ಸ್ಪರ್ಧಿಸಿದ್ದ ಅವರು ಡಾ. ಹೇಮಚಂದ್ರ ಸಾಗರ್ ವಿರುದ್ಧ ಸೋತಿದ್ದರು. 2013ರಲ್ಲಿ ಬಿಜೆಪಿಯ ಉದಯ್ ಗರುಡಾಚಾರ್ ವಿರುದ್ಧ ಗೆದ್ದು 2016ರಲ್ಲಿ ಕೊಳಚೆ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿದ್ದರು. ಆದರೆ, 2018 ಹಾಗೂ 2023ರ ಚುನಾವಣೆಯಲ್ಲಿ ಉದಯ್ ಗರುಡಾಚಾರ್ ವಿರುದ್ಧ ಸೋತಿದ್ದರು. ಅಂದಿನಿಂದ ಅಷ್ಟಾಗಿ ಅವರು ರಾಜ್ಯ ರಾಜಕಾರಣದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿರಲಿಲ್ಲ.

ಕಾಂಗ್ರೆಸ್ ನಲ್ಲಿ ಪ್ರಭಾವಿ ನಾಯಕನಾಗಿದ್ದ ಅರ್.ವಿ.ದೇವರಾಜ್ ಅವರು ಎಸ್.ಎಂ. ಕೃಷ್ಣ

☞ 3

# ಐದು ಪಾಲಿಕೆಗಳಲ್ಲೂ ಒಂದೇ ರೀತಿಯ 'ಆಡಳಿತ' ಇರಬೇಕು...



ಸಂಪಾದಕ
**ಎಂ. ರಾಹುಲ್**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಾಜ್ಯ ಸರ್ಕಾರವು ಕನ್ನಡ ಹೆಸರು ಬದಲಿಸಿ ಇಂಗ್ಲಿಷ್ GBA ಮಾಡಿದ್ದಲ್ಲದೆ, ಅತ್ಯಂತ ಅವೈಜ್ಞಾನಿಕವಾಗಿ 5 ನಗರ ಪಾಲಿಕೆಗಳನ್ನಾಗಿ ವಿಭಜಿಸಿರುವ ಆರಂಭದ ದಿನಗಳಲ್ಲೇ 5 ನಗರ ಪಾಲಿಕೆಗಳೂ ಸಹ ಗೊಂದಲಗಳ ಗೂಡುಗಳಾಗಿರುವುದಲ್ಲದೇ, ಪ್ರತೀ ನಗರ ಪಾಲಿಕೆಯಲ್ಲಿಯೂ 13ನೇ ಶತಮಾನದ ಹುಚ್ಚು ದೊರೆ ಮಹಮದ್ ಬಿನ್ ತುಘಲಕ್‌ನ ಆಡಳಿತದ ವೈಖರಿಯನ್ನೇ ನಾಚಿಸುವಂತಹ ಆಡಳಿತವನ್ನು ನೋಡುವ ದೌರ್ಭಾಗ್ಯ ಬೆಂಗಳೂರು ಮಹಾನಗರದ ಜನತೆಯದ್ದಾಗಿದೆ!

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ 5 ನಗರ ಪಾಲಿಕೆಗಳಲ್ಲಿ ವಾಸ್ತವವಾಗಿ ಒಂದೇ ತೆರನಾದ ಆಡಳಿತ ವ್ಯವಸ್ಥೆ ಜಾರಿಗೆ ಬರಬೇಕಿತ್ತು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಾರ್ಗದರ್ಶನದಲ್ಲಿ 5 ನಗರ ಪಾಲಿಕೆಗಳ ಆಯುಕ್ತರುಗಳು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯ ಪಾಲಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ಕಿರಿಯ ಅಧಿಕಾರಿಗಳಿಗೆ ಸಂಬಂಧಿಸಿದ 'ಅಧಿಕಾರ ಪ್ರತ್ಯಾಯೋಜನೆ'ಗಳನ್ನು ಒಂದೇ ಮಾದರಿಯಲ್ಲಿ ಹೊರಡಿಸಬೇಕಿತ್ತು.

ಆದರೆ, 'ಎತ್ತು ಏರಿಗೆ ಎಳೆಯಿತು, ಕೋಣ ನೀರಿಗೆ ಎಳೆಯಿತು' ಎನ್ನುವ ಗಾದೆಯಂತೆ, ಒಂದೊಂದು ನಗರ ಪಾಲಿಕೆಯಲ್ಲಿ ಒಂದೊಂದು ಮಾದರಿಯ ಗೊಂದಲಮಯ ಅಧಿಕಾರ ಪ್ರತ್ಯಾಯೋಜನೆಗಳು ಜಾರಿಗೆ ಬಂದಿರುವುದರಿಂದ ಅಧಿಕಾರಿಗಳು, ನೌಕರರು ಮತ್ತು ಸಾರ್ವಜನಿಕರಲ್ಲಿ ಬಹಳಷ್ಟು ಗೊಂದಲಗಳು ಉಂಟಾಗಿವೆ!

ಈ ಹಿಂದೆ ಟೆಂಡರ್ ಪ್ರಕ್ರಿಯೆಗಳ ಅನುಮೋದನೆ, ಯೋಜನೆಗಳ ಅನುಷ್ಠಾನದ ಅನುಮೋದನೆ ಹಾಗೂ ಉದ್ಯಾನವನಗಳು / ಬೀದಿ ದೀಪಗಳು / ಕೆರೆಗಳು / ರಾಜ ಕಾಲುವೆಗಳು / ಅಧಿಕಾರಿಗಳ ಕಛೇರಿಗಳ ನಿರ್ವಹಣೆ ಕಾರ್ಯಗಳಿಗೆ / ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುವ ಸಂಬಂಧದ ಕಡತಗಳಲ್ಲಿ ಪಾಲಿಕೆಯ ಆಯುಕ್ತರು ಅಂತಿಮವಾಗಿ ಒಂದು ಸಲ ಅನುಮೋದನೆ ನೀಡಿದರೆ ಸಾಕಿತ್ತು. ಆದರೆ, ವಿಚಿತ್ರ ಮತ್ತು ಹಾಸ್ಯಾಸ್ಪದ ಎಂಬಂತೆ ಈಗಿನ 05 ಪಾಲಿಕೆಗಳ ಆಯುಕ್ತರುಗಳಿಗೆ ಪ್ರತೀ ಕಡತವೂ ಸಹ ಕನಿಷ್ಠ ನಾಲ್ಕೈದು ಸಲ ರವಾನೆಯಾಗಿ ಆಯುಕ್ತರ ಸಹಿಗಳನ್ನು ಪಡೆದುಕೊಳ್ಳುವ ಪದ್ಧತಿ ಜಾರಿಗೆ ಬಂದಿದೆ!



ಅಲ್ಲದೇ, ಪಾಲಿಕೆಗಳಿಗೆ ಅತ್ಯಗತ್ಯವಾದ ನಿರ್ವಹಣೆ ಕಾರ್ಯಗಳಿಗೆ ಮತ್ತು ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುವ ಸಂಬಂಧದ ಪ್ರಕ್ರಿಯೆಗಳಲ್ಲಿ ಒಂದೊಂದು ಪಾಲಿಕೆಯಲ್ಲಿ ಒಂದೊಂದು ರೀತಿಯ ನಿಯಮಗಳು ಜಾರಿಗೆ ಬಂದಿವೆ! ಪ್ರತೀ ಪಾಲಿಕೆಯಲ್ಲಿರುವ ಅಪರ ಆಯುಕ್ತರು (ಅಭಿವೃದ್ಧಿ) ಗಳ ಅನುಮೋದನೆ ಮಿತಿಯು ಒಂದೊಂದು ಪಾಲಿಕೆಯಲ್ಲಿ ಒಂದೊಂದು ರೀತಿಯಲ್ಲಿದೆ!

ಮೂರ್ನಾಲ್ಕು ದಿನಗಳಲ್ಲಿ ಪೂರ್ಣಗೊಳ್ಳಬೇಕಾದ 'ಕಡತಗಳ ವಿಲೇವಾರಿ ಕಾರ್ಯ'ಗಳು ಮೂರ್ನಾಲ್ಕು ವಾರಗಳಾದರೂ ಸಹ ಪೂರ್ಣಗೊಳ್ಳದೇ, ಮುಖ್ಯ ಅಭಿಯಂತರರು, ಅಪರ ಆಯುಕ್ತರು (ಅಭಿವೃದ್ಧಿ) ಆಯುಕ್ತರುಗಳ ಕಛೇರಿಗಳಲ್ಲೇ ಗಿರಕಿ ಹೊಡೆಯುತ್ತಿರುವುದರಿಂದ, ಪ್ರತಿಯೊಂದು ಕಾರ್ಯವೂ ನಿಗದಿತ ಸಮಯದಲ್ಲಿ ಪೂರ್ಣಗೊಳ್ಳುತ್ತಿಲ್ಲ!

'ಒಂದು ಹುಲ್ಲು ಕಡ್ಡಿಯೂ ಸಹ ತಮ್ಮ ಅನುಮತಿ ಪಡೆದ ನಂತರವಷ್ಟೇ ಅಲುಗಾಡಬೇಕು' ಎಂಬ ಮನಸ್ಥಿತಿ ಹೊಂದಿರುವ ಒಂದಿಬ್ಬರು ಆಯುಕ್ತರುಗಳಂತೂ ತಮ್ಮ ಅಧಿಕಾರ ವ್ಯಾಪ್ತಿಯ ಪಾಲಿಕೆಗಳಲ್ಲಿ ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದಾರೆ!


5 ನಗರ ಪಾಲಿಕೆಗಳ 10 ವಲಯಗಳಲ್ಲಿರುವ KAS ಶ್ರೇಣಿಯ ಜಂಟಿ ಆಯುಕ್ತರುಗಳ ಅನುಮೋದನೆ ಕಾರ್ಯಗಳಿಗೆ ಒಂದೇ ಒಂದು ಕಡತವೂ ರವಾನೆಯಾಗುತ್ತಿಲ್ಲ ಮತ್ತು ಈ ಸಂಬಂಧದ 'ಅಧಿಕಾರ ಪ್ರತ್ಯಾಯೋಜನೆ' ಯನ್ನು ಇದುವರೆಗೂ ಯಾವೊಂದು ಪಾಲಿಕೆಯಲ್ಲೂ ಹೊರಡಿಸಿಲ್ಲ. ಪ್ರತಿ ತಿಂಗಳೂ 10 ಜಂಟಿ ಆಯುಕ್ತರುಗಳಿಗೆ ಮತ್ತವರ ಕಛೇರಿ ಸಿಬ್ಬಂದಿ ವರ್ಗದವರಿಗೆ ಹಾಗೂ ಅವರ ವಾಹನಗಳ ನಿರ್ವಹಣೆ ಮತ್ತು ಇತರೆ ಭತ್ಯೆಗಳಿಗೆಂದು ಕನಿಷ್ಠ 30 ಲಕ್ಷ ರೂ.ಗಳಷ್ಟು ಹಣ ವೆಚ್ಚವಾಗುತ್ತಿದೆ!

ಈ 10 ವಲಯಗಳ ಜಂಟಿ ಆಯುಕ್ತರುಗಳ ಸೇವೆ 5 ನಗರ ಪಾಲಿಕೆಗಳಿಗೆ ಅಗತ್ಯವಿಲ್ಲದಿದ್ದರೆ, ಅವರುಗಳನ್ನು ಸರ್ಕಾರದ ಬೇರೆ ಯಾವುದಾದರೂ ಇಲಾಖೆಗಳಿಗೆ ವರ್ಗಾವಣೆ ಮಾಡುವುದು 05 ನಗರ ಪಾಲಿಕೆಗಳ ಆರ್ಥಿಕ ಹಿತದೃಷ್ಟಿಯಿಂದ ಒಳ್ಳೆಯದು.

ಆದುದರಿಂದ, 5 ಪಾಲಿಕೆಗಳ ಆಯುಕ್ತರುಗಳು ಮತ್ತು ಅಪರ ಆಯುಕ್ತರುಗಳ ನಡುವೆ ಸಮನ್ವಯತೆ ಇಲ್ಲದೇ ಗೊಂದಲಗಳ ಗೂಡುಗಳಂತಾಗಿರುವ ಬೆಂಗಳೂರು ಮಹಾನಗರದ 5 ಪಾಲಿಕೆಗಳಲ್ಲಿ ಒಂದೇ ಮಾದರಿಯ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ 5 ನಗರ ಪಾಲಿಕೆಗಳ ಆಯುಕ್ತರು, ಅಪರ ಆಯುಕ್ತರು, ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುಗಳಿಗೆ 'ಒಂದು ದಿನದ ಕಾರ್ಯಾಗಾರ' **(Workshop)** ವನ್ನು ಆಯೋಜಿಸಿ ಸೂಕ್ತ ತರಬೇತಿ ಮಾರ್ಗದರ್ಶನ ನೀಡಬೇಕಿರುವುದು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರ ಆದ್ಯ ಕರ್ತವ್ಯವಾಗಿರುತ್ತದೆ. ಹಾಗೂ ಪ್ರಸ್ತುತ 5 ಪಾಲಿಕೆಗಳ ಆಡಳಿತ ವ್ಯವಸ್ಥೆಗಳಲ್ಲ ಉಂಟಾಗಿರುವ ಗೊಂದಲಮಯ ಸ್ಥಿತಿಯನ್ನು ಸರಿಪಡಿಸುವ ಸಲುವಾಗಿ ಎಲ್ಲ ನಗರ ಪಾಲಿಕೆಗಳಲ್ಲಿಯೂ ಒಂದೇ ಮಾದರಿಯ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವುದು ನಗರಾಭಿವೃದ್ಧಿ ಇಲಾಖೆ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ.

ಆದುದರಿಂದ ಈ ಸಂಬಂಧ ಕೂಡಲೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಗರಾಭಿವೃದ್ಧಿ ಇಲಾಖೆಯ ಘಿ ಅಪರ ಮುಖ್ಯ ಕಾರ್ಯದರ್ಶಿಗಳನ್ನು ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರನ್ನು 'ಪೊಲೀಸ್ ನ್ಯೂಸ್' ವಾರಪತ್ರಿಕೆ ಆಗ್ರಹಿಸಿತ್ತದೆ. ಬೆಂಗಳೂರು ಪ್ರಜೆಗಳಾದ ನೀವೂ ಕೂಡ ಆಗ್ರಹಿಸಬೇಕಿದೆ. ಧನ್ಯವಾದಗಳು.. **-ಸಂ.**

2 ☜ ಸರ್ಕಾರವಿದ್ದಾಗ ಹೆಚ್ಚು ಜನಪ್ರಿಯತೆ ಗಳಿಸಿದ್ದರು. ಈಗಿನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಆರ್.ವಿ. ದೇವರಾಜ್ ಇಬ್ಬರೂ ಎಸ್.ಎಂ.ಕೃಷ್ಣ ಅವರ ಎಡಗೈ, ಬಲಗೈ ಎಂಬಂತೆ ಗುರುತಿಸಿಕೊಂಡಿದ್ದರು! ಅವರ ಪಾರ್ಥಿವ ಶರೀರವನ್ನು ಮೈಸೂರಿನಿಂದ ಬೆಂಗಳೂರಿಗೆ ತಂದು ಇಂದು ಬೆಳಗ್ಗೆ ಕೆ.ಆರ್.ಮಾರುಕಟ್ಟೆಯಲ್ಲಿ ಜೆ.ಸಿ.ರಸ್ತೆ ಅವರ ಕಚೇರಿಯ ಬಳಿ (ರಾಜ್ ಹೋಟೆಲ್) ನಂತರ ಕೆ.ಆರ್.ಮಾರುಕಟ್ಟೆ ಬಳಿ ಇರುವ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.




ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ. ಪರಮೇಶ್ವರ್, ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಮತ್ತಿತರರು ಅಂತಿಮ ದರ್ಶನ ಪಡೆದಿದ್ದಾರೆ. ದೇವರಾಜ್ ಅವರ ಅಂತಿಮ ದರ್ಶನದ ವೇಳೆಯಲ್ಲಿ ಅವರ ಅಭಿಮಾನಿಗಳು, ಬೆಂಬಲಿಗರು ಎದೆ ಬಡಿದುಕೊಂಡು ಅಳುತ್ತಿದ್ದದ್ದು ಮನಕಲುಕುವಂತಿತ್ತು. ಬುಧವಾರ ಕನಕಪುರದ ಸೋಮನಹಳ್ಳಿ ಬಳಿಯ ತೋಟದ ಮನೆಯಲ್ಲಿ ದೇವರಾಜ್ ಅವರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂದಹಾಗೆ, ಆರ್.ವಿ. ದೇವರಾಜ್‌ರವರ ಪತ್ನಿ ಶ್ರೀಮತಿ ಪ್ರೇಮಾ ಜನಾನುರಾಗಿ ಮಹಿಳೆ. ತನ್ನ ಗಂಡನ ಗೆಲುವಿಗಾಗಿ ಶ್ರಮಿಸುತ್ತಿದ್ದರು. ಅವರ ಮಗ ಯುವರಾಜ್ ಸುಧಾಮನಗರದ ಕಾರ್ಪೋರೇಟರ್ ಆಗಿ ಅಪ್ಪನಂತೆಯೇ ಹೆಸರು ಮಾಡಿದ್ದಾರೆ. ನಾಳೆ ಅವರೇ ಚಿಕ್ಕಪೇಟೆಗೆ ಉತ್ತರಾಧಿಕಾರಿ ಆಗಬಹುದು. ಅಂದಹಾಗೆ, ಆರ್.ವಿ.ಡಿ. ಅವರಿಗೂ 'ಪೊಲೀಸ್ ನ್ಯೂಸ್' ಪತ್ರಿಕೆಗೂ ಅವಿನಾಭಾವ ಸಂಬಂಧವಿತ್ತು. ನಮ್ಮ ಕಚೇರಿ ಕಲಾಸಿಪಾಳ್ಯ ದೊಡ್ಡಣ್ಣ ಶೆಟ್ಟರ ಕಾಂಪ್ಲೆಕ್ಸ್‌ನಲ್ಲಿತ್ತು. ಅಲ್ಲಿ ಆರ್.ವಿ.ಡಿ. ಅವರ ಕಚೇರಿಯೂ ಇತ್ತು. ಹತ್ತಿರದ ಕೋಟೆಯಲ್ಲಿ ಅವರ ಮನೆ... ನಾವು ಅಲ್ಲಿಗೆ ಆಗಾಗ ಹೋಗಿ ಬರುತ್ತಿದ್ದವು. ಅವರು ಕೂಡ ನಮ್ಮ ಕಚೇರಿಗೆ ಬಂದು ಹೋಗುತ್ತಿದ್ದರು. ಸುದ್ದಿ ವಿಚಾರ ಏನೇ ಇರಲಿ, ಅವರಿಗೂ ನಮಗೂ ಒಂದು ದಿನವೂ ಮನಸ್ತಾಪ ಏರ್ಪಡಲಿಲ್ಲ. ಕಲಾಸಿಪಾಳ್ಯ, ಕೆ.ಆರ್. ಮಾರುಕಟ್ಟೆ, ಸುಧಾಮನಗರ, ಸೋಮೇಶ್ವರನಗರ, ಸಂಪಂಗಿರಾಮನಗರ, ಮುಂತಾದ ಏರಿಯಾಗಳಲ್ಲಿ ರೌಡಿಗಳ ಕೊಲೆಯಾದಾಗ ನಾವು ವಸ್ತುನಿಷ್ಠ ವರದಿಯನ್ನೇ ಮಾಡುತ್ತಿದ್ದೆವು. ಪತ್ರಿಕೆಯನ್ನು ಗಮನಿಸುತ್ತಿದ್ದ ಆರ್.ವಿ.ಡಿ. ಇದು ಸರಿ ಅಥವಾ ತಪ್ಪು ಅಂತ ಒಮ್ಮೆಯೂ ಹೇಳಲಿಲ್ಲ. ಪತ್ರಿಕೆಗೆ ಅವರು ಕೊಡುತ್ತಿದ್ದ ಗೌರವ ಅದಾಗಿತ್ತು. ನಮಗಿದ್ದ ಕೊರಗು ಒಂದೇ... ಒಂದು ಕಾಲದಲ್ಲಿ ಚಾಮರಾಜಪೇಟೆಯ ಶಾಸಕರಾಗಿ ಅಕ್ಷರಶಃ ಮಿಂಚುತ್ತಿದ್ದ ಆರ್.ವಿ.ಡಿ. ಯವರು ಚಿಕ್ಕಪೇಟೆ ಕ್ಷೇತ್ರ ಕಾಲಿಟ್ಟ ಬಳಿಕ ಸೈಲೆಂಟಾಗಿಯೇ ಉಳಿದುಬಿಟ್ಟರು. ಎಂದಿಗೂ ವೈಲೆಂಟ್ ಆಗಲೇ ಇಲ್ಲ. ಆದರೆ ಜನಾನುರಾಗಿ. ಅವರ ಕಚೇರಿ ಸದಾ ತುಂಬಿರುತ್ತಿತ್ತು. ಎಂದಿನಂತೆ ಊಟೋಪಚಾರ ನಿರಂತರ. ಗೆಳೆಯರ ಪಾಲಿಗೆ ಅನ್ನದಾತರಾಗಿಯೇ ಉಳಿದು 67ನೇ ಹುಟ್ಟುಹಬ್ಬದ ಸಂಭ್ರಮದಲ್ಲಿಯೇ ಮರಳಿ ಬಾರದ ಲೋಕಕ್ಕೆ ತೆರಳಿಬಿಟ್ಟರು. ಏನಿವೇ, ಧೀಮಂತ ರಾಜಕಾರಣಿ ಆರ್.ವಿ.ಡಿ. ಅವರ ಆತ್ಮಕ್ಕೆ ಶಾಂತಿ ದೊರಕಲಿ....

**-ಪೊಲೀಸ್ ನ್ಯೂಸ್ ಪತ್ರಿಕಾ ಬಳಗ**

## ಸಂಜೀವಾಣಿ ಶಿವಣ್ಣ ಇನ್ನಿಲ್ಲ

ಅದು ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲ. ಒಂದು ಮಧ್ಯಾಹ್ನ 12ಕ್ಕೆ ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿ. ಎಲ್ಲಾ ಮೀಡಿಯಾದವರು ಕಾಯ್ತಿದ್ರು, ಎಸ್‌ಎಂಕೆ ಬಂದ್ರು. ಮಾಮೂಲಿ ಆಗಿ ಮಾತುಕತೆ ಶುರು ಮಾಡಿದ್ರು, ಆದ್ರೆ ಪ್ರೆಸ್ ಮೀಟ್ ಮಾತ್ರ ಶುರು ಆಗ್ಲಿಲ್ಲ ಕಡೆಗೆ, ಅಲ್ಲಿದ್ದ ಪತ್ರಕರ್ತರೇ 'ಸರ್ ಎಲ್ರೂ ಬಂದಿದ್ದಾರೆ, ಪ್ರೆಸ್ ಮೀಟ್ ಆರಂಭಿಸಿ' ಅಂದ್ರು. ಆವಾಗ, ಒಂದೆರಡು ನಿಮಿಷ, ಶಿವಣ್ಣ (ಸಂಜೀವಾಣಿ) ಇಲ್ಲೇ ಲಿಫ್ಟ್‌ನಲ್ಲಿದ್ದಾರೆ, ಬಂದ್‌ಬಿಡ್ಲಿ ಅಂದ್ರು ಸಾಹೇಬ್ರು.



'ಸರ್, ಪ್ರಜಾವಾಣಿ ಸೇರಿದಂತೆ ಎಲ್ರೂ ಇದ್ದಾರೆ' ಅಂತ ರಾಗ ಎಳೆದ್ರು, ಅಲ್ಲಿದ್ದ ಒಬ್ಬರು! 'ನಿಮ್ ಪೇಪರಲ್ಲಿ ಅಚ್ಚಾಗಬೇಕು ಅಂದ್ರೆ, ಬೆಳಿಗ್ಗೆ ತನಕ ಕಾಯಬೇಕು. ಶಿವಣ್ಣ ಬಂದ್ರೆ, ಸಂಜೆವಾಣಿಯಲ್ಲಿ ಮಧ್ಯಾಹ್ನವೇ ಪಬ್ಲಿಷ್ ಆಗುತ್ತೆ ಅಂದ್ರು ಕೃಷ್ಣ! ಆಗಿನ್ನು ಇಷ್ಟು ಚಾನಲ್‌ಗಳಿರಲಿಲ್ಲ. ಇದ್ದದ್ದು ಉದಯ-ಚಂದನ ಎರಡೇ. ಈ ಸತ್ಯ ಅರಿತಿದ್ದ ಕೃಷ್ಣ ಸಾಹೇಬ್ರು, ಸಂಜೀವಾಣಿ ಶಿವಣ್ಣ ಅವರ ಬರುವಿಕೆಗೆ ಕಾಯುತ್ತಿದ್ದರು. ಇದೇ ಪ್ರಿಂಟ್ ಮೀಡಿಯಾ ತಾಖತ್ತು... ಅಂದಂಗೆ ಕೊಲು ಮೂಗಿನ ಅಣ್ಣ 'ಅ.ಚ. ಶಿವಣ್ಣ' ಇನ್ನಿಲ್ಲ! ಅವರ ದಿವ್ಯಾತ್ಮಕ್ಕೆ ಶಾಂತಿ ಸಿಗಲಿ.



**ಕಳೆದ ಒಂದು ತಿಂಗಳಿನಿಂದ ತಾರಕಕ್ಕೇರಿದ್ದ ಸಿಎಂ ಪಟ್ಟದ ಆಟಕ್ಕೆ ಸದ್ಯಕ್ಕೆ ವಿರಾಮ ಬಿದ್ದಂತೆ ಗೋಚರಿಸುತ್ತಿದೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಬ್ರೇಕ್ ಪಾಸ್ಟ್ ಮೀಟಿಂಗ್ ನಡೆಸಿದ್ದು ಅದಾದ ನಂತರದ ಅವರ ವರ್ತನೆ ಮತ್ತು ಹೇಳಿಕೆಗಳು ಸಿಎಂ ಪಟ್ಟಕ್ಕಾಗಿ ನಡೆಯುತ್ತಿರುವ ಕದನಕ್ಕೆ ತಾತ್ಕಾಲಿಕ ವಿರಾಮ ಬಿದ್ದಂತೆ ಕಾಣಿಸುತ್ತಿದೆ. ಆದರೆ ಇದು ಇಲ್ಲಿಗೆ ಮುಗಿದು ಹೋಗುತ್ತಾ? ಖಂಡಿತಾ ಇಲ್ಲ...**

# ರಾಜ್ಯದಲ್ಲಿ ಸಿಎಂ ಪಟ್ಟದ ಆಟಕ್ಕೆ ತಾತ್ಕಾಲಿಕ ವಿರಾಮ?

✍ಬಿ.ಎಂ. ಲವಕುಮಾರ್

ರಾಜ್ಯದಲ್ಲಿ ಸಿಎಂ ಪಟ್ಟದ ಆಟದಲ್ಲಿ ಯಾರು ಗೆಲ್ಲುತ್ತಾರೋ ಸೋಲುತ್ತಾರೋ ಮುಖ್ಯವಲ್ಲ ಆದರೆ ಇದರ ಪರಿಣಾಮಗಳನ್ನು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಎದುರಿಸಬೇಕಾಗುತ್ತದೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಮುಂದೆ ಬರಲಿರುವ ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಕಾಂಗ್ರೆಸ್ ಎದುರಿಸಬೇಕಾಗಿದೆ. ಹೀಗಾಗಿ ಕರ್ನಾಟಕದಲ್ಲಿ ಕಾಂಗ್ರೆಸ್ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರದತ್ತ ಇಡೀ ದೇಶ ಎದುರು ನೋಡುತ್ತಿದ್ದು ಇದೊಂದು ಸವಾಲ್ ಎನ್ನುವುದರಲ್ಲಿ ಎರಡು ಮಾತಿಲ್ಲ.

ಅಧಿಕಾರವೇ ಹಾಗೆ... ಅದೊಂದು ರೀತಿಯ ಅಮಲಿನಂತೆ ಅದನ್ನು ಅಷ್ಟು ಸುಲಭವಾಗಿ ಕಳೆದುಕೊಳ್ಳಲು ತಯಾರಿಲ್ಲ. ಜತೆಗೆ ಅದನ್ನು ಬಿಟ್ಟುಕೊಡುವುದು ಸುಲಭವಲ್ಲ. ಇತಿಹಾಸದ ತುಂಬಾ ಅಧಿಕಾರಕ್ಕಾಗಿ ನಡೆದ ಕಾಳಗಗಳನ್ನು ನಾವು ನೋಡಿದ್ದೇವೆ. ಅಷ್ಟೇ ಏಕೆ ಬಿಜೆಪಿ ಜೆಡಿಎಸ್ ಸಮ್ಮಿಶ್ರ ಸರ್ಕಾರವಾಗಿ ಟ್ವೆಂಟಿ, ಟ್ವೆಂಟಿ ಆಡಳಿತ ನಡೆಸಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಅವರು ಒಪ್ಪಂದದಂತೆ ಅಧಿಕಾರವನ್ನು ತಮ್ಮ ಅಧಿಕಾರವಧಿಯ ನಂತರ ಯಡಿಯೂರಪ್ಪ ಅವರಿಗೆ ಬಿಟ್ಟುಕೊಡದೆ ವಚನಭ್ರಷ್ಟ ಹಣೆಪಟ್ಟಿಕಟ್ಟಿಕೊಂಡಿದ್ದು ನಮ್ಮ ಮುಂದೆಯೇ ಇದೆ.



ಇದೆಲ್ಲವನ್ನು ಗಮನಿಸಿದಾಗ ಇದೀಗ ಸಿದ್ದರಾಮಯ್ಯ ಅವರು ತಮ್ಮ ಪಟ್ಟವನ್ನು ಹಸ್ತಾಂತರ ಮಾಡಲು ಒಪ್ಪದೆ ಇರುವುದರಲ್ಲಿ ಅಚ್ಚರಿಯೇನು ಇಲ್ಲ. ಇನ್ನು ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಬಹುಮತ ಪಡೆಯಲು ಬಿಜೆಪಿಯಲ್ಲಾದ ಎಡವಟ್ಟುಗಳು ಅವತ್ತು ಬಿಜೆಪಿ ಹೈಕಮಾಂಡ್ ಮಾಡಿದ ಮಣ್ಣು ತಿನ್ನುವ ಕೆಲಸಗಳೇ ಕಾರಣ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಯಡಿಯೂರಪ್ಪ ಅವರನ್ನು ಪಟ್ಟದಿಂದ ಕೆಳಗಿಳಿಸಿ ಬಸವರಾಜ ಬೊಮ್ಮಾಯಿ ಅವರನ್ನು ಪಟ್ಟದ ಮೇಲೆ ಕೂರಿಸಲಾಯಿತು.




ಯಾವಾಗ ಯಡಿಯೂರಪ್ಪನವರು ಕಣ್ಣೀರಿಡುತ್ತಾ ಅಧಿಕಾರ ಬಿಟ್ಟುಕೊಟ್ಟರೋ ಅದನ್ನು ನೋಡಿದ ಜನ ಅದರಲ್ಲೂ ಲಿಂಗಾಯಿತರು ಬಿಜೆಪಿ ವಿರುದ್ಧ ತಿರುಗಿ ಬಿದ್ದರು. ಅದರ ಪರಿಣಾಮಗಳು 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಯಶಸ್ಸು ಪಡೆಯಲು ಕಾರಣವಾಯಿತು. ಅವತ್ತು ಕೇವಲ ಲಿಂಗಾಯಿತ ಸಮುದಾಯವೊಂದು ತಿರುಗಿ ಬಿದ್ದಿದ್ದರಿಂದ ಬಿಜೆಪಿ ಇನ್ನಿಲ್ಲದ ನಷ್ಟ ಅನುಭವಿಸಿತು. ಅದರ ಪರಿಣಾಮಗಳು ಅಲ್ಪ ಮಟ್ಟದಲ್ಲಿ ಲೋಕಸಭೆ ಚುನಾವಣೆಯಲ್ಲಿಯೂ ಆಯಿತು ಎನ್ನುವುದು ಸತ್ಯವೇ.. ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಳ್ಳದೆ ಹೋಗಿದ್ದರೆ ಇನ್ನಷ್ಟು ಕಷ್ಟ ನಷ್ಟ ಅನುಭವಿಸಬೇಕಾಗುತ್ತಿತ್ತೇನೋ?

ಇಲ್ಲಿ ಇದೆಲ್ಲ ಏಕೆ ಹೇಳಬೇಕಾಯಿತೆಂದರೆ ಕೆಲವೊಮ್ಮೆ ದೆಹಲಿಯಲ್ಲಿ ಕುಳಿತು ಭಟ್ಟಂಗಿಗಳ ಮಾತು ಕೇಳಿ ನಿರ್ಧಾರ ತೆಗೆದುಕೊಳ್ಳುವ ಹೈಕಮಾಂಡ್ ಸ್ವಲ್ಪ ಎಡವಟ್ಟು ಮಾಡಿದರೂ ಅದಕ್ಕೆ ಕಂದಾಯ ಕಟ್ಟಬೇಕಾಗುತ್ತದೆ ಎಂಬುದನ್ನು ನೆನಪಿಸಲಷ್ಟೇ. ಬಿಜೆಪಿ ಯಡಿಯೂರಪ್ಪ ಅವರನ್ನು ಇಳಿಸಿ ಬಸವರಾಜ ಬೊಮ್ಮಾಯಿಯನ್ನು ಸಿಎಂ ಮಾಡಿ ಡ್ಯಾಮೇಜ್ ಕಂಟ್ರೋಲ್ ಮಾಡುವ ಕಸರತ್ತು ಮಾಡಿತ್ತಾದರೂ ಅದು ಫಲ ಕೊಡಲಿಲ್ಲ. ಅದಕ್ಕಿಂತ ಹೆಚ್ಚಾಗಿ ರಾಜ್ಯ ಬಿಜೆಪಿಯಲ್ಲಿದ್ದ ಭಿನ್ನಮತವನ್ನು ಶಮನಮಾಡುವ ಕೆಲಸವನ್ನು ಹೈಕಮಾಂಡ್ ಮಾಡಲೇ ಇಲ್ಲ. ಆ ಭಿನ್ನಮತ ಇವತ್ತಿಗೂ ಬಿಜೆಪಿಯಲ್ಲಿ ಮುಂದುವರೆದಿದೆ. ಸದ್ಯ ಬಿಜೆಪಿ ಮನೆಯೊಂದು ಮೂರು ಬಾಗಿಲಾಗಿ ಕರ್ನಾಟಕದಲ್ಲಿ ಮುನ್ನಡೆಯುತ್ತಿದೆ.

ಇಲ್ಲಿ ಅಚ್ಚರಿಪಡಬೇಕಾದ ವಿಷಯವೇನೆಂದರೆ ಕಾಂಗ್ರೆಸ್ ಪಟ್ಟದ ಗುದ್ದಾಟದ ಕಡೆಗೆ ಇಡೀ ರಾಜ್ಯ ಮುಖ ಮಾಡಿದ್ದು, ಜನರ ಜತೆಗೆ ಸೇರಿ ಬಿಜೆಪಿ ಕೂಡ ತಮ್ಮ ತೂತು ದೊಡ್ಡದೇ ಇದ್ದರು ಅದನ್ನು ಮುಚ್ಚಿಕೊಳ್ಳದೆ ಕಾಂಗ್ರೆಸ್ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದೆ. ತಮ್ಮಲ್ಲಿ ರಾಜ್ಯಾಧ್ಯಕ್ಷ ಸ್ಥಾನಕ್ಕಾಗಿ ದೊಡ್ಡ ಮಟ್ಟದಲ್ಲಿ ಗುದ್ದಾಟ ನಡೆಯುತ್ತಿದ್ದರೂ ಸಿಎಂ ಪಟ್ಟದ ಫೈಟ್ ನಲ್ಲಿ ಮೂಗು ತೂರಿಸಿ ಖುಷಿ ಪಡುತ್ತಿದೆ. ಇಷ್ಟಕ್ಕೂ ವಿಜಯೇಂದ್ರ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವುದು ಬಿಜೆಪಿಯ ಹೆಚ್ಚಿನ ನಾಯಕರಿಗೆ ಇಷ್ಟವಿಲ್ಲ. ಹೀಗಾಗಿ ತನ್ನ ಸ್ಥಾನ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿರುವ ವಿಜಯೇಂದ್ರ ಅವರಿಗೆ ಮೊದಲು ತಮಗೆಷ್ಟು ಬೆಂಬಲವಿದೆ ಎನ್ನುವುದನ್ನು ಬಹಿರಂಗಗೊಳಿಸುವುದು ಒಳ್ಳೆಯದೇ. ಒಂದು ವೇಳೆ ಹಠಕ್ಕೆ ಬಿದ್ದು ಅಧ್ಯಕ್ಷ ಸ್ಥಾನ ಉಳಿಸಿಕೊಂಡರೂ ಎಲ್ಲ ನಾಯಕರನ್ನು ಒಟ್ಟುಗೂಡಿಸಿ ಪಕ್ಷ ಕಟ್ಟುವುದು ಸುಲಭವಾಗಿ ಉಳಿದಿಲ್ಲ.

ಕಳೆದ ಕೆಲವು ದಿನಗಳಿಂದ ಕಾಂಗ್ರೆಸ್ ನಲ್ಲಿ ಪಟ್ಟದ ಆಟವನ್ನು ಜನ ನೋಡಿ ಸುಸ್ತಾಗಿದ್ದಾರೆ. ಡಿಕೆಶಿ ಮತ್ತು ಸಿದ್ದು ಅವರ ಪೋಸ್ಟ್ ವಾರು ಅವರ ಬೆಂಬಲಿಗರ ಹೇಳಿಕೆಗಳು, ಅದರಾಚೆಗೆ ಸ್ವಾಮೀಜಿಗಳು, ಸಮುದಾಯದ ಮುಖಂಡರು ಹೀಗೆ ಎಲ್ಲರೂ ತಮಗೆ ತೋಚಿದಂತೆ ಹೇಳಿಕೆಗಳನ್ನು ನೀಡುವ ಮೂಲಕ ಕಾಂಗ್ರೆಸ್ ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಜಗಜ್ಜಾಹೀರು ಮಾಡಿದ್ದಾರೆ. ಇಷ್ಟೆಲ್ಲ ನಡೆಯುವ ಮುನ್ನವೇ ಇದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸಬೇಕಾದ ಹೈಕಮಾಂಡ್‌ನ ಸುಪ್ರೀಂ ನಾಯಕರಾದ ರಾಹುಲ್ ಗಾಂಧಿಯವರು ವಿದೇಶ ಪ್ರವಾಸದಲ್ಲಿ ಬಿಸಿಯಾಗಿದ್ದರು. ಈ ನಡುವೆ ಅವರು ಸ್ವದೇಶಕ್ಕೆ ಮರಳಿದ್ದು ತಕ್ಷಣವೇ ಎಲ್ಲದಕ್ಕೂ ಅವರು ವಿರಾಮ ಹೇಳಿ ಬಿಡುತ್ತಾರೆ ಎಂದುಕೊಂಡರೆ ಅದು ಸಾಧ್ಯವೇ ಇಲ್ಲ.

ಇನ್ನು ಕರ್ನಾಟಕದಲ್ಲಾಗುತ್ತಿರುವ ಬೆಳವಣಿಗೆಗಳು ರಾಷ್ಟ್ರಸುದ್ದಿಗಳಾಗಿ ಬಿಂಬಿತವಾಗುತ್ತಿರುವುದರಿಂದ ಈಗಾಗಲೇ ಬಿಹಾರ ಚುನಾವಣೆಯಲ್ಲಿ ಮುಖಭಂಗ ಅನುಭವಿಸಿರುವ ಕಾಂಗ್ರೆಸ್ ಗೆ ಇದೊಂದು ಮುಜುಗರವೂ ಹೌದು ಹೀಗಾಗಿಯೇ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ಎಚ್ಚರಿಕೆ ಸಂದೇಶ ರವಾನಿಸಿ ಇಬ್ಬರು ಮಾತನಾಡಿಕೊಂಡು ಒಮ್ಮತಕ್ಕೆ ಬನ್ನಿ ಎಂಬ ಸೂಚನೆ ನೀಡಿದ್ದಾರೆ. ಅದರಂತೆ ಶನಿವಾರ(ನ.29) ಸಿದ್ದರಾಮಯ್ಯ ಅವರ ಮನೆಗೆ ಉಪಹಾರಕ್ಕೆ ತೆರಳಿದ ಡಿಸಿಎಂ ಡಿ.ಕೆ.ಶಿವಕುಮಾರ್ ಇಬ್ಬರು ಉಪಹಾರದ ಜತೆಗೆ ಮಾತುಕತೆ ನಡೆಸಿದ್ದಾರೆ. ಈ ಮಾತುಕತೆ ಗೌಪ್ಯವಾಗಿ ನಡೆದಿದ್ದು, ಇದರಲ್ಲಿ ಯಾವ ರೀತಿಯ ಒಮ್ಮತಕ್ಕೆ ಬಂದಿದ್ದಾರೆ ಎನ್ನುವುದು ಗೊತ್ತಿಲ್ಲ.



ಇಲ್ಲಿ ಮುಖ್ಯವಾಗಿ ರಾಜ್ಯದ ಜನರಿಗೆ ನಮ್ಮ ನಡುವೆ ಯಾವುದೇ ಗೊಂದಲವಿಲ್ಲ ನಾವಿಬ್ಬರೂ ಒಗ್ಗಟ್ಟಾಗಿಯೇ ಇದ್ದೇವೆ ಎಂಬುದನ್ನು ತೋರಿಸುವ ಸಲುವಾಗಿ ಉಪಹಾರದ ನಂತರ ಜಂಟಿಸುದ್ದಿಗೋಷ್ಠಿ ನಡೆಸಿ ಮಾಧ್ಯಮದ ಮುಂದೆ ಒಗ್ಗಟ್ಟಿನ ಮಂತ್ರ ಪಠಿಸಿದ್ದಾರೆ. ಅನಗತ್ಯವಾಗಿ ಕೆಲವು ಗೊಂದಲ ಉಂಟಾಗಿದೆ. ಅದನ್ನು ತಿಳಿಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇಬ್ಬರೂ ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ ಎಂದು ಹೇಳುವ ಮೂಲಕ ಕಳೆದ ಕೆಲವು ದಿನಗಳಿಂದ ರಾಜ್ಯದಲ್ಲಿ ಉಂಟಾಗಿದ್ದ ಕುರ್ಚಿ ಕದನಕ್ಕೆ ಬ್ರೇಕ್ ಹಾಕಿದ್ದೇವೆ ಎಂಬ ಸಂದೇಶವನ್ನು ರವಾನಿಸಿದ್ದಾರೆ.




ಇಲ್ಲಿ ಅಧಿಕಾರ ಹಸ್ತಾಂತರದ ಕುರಿತ ಮಾತನಾಡದೆ ಬೇರೆಡೆಗೆ ಗಮನಸೆಳೆಯುವ ಪ್ರಯತ್ನ ಮಾಡಿರುವುದು ಗೋಚರಿಸಿದೆ. ಅನಗತ್ಯವಾಗಿ ಒಂದು ತಿಂಗಳಿನಿಂದ ಗೊಂದಲ ನಿರ್ಮಾಣವಾಗಿದೆ. ಹೀಗಾಗಿ ಇಬ್ಬರೇ ಕೂತು ಮಾತನಾಡಿದ್ದೇವೆ. ನಮಗೆ 2028ರ ಚುನಾವಣೆ ಮುಖ್ಯ, ಸ್ಥಳೀಯ ಚುನಾವಣೆ ಮುಖ್ಯ. ಅದರ ಬಗ್ಗೆಯೂ ಚರ್ಚೆ ಮಾಡಿದ್ದೇವೆ. 2028ರಲ್ಲಿ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತರಬೇಕು. ಅದು ಮುಖ್ಯ. ಇಬ್ಬರೂ ಸೇರಿ 2023ರ ವಿಧಾನಸಭೆ ಚುನಾವಣೆಗೆ ಒಟ್ಟಿಗೆ ಕೆಲಸ ಮಾಡಿದ್ದೇವೋ ಹಾಗೆ ಮುಂದೆಯೂ

☞13

# ಪತ್ರಕರ್ತನ ವೇಷದ ವಂಚಕ 'ಕಣ್ಣು' ಶಿವಕುಮಾರ್ ಅರೆಸ್ಟ್!

**'ಕಣ್ಣು' ಎಂಬ ಪತ್ರಿಕೆ ಇಟ್ಟುಕೊಂಡು ಕಲಬೆರಕೆ ಸುದ್ದಿ ಮಾಡಿಕೊಂಡು ಸಮಾಜವನ್ನು ವಂಚಿಸುತ್ತಿದ್ದ ಶಿವಕುಮಾರ್, ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್‌ಅಂತೊಂದು ಸಂಘಟನೆ ಮಾಡಿಕೊಂಡು ಅದರ ಮೂಲಕವೂ ಅಮಾಯಕರ ದುಡ್ಡು ದೋಚುತ್ತ ಬಂದಿದ್ದ! ಇಂಥ ಫ್ರಾಡ್ ಕಣ್ಣು, ಪ್ರೆಸ್ ಕೌನ್ಸಿಲ್ ಮಹಿಳಾ ರಾಜ್ಯಾಧ್ಯಕ್ಷೆ ಹುದ್ದೆಯಲ್ಲಿ ಕೂರಿಸುತ್ತೇನೆ ಮತ್ತು ವಿದೇಶದಲ್ಲಿ ನಡೆಯಲಿರುವ ವಿಶ್ವ ಕನ್ನಡ ಹಬ್ಬಕ್ಕೆ ನಿರ್ದೇಶಕಿಯನ್ನಾಗಿ ಮಾಡುತ್ತೇನೆ ಎಂದು ನಂಬಿಸಿ ಮಹಿಳೆಯೊಬ್ಬರಿಂದ ಲಕ್ಷಾಂತರ ರೂ. ಪೀಕಿಕೊಂಡು ಕೇಸ್ ಹೆಟ್ಟಿಸಿಕೊಂಡಿದ್ದಾನೆ! ಡಿಸಿಪಿ ಎಸ್. ಗಿರೀಶ್, ಎಸಿಪಿ ಚಂದನ್ ಕುಮಾರ್ ನೇತೃತ್ವದಲ್ಲಿ ತನಿಖೆ ನಡೆದು ಗೋವಿಂದರಾಜನಗರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಸುಬ್ರಮಣಿ ಮಸ್ಕತ್‌ಗೆ ಎಸ್ಕೇಪ್ ಆಗಲು ಏರ್ ಪೋರ್ಟ್‌ಗೆ ತೆರಳಿದ್ದ ಫ್ರಾಡ್ ಶಿವಕುಮಾರ್‌ನನ್ನು ಅಲ್ಲೇ ಬಂಧಿಸಿದ್ದಾರೆ!**


ಆರೋಪಿ ಶಿವಕುಮಾರ್

ಈ ಘಟನೆ ಪತ್ರಿಕಾ ರಂಗವನ್ನೇ ಕಲುಷಿತ ಮಾಡಿಕೊಂಡು ಕಚಡಾ ಬಾಳ್ವೆ ನಡೆಸುವ ಪೀತ ಪತ್ರಕರ್ತರಿಗೆ ದೊಡ್ಡಪಾಠ ದಂತಿದೆ!ಇಂಥ ಫ್ರಾಡ್ ಗಳಿಂದಲೇ ಸಮಾಜದಲ್ಲಿ ನ್ಯಾಯವಂತ ಪತ್ರಕರ್ತರಿಗೂ ಬೆಲೆ ಇಲ್ಲದಂತಾಗಿದೆ! ಸೋ, ಪ್ರಜ್ಞಾವಂತ ಪತ್ರಕರ್ತರು ಏನಮಾಡಬೇಕು ಅಂದ್ರೆ, ಇಂಥ ಕಚಡಾಗಳನ್ನು ಸಮಾಜದ ಮುಂದೆ ಬೆತ್ತಲೆ ಮಾಡಬೇಕು! ಬೆತ್ತಲೆ ಮಾಡುವ ಪ್ರಜೆಗಳಿಗೆ ಮತ್ತು ನಿಷ್ಠಾವಂತ ಪೊಲೀಸ್ ಅಧಿ ಕಾರಿಗಳ ಬೆನ್ನಿಗೆ ನಿಲ್ಲಬೇಕು!



ವಿಷಯಕ್ಕೆ ಬರೋಣ. ವಿಜಯ ನಗರದ ಅಮರಜ್ಯೋತಿನಗರದ ನಿವಾಸಿ, ಕಣ್ಣು ಪತ್ರಿಕೆ ಸಂಪಾದಕ ಹಾಗೂ ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಶಿವಕುಮಾರ್ ನಾಗರನವಿಲೆ, ಹೊಂಗಸಂದ್ರ, ಮುಖ್ಯ ರಸ್ತೆಯಲ್ಲಿನ ನ್ಯೂ ಮೈಕೋ ಲೇಔಟ್ ನಿವಾಸಿ ಬಿ. ಮೀನಾಕ್ಷಿ ಎಂಬುವರಿಗೆ ಲಕ್ಷಾಂತರ ರೂ ವಂಚನೆ ಮಾಡಿದ್ದು, ಆಕೆ ನೀಡಿರುವ ದೂರಿನನ್ವಯ ಆರೋಪಿಯನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ!

ಆರೋಪಿ ಶಿವಕುಮಾರ್ ವಿರುದ್ಧ ಕಳೆದ ನವೆಂಬರ್ 13 ರಂದು ಆ ಮಹಿಳೆ ಡಿಸಿಪಿ ಗಿರೀಶ್, ಎಸಿಪಿ ಚಂದನ್ ಅವರನ್ನು ಸಂಪರ್ಕಿಸಿ, ಅವರ ಮಾರ್ಗದರ್ಶನದಲ್ಲಿ ದೂರು ನೀಡಿದ್ದರು. ಗೋವಿಂದರಾಜ ನಗರದ ಪೊಲೀಸರು ಆರೋಪಿಗೆ ಲುಕ್‌ಔಟ್ ನೋಟಿಸ್ ಜಾರಿ ಮಾಡಿದ್ದರು. ಆದರೆ ಕಣ್ಣು ಶಿವಕುಮಾರ್ ವಿಚಾರಣೆಗೆ ಹಾಜರಾಗದೆ ಪೊಲೀಸರ ಕಣ್ಣು ತಪ್ಪಿಸಿ ಗುರುವಾರ ರಾತ್ರಿ ವಿದೇಶಕ್ಕೆ ಪರಾರಿಯಾಗಲು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಿದ್ದ! ಈ ಮಾಹಿತಿಯನ್ನು ಸಂಪಾಧಿಸಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಸುಬ್ರಮಣಿ ಆರೋಪಿ ಶಿವಕುಮಾರ್‌ನನ್ನು ಏರ್ ಪೋರ್ಟ್ ನಲ್ಲೇ ಎಡಮುರಿ ಕಟ್ಟಿ ಬಂಧಿಸಿದ್ದಾರೆ!

**ಸಂಕ್ಷಿಪ್ತ ವಿವರ ಇಂತಿದೆ...**

ಕಣ್ಣು ಎಂಬ ಪತ್ರಿಕೆ ನಡೆಸೋ

**ಬೆಂಗಳೂರು**
**ಹೆಚ್.ಕೆ. ಮಹದೇವ್**

ಹುಣ್ಣು ಶಿವಕುಮಾರ್ ತನ್ನನ್ನು ತಾನು ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷನೆಂದು ದೂರು ದಾರೆ ಶ್ರೀಮತಿ ಮೀನಾಕ್ಷಿ ಅವರಿಗೆ ಪರಿಚಯಿಸಿಕೊಂಡಿದ್ದಾನೆ. ತಾನು ವಿದೇಶಗಳಲ್ಲಿ 'ವಿಶ್ವ ಕನ್ನಡ ಹಬ್ಬ' ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುತ್ತೇನೆ ಎಂದು ಸಹ ಹೇಳಿಕೊಂಡಿದ್ದಾನೆ! ನಿಮ್ಮನ್ನು ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್‌ನ ಮಹಿಳಾ ರಾಜ್ಯಾಧ್ಯಕ್ಷೆ ಹಾಗೂ ಸಿಂಗಾಪುರದಲ್ಲಿ ಆಯೋಜಿಸುವ 2024ರ 2ನೇ ಆವೃತ್ತಿಯ ವಿಶ್ವ ಕನ್ನಡ ಹಬ್ಬಕ್ಕೆ ನಿಮ್ಮನ್ನು ನಿರ್ದೇಶಕಿಯನ್ನಾಗಿ ಮಾಡುತ್ತೇನೆ ಎಂದು ನಂಬಿಸಿದ್ದಾನೆ!

ಇದಕ್ಕಾಗಿ, ಆರಂಭದಲ್ಲಿ 11 ಸಾವಿರ ರು. ಪಡೆದಿದ್ದ ಆರೋಪಿ ನಂತರ ಸಚಿವ ಶಿವರಾಜ್ ತಂಗಡಗಿ ಅವರಿಂದ ಆದೇಶ ಪತ್ರ ಕೊಡಿಸುವುದಾಗಿ ಮತ್ತೆ 20 ಸಾವಿರ ರೂ. ಪಡೆದುಕೊಂಡಿದ್ದಾನೆ! ಬಳಿಕ ವಿಶ್ವ ಕನ್ನಡ ಹಬ್ಬದ ಖರ್ಚುಗಳಿಗಾಗಿ ಹಂತಹಂತವಾಗಿ ಶ್ರೀಮತಿ ಮೀನಾಕ್ಷಿ ಹಾಗೂ ಇತರರಿಂದ ಒಟ್ಟು 20 ಲಕ್ಷಕ್ಕೂ ಹೆಚ್ಚು ಹಣ ಪಡೆದಿದ್ದಾನೆ! ವಿಶೇಷವೇನೆಂದರೆ, ಹಾಗೆ ಅವರಿಂದ ಪಡೆದುಕೊಂಡ ಹಣವನ್ನ ಶೀಘ್ರದಲ್ಲೇ ಹಿಂದಿರುಗಿಸುವುದಾಗಿ ಪ್ರಾಮಿಸ್ ಮಾಡಿದ್ದನಂತೆ! ದೂರುದಾರೆ ಮೀನಾಕ್ಷಿ ತನ್ನ ಮಾವನ ಚಿಕಿತ್ಸೆಗೆ ಕೂಡಿಟ್ಟಿದ್ದ ಹಣ ಮಾತ್ರವಲ್ಲದೆ, ಮಾಂಗಲ್ಯಸರ ಮತ್ತು ಇನ್ನಿತರೆ ಚಿನ್ನಾಭರಣಗಳನ್ನು ಅಡವಿಟ್ಟು ಶಿವಕುಮಾರ್‌ಗೆ ಹಣ ನೀಡಿದ್ದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ!


**ಕುರ್ಚಿ ಮೇಲೆ ಕೂರಿಸಿದ್ದಕೆ ವಜಾ ಆಯ್ತು...**


2024 ರಲ್ಲಿ ಸಿಂಗಾಪುರದಲ್ಲಿ ನಡೆದ ವಿಶ್ವ ಕನ್ನಡ ಹಬ್ಬದಲ್ಲಿ ಭಾಗವಹಿಸಿದ್ದ ಮಹಿಳೆಯು ನಾನಾ ಪಡಿಪಾಟಲು ಅನುಭವಿಸಿ ಇಂಡಿಯಾ ಗೆ ವಾಪಸ್ ಆಗಿ ತನ್ನ ಹಣವನ್ನು ತನಗೆ ವಾಪಸ್ ನೀಡುವಂತೆ ಕೇಳಿದ್ದು, ಆರೋಪಿ ಅವರಿಗೆ ಬೆದರಿಕೆ ಹಾಕಿದ್ದಾನಂತೆ! ನಿಮ್ಮನ್ನು ಸಿಂಗಾಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೇದಿಕೆ ಮೇಲೆ ಕೂರಿಸಿದ್ದೇನೆ. ಅದಕ್ಕೆ ನೀವೇ 25 ಲಕ್ಷ ರೂ ನೀಡಬೇಕು! ಅಲ್ಲಿಗೆ ನಿಮ್ಮ ಹಣ ಸರಿ ಹೋಗಿದೆ! ನಿಮಗೆ ನಾನು ಯಾವುದೇ ಹಣ ಕೊಡಬೇಕಾಗಿಲ್ಲ ಎಂದು ಸಬೂಬು ಹೇಳಿದ್ದಾನಂತೆ!! ಇದರಿಂದ ನೊಂದ ಮಹಿಳೆ ಮೀನಾಕ್ಷಿ ಅವರು ನ್ಯಾಯಕ್ಕಾಗಿ ಪೊಲೀಸ್ ಮೊರೆ ಹೋಗಿದ್ದಾರೆ!

ಈ ಪ್ರಕರಣವನ್ನು ದಾಖಲಿಸಿಕೊಂಡಿದ್ದ ಗೋವಿಂದರಾಜನಗರ ಪೊಲೀಸರು ಆರೋಪಿಗಾಗಿ ಹುಡುಕಾಟ ನಡೆಸಿಸಿದ್ದರು. ಲುಕ್ ಔಟ್ ನೋಟೀಸ್ ಕೂಡ ಜಾರಿಯಾಗಿತ್ತು. ಆದರೆ ಐನಾತಿ ಕಣ್ಣು ಪೊಲೀಸ್ ಕಣ್ ತಪ್ಪಿಸಿ 2025 ನೇ ಸಾಲಿನ 'ವಿಶ್ವ ಕನ್ನಡ ಹಬ್ಬ' ಕಾರ್ಯಕ್ರಮದಲ್ಲಿ ಭಾಗವಹಿಸಲು ಓಮನ್ ದೇಶದ ಮಸ್ಕಟ್‌ಗೆ ಹಾರಲು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಿದ್ದ! ಮೊನ್ನೆ ಗುರುವಾರ ರಾತ್ರಿ ಈ ಮಾಹಿತಿ ಅರಿತ ಇನ್ಸ್‌ಪೆಕ್ಟರ್ ಸುಬ್ರಮಣಿ ಅಲ್ಲೇ ಅವನನ್ನು ಬಂಧಿಸಿ ಠಾಣೆಗೆ ಕರೆತಂದು ವಿಚಾರಣೆ ನಡೆಸಿ, ನಂತರ ಕೋರ್ಟ್ ಕಟಕಟೆ ಯಲ್ಲಿ ನಿಲ್ಲಿಸಿ ನಾಲ್ಕು ದಿವಸ ಕಸ್ಟಡಿಗೆತೆಗೆದುಕೊಂಡಿದ್ದಾರೆ!

ಈತ ನಡೆಸಿರೋ ವಂಚನೆ,ಹಣಕಾಸಿನ ವ್ಯವಹಾರದ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಕಣ್ಣು ಶಿವಕುಮಾರ ಇದೇ ರೀತಿ ಹಲವರಿಗೆ ವಂಚಿಸಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ ಎಂದು ಪೊಲೀಸ್ ಅಧಿ ಕಾರಿಗಳು ಮಾಹಿತಿ ನೀಡಿದ್ದಾರೆ! ಗಮನಿಯ ಸಂಗತಿ ಏನೆಂದರೆ, ಕೆಲ ಪೊಲೀಸರು 'ಪ್ರೆಸ್ ನಮ್ರ' ಅಂದ ಕೂಡಲೇ ಕಾಫಿ ಕುಡೀತೀರಾ ಟೀ ಕುಡೀತೀರಾ ಅಂತ ಮಸ್ಕಾ ಹೊಡೆಯುತ್ತಾರೆ! ಆದರೆ, ಇದಕ್ಕೆ ಅಪವಾದ ದಕ್ಷ ಡಿಸಿಪಿ ಎಸ್.ಗಿರೀಶ್, ಖಡಕ್ ಎಸಿಪಿ ಚಂದನ್ ಕುಮಾರ್ ಮತ್ತು ಪಿಐ ಸುಬ್ರಮಣಿ! ಪೊಲೀಸ್ ಡಿಪಾರ್ಟ್‌ಮೆಂಟ್‌ಗೆ ಕಿಮ್ಮತ್ತು ಬರುವುದೇ ಇಂಥ ಅಧಿ ಕಾರಿಗಳಿಂದ! ಕರ್ತವ್ಯಕ್ಕೆ ಅಧ್ಯತೆ ಕೊಡುವ ಇಂಥವರಿಂದ ಫ್ರಾಡ್‌ಗಳ ಬಣ್ಣ ಬಯಲಾಗುತ್ತಿದೆ! ಹ್ಯಾಟ್ಸ್ ಆಫ್ ಟು ಆಲ್ ಆಫೀಸರ್ಸ್...


ಡಿಸಿಪಿ ಎಸ್. ಗಿರೀಶ್


ಎಸಿಪಿ ಚಂದನ್‌ಕುಮಾರ್


ಇನ್ಸ್‌ಪೆಕ್ಟರ್ ಸುಬ್ರಮಣಿ

## ಎಲ್ಲಿಯ ಟೈಲರ್? ಎಲ್ಲಿಯ ರೈಟರ್??!

ಈ ಶಿವಕುಮಾರ್ ಮೂಲತಃ ಚನ್ನರಾಯಪಟ್ಟಣದ ನಾಗರ ನವಿಲೆ ಗ್ರಾಮದವನು. ಇವನ ಕುಟುಂಬಸ್ಥರು ನಿಜಕ್ಕೂ ಸಜ್ಜನರು. ತಂದೆ ಅಣ್ಣಂದಿರೆಲ್ಲ ಸರ್ಕಾರಿ ನೌಕರರು. ಈತ ಮಾತ್ರ ಟೈಲರ್! ಮೊದಲು ಶ್ರೀರಾಮಪುರದ ಎಲ್.ಎನ್. ಪುರದಲ್ಲಿ ನೆಲೆಸಿ ಬಟ್ಟೆ ಬರೆ ಸ್ಟಿಚ್ಚಿಂಗ್ ಮಾಡಿಕೊಂಡಿದ್ದವನು ಕಾಲ ಕ್ರಮೇಣ ಗಾಂಧಿನಗರದ ಲಿಂಕ್ ತೆಗೆದುಕೊಂಡ! ಶ್ರೀರಾಮಪುರ ಗಾಂಧಿನಗರ ಅಂದಮೇಲೆ ಮುಗಿತಲ್ಲ,ಅಂಡರ್ ವರ್ಲ್ಡ್ ಲಿಂಕ್ ಸಿಕ್ಕೇ ಸಿಗುತ್ತದೆ!

ಬಡ ಬಗ್ಗರಿಗೆ ಬಟ್ಟೆ ಹೊಲಿಯುತ್ತಿದ್ದ ಟೈಲರ್ ಶಿವಕುಮಾರ್, ನಿಧಾನವಾಗಿ ಸಿನಿಮಾ ಸ್ಟಾರ್‌ಗಳಿಗೆ, ಇತರೆ ವಿಐಪಿಗಳಿಗೆ ಡ್ರೆಸ್ ಮೇಕರ್ ಆದ! ಈತನ 'ಗೋಲ್ಡನ್ ವೇರ್' ಅಷ್ಟು ಫೇಮಸ್ ಆಗಿತ್ತು. ಸಂಬಂಧದಲ್ಲೇ ಮದುವೆ ಆಗಿರೋ ಶಿವಕುಮಾರ್, ತನ್ನ ಅಂಗಡಿಗೆ ಬರುತ್ತಿದ್ದ ಒಂದು ಮಗುವಿನ ತಾಯಿಯೊಬ್ಬಳನ್ನು ಕ್ಯಾಚ್ ಹಾಕೊಂಡಿದ್ದ!ಪಾಪ,ಆಕೆದೊಡ್ಡ ಮನೆಯೊಂದರ ಸೊಸೆ, ಗಂಡನೊಡನೆ ಜಗಳ ಮಾಡಿಕೊಂಡು ಅತ್ತೆ ಮನೆಯಿಂದ ಹೊರಬಿದ್ದಿದ್ದಳು! ಅವಳಿಗೆ ಟೈಲರ್ ಅಂಗಡಿಯಲ್ಲಿ ಅದೇನು ನ್ಯಾಯ ಸಿಕ್ಕಿತೋ?!

ಇಬ್ಬರೂ ಸೇರಿಕೊಂಡು ಗೋಲ್ಡನ್ ವೇರ್ ಸ್ಥಾಪಿಸಿದ್ರು ಅನ್ನೋರಿದ್ದಾರೆ! ಅದಿರಲಿ, ಮುಂದೆ ಈ ಶಿವಕುಮಾರ್ ರಿಯಲ್ ಎಸ್ಟೇಟ್ ವ್ಯವಹಾರ ಶುರುವಿಟ್ಟುಕೊಂಡ. ಅದೇನು ಒರಿಜಿನಲ್ ಅಲ್ಲ, ಬ್ಯಾಂಕ್ ಲೋನ್ ತೀರಿಸದೆ ಹರಾಜಿಗೆ ಬಂದಿರೋ ಮನೆಗಳನ್ನ ಇನ್ನೊಬ್ಬರ ತಲೆಗೆ ಕಟ್ಟಿ ಕಮಿಷನ್ ಹೊಡೆಯೋದು! ಮತ್ತು ಮನೆ ಪತ್ರವನ್ನ ವಿವಿಧ ಬ್ಯಾಂಕ್ನಲ್ಲಿ ಅಡಮಾನವಿಟ್ಟು ಲೋನ್ ಕೊಡಿಸಿ ಕಮಿಷನ್ ಹೊಡೆಯೋದು!! ಮಾಮೂಲಿಯಾಗಿ ಹೈಟೆಕ್ ಕುಳಗಳಿಗೆ 'ಗೋಲ್ಡನ್ ವೇರ್' ನಿಂದ ಹೈಟೆಕ್ ಬಟ್ಟೆ ಒದಗಿಸುತ್ತಿದ್ದನಲ್ಲಾ, ಅದರಿಂದ ಭಾರಿ ಲಾಭ ಬರುತ್ತಿತ್ತು. ಕರ್ನಾಟಕ ರಾಜ್ಯ ಕಂಡ ಇನ್ನೊಬ್ಬ ಫ್ರಾಡ್ ಗುರುಟೀಕ್ ಗಂಗಾಧರ್ ಮಗಳ ಮದುವೆಯಲ್ಲಿ ಬಟ್ಟೆ ಬರೆ, ಅಡುಗೆ ಭಟ್ಟ ಎಲ್ಲಾ ಈತನದ್ದೇ ಉಸುವಾರಿ! ಅದೊಂದು ಬಾಬತ್ತಿನಲ್ಲೇ ಕೋಟಿ ಕೋಟಿ ಲಾಭ ಹೊಡೆದ ಅನ್ನೋರಿದ್ದಾರೆ!

ಗುರುಟೀಕ್ ಗಂಗಾಧರ್ ಹೇಗೆ ತನ್ನ ಹುಳುಕುಗಳನ್ನು ಮುಚ್ಚಿಕೊಳ್ಳಲು ಸಂಜೆ ಪತ್ರಿಕೆ ಶುರು ಮಾಡಿದ್ದನೋ,ಹಾಗೆಯೇ ಇವನೂ ಕೂಡ 'ಕಣ್ಣು' ಪತ್ರಿಕೆ ಶುರು ಮಾಡಿ, ಟೈಲರ್ ಹೋಗಿ ರೈಟರ್ ಲೇಬಲ್ ಅಂಟಿಸಿಕೊಂಡ! ಇವನಿಗೆ ನೆಟ್ಟಗೊಂಡು ಸುದ್ದಿ ಬರೆಯೋಕೆ ಬರಲ್ಲ, ಸಂಪಾದಕೀಯ ಮಾತ್ರ ಬಲೇ ಜೋರು! ಈರಪ್ಪನ ಹೆಸರು ಸೂರಪ್ಪನ ಬಸಿರು!! ಈ ಪತ್ರಿಕೆ ಮಾಡಿದ ಮೇಲೆ ಈತ ಮಾಡಿದ್ದೆಲ್ಲ ಅಪ್ಪಟ ವಂಚನೆ...ರೋಲ್ ಕಾಲ್!

ಬನಶಂಕರಿ ಕಡೆ ಪೂಜಾರಿಯೊಬ್ಬ ಇವನ ಕಾಟ ತಾಳಲಾರದೆ ಸೂಸೈಡ್ ಮಾಡ್ಕೊಂಡು, ಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂಬ ಮಾಹಿತಿ ಇದೆ! ಉಳಿದಂತೆ, ಮಾಗಡಿ ರೋಡ್, ಬಸವೇಶ್ವರ ನಗರ, ಕಾಮಾಕ್ಷಿಪಾಳ್ಯ, ವಿಜಯನಗರ ಮುಂತಾದ ಪೊಲೀಸ್ ಠಾಣೆ ಗಳಲ್ಲಿಯೂ ಕೇಸ್ ಇವೆ ಎನ್ನಲಾಗುತ್ತದೆ!! ಬೆಂಗಳೂರು ಸಿಟಿಯಲ್ಲದೆ ಔಟ್ ಸೈಡ್ ಇನ್ನೂ ಎಲ್ಲೆಲ್ಲಿ ಎಷ್ಟೆಷ್ಟು ಕೇಸ್ ಇವೆಯೋ?! ಐನಾತಿ ಪತ್ರಕರ್ತ ಶಿವಕುಮಾರ್ ಹೇಗಿದ್ದರೂ ಪೊಲೀಸ್ ಕಸ್ಟಡಿಯಲ್ಲಿದ್ದಾನೆ! ಡಿಸಿಪಿ ಎಸ್. ಗಿರೀಶ್, ಎಸಿಪಿ ಚಂದನ್ ಹಾಗೂ ಪಿಐ ಸುಬ್ರಮಣಿ ಇವನನ್ನು ಸರಿಯಾಗಿ ರುಬ್ಬಿ ವಿಚಾರಣೆ ಮಾಡಿದರೆ ಇವನ ಇನ್ನಷ್ಟು ವಂಚನೆಗಳು ತಿಳಿಯಬಹುದು!!!

# ಸೈಕಲ್-ಬೇಕರಿ ಸಿಂಡಿಕೇಟ್‌ನಲ್ಲಿ ಬಿರುಕು?! ದುಷ್ಮನ್ ಗಳಾದ್ರಾ ಗುರು ಶಿಷ್ಯರು??!



ಬೇಕರಿ ರಘು

**ಬೆಂಗಳೂರಿನ ಇಟ್ಟಮಡುವಿನಲ್ಲಿ ಲಾಸ್ಟ್ ಸಂಡೇ ಸಿ.ಆರ್. - ಬಿ.ಆರ್. ರೌಡಿ ಗುಂಪಿನ ನಡುವೆ ಭಯಾನಕ ಗ್ಯಾಂಗ್ ವಾರ್!! ಯಾಕೆ...ಏನಾಯ್ತು... ಕಡೆಗೆ ಪೊಲೀಸರೇನು ಮಾಡಿದ್ರು?? ನಿಜವಾದ ಬ್ಯಾಟ್ಸಮನ್ ಗಳನ್ನು ಬಿಟ್ಟು ಬಕ್ರಾಗಳನ್ನು ಅಂದರ್ ಮಾಡಿದ್ರೆ?!! ಓದಿಕೊಳ್ಳಿ, ಈ ವರದಿಯನ್ನು...**



ಕಿರಣ್ ಅಲಿಯಾಸ್ ಚಿತ್ತೂರ್

**ಬೆಂಗಳೂರು**

✍ ಹೆಚ್.ಕೆ. ಮಹದೇವ್

ಕಳೆದ ಭಾನುವಾರ ರಾತ್ರಿ, ಬೆಂಗಳೂರಿನ ಸುಬ್ರಮಣ್ಯಪುರದಲ್ಲಿ ಕುಖ್ಯಾತ ರೌಡಿ ಸೈಕಲ್ ರವಿ ಸಹಚರರಿಂದ ಬೇಕರಿ ರಘು ಸಹಚರ ಡ್ರೈವರ್ ಕಿರಣ್ ಅಲಿಯಾಸ್ ಚಿತ್ತೂರು ಎಂಬಾತನ ಮೇಲೆ ಭೀಕರ ಹಲ್ಲೆ ನಡೆದಿದೆ! ಈ ಘಟನೆ ಬೆಂಗಳೂರು ಸೌತ್‌ನಲ್ಲಿ ಮತ್ತೆ ರೌಡಿಸಂ ತಲೆ ಎತ್ತಿರುವುದನ್ನು ತೋರಿಸುತ್ತದೆ! ಸುಬ್ರಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಾಯ್ಡು ಲೇಔಟ್ ನಲ್ಲಿ ಕಳೆದ ಬಾನುವಾರ ರಾತ್ರಿ 9 ಗಂಟೆಗೆ ಎರಡು ಗುಂಪುಗಳ ನಡುವೆ ಲಾಂಗು ಮಚ್ಚುಗಳಿಂದ ಹೊಡೆದಾಟ ನಡೆದು, ಕಿರಣ್ ಎಂಬಾತ ಮಾರಣಾಂತಿಕವಾಗಿ ಹಲ್ಲೆಗೊಳಗಾಗಿ ಆಸ್ಪತ್ರೆ ಸೇರಿ ಕೋಮಾಗೆ ಜಾರಿದ್ದಾನೆ.

ಸಿ.ಆರ್. (ಸೈಕಲ್ ರವಿ) ಮತ್ತು ಬಿರ್.ಆರ್. (ಬೇಕರಿ ರಘು) ಗ್ಯಾಂಗ್‌ನ ಹುಡುಗರ ನಡುವೆ ಆ ರಾತ್ರಿ ಕ್ಷುಲ್ಲಕ ಕಾರಣಕ್ಕೆ ಆರಂಭವಾದ ಹೊಡೆದಾಟದಲ್ಲಿ ಎರಡೂ ಕಡೆಯ ಪುಂಡರಿಗೂ ಗಾಯಗಳಾಗಿವೆ. ಮೊದಲು ಬೇಕರಿ ಹುಡುಗರೇ ಸೈಕಲ್ ರವಿ ಹುಡುಗರನ್ನು ಅಟ್ಟಾಡಿಸಿ ಹೊಡೆದಿದ್ದಾರೆ. ಆಗ ಅಲ್ಲಿಂದ ಎಸ್ಕೇಪ್ ಆದ ಸೈಕಲ್ ಹುಡುಗರು ಹಲವಾರು ಬೈಕ್ ಗಳಲ್ಲಿ ಮತ್ತೆ ಅದೇ ಜಾಗಕ್ಕೆ ಲಾಂಗು ಮಚ್ಚುಗಳ ಸಮೇತ ಬಂದು ಬೇಕರಿ ರಘು ಹುಡುಗರ ಮೇಲೆ ಅಟ್ಯಾಕ್ ಮಾಡಿದ್ದಾರೆ.



ಆಸ್ಪತ್ರೆಯಲ್ಲಿ ಬಿದ್ದಿರೋ ಕಿರಣ್

ಆಗ ಕಿರಣ್ ಅಲಿಯಾಸ್ ಚಿತ್ತೂರ್, ಸೈಕಲ್ ರವಿ ಹುಡುಗರ ಕೈಗೆ ತಗಲಾಕೊಂಡು ಸಮಾ ಒದೆ ತಿಂದಿದ್ದಾನೆ. ಪುರಾತನ ಪಂಟರ್ ಸೈಕಲ್ ರವಿಯ ಹುಡುಗರಾದ ಗಜ, ದೇವ, ವಿಶ್ವ ಈ ಗ್ಯಾಂಗ್ ವಾರ್ ಅಟ್ಯಾಕ್‌ನ ಮುಂದಾಳತ್ವ ವಹಿಸಿರುವುದು ಆ ರಸ್ತೆಯಲ್ಲಿರುವ ಸಿಸಿಟಿವಿ ವೀಡಿಯೋಸ್ ಕ್ಯಾಮೆರಾಗಳಲ್ಲಿ ಕಾಣುತ್ತಿದ್ದರೂ, ಲಕ್ಷಾಂತರ ರೂಪಾಯಿ ಲಂಚ ತಿಂದಿರುವ ಕೆಲವು ಭ್ರಷ್ಟ ಪೊಲೀಸರಿಂದ ಡಮ್ಮಿ ಹುಡುಗರನ್ನು ಈ ಕೇಸಿನಲ್ಲಿ ಫಿಟ್ ಮಾಡಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿ ಕೈ ತೊಳೆದುಕೊಂಡಿದ್ದಾರೆಂಬ ವಧಂತಿಗಳಿವೆ!



ಸೈಕಲ್ ರವಿ

ಬೆಂಗಳೂರು ದಕ್ಷಿಣದ ದಕ್ಷ ಡಿಸಿಪಿ ಲೋಕೇಶ್ ಜಗಲಸರ್ ಈ ಪ್ರಕರಣವನ್ನು ಸರಿಯಾಗಿ ಮರು ತನಿಖೆ ಮಾಡಿ ನಿಜವಾದ ಬ್ಯಾಟ್ಸ್‌ಮನ್‌ಗಳನ್ನು ಹಿಡಿದು ಜೈಲಿಗಟ್ಟದಿದ್ದರೆ ಸೌತ್ ನಲ್ಲಿ ಮತ್ತೆ ಅಂಡರ್ ವರ್ಡ್ ಹವಾ ಜೋರಾಗುವ ಎಲ್ಲಾ ಸಾಧ್ಯತೆಗಳಿವೆ ಎಂದು ಸಾರ್ವಜನಿಕರು ಆತಂಕ ಪಡುತ್ತಿದ್ದಾರೆ!

ಒಂದು ಕಾಲದ ನಟೋರಿಯಸ್ ಸುಪಾರಿ ಕಿಲ್ಲರ್, ಕುಖ್ಯಾತ ರೌಡಿ ಸೈಕಲ್ ರವಿ ಈಗ ತರಹೇವಾರಿ ಬಿಸಿನೆಸ್, ಬೇಸ್ ಇಸ್ಪೀಟ್ ಅಡ್ಡಾಗಳು, ಫೈನಾನ್ಸ್, ರಿಯಲ್ ಎಸ್ಟೇಟ್, ಸೆಟ್ಲ್‌ಮೆಂಟ್‌ನಲ್ಲಿ ನೂರಾರು ಕೋಟಿ ದುಡ್ಡು ಮಾಡಿಕೊಂಡು ಈಗ ವೈಟ್ ಕಾಲರ್ ರೌಡಿಯಾಗಿ ಬದಲಾಗಿದ್ದಾನೆ ಅನ್ನೋ ಸುದ್ದಿಗಳಿವೆ!

ಆತನ ಹಿಂದಿರುವ ಗಜ, ದೇವ, ವಿಶ್ವನಂತಹ ಹೊಸ ಹುಡುಗರ ದಂಡು ಸೈಕಲ್ ರವಿ ಕೊಟ್ಟ ದುಡ್ಡಲ್ಲಿ ಅಡವಿಟ್ಟುಕೊಂಡ ಬೈಕ್ ಕಾರುಗಳನ್ನು ಪುಂಡ ಹುಡುಗರ ಕೈಗೆ ಕೊಟ್ಟು ಇಟ್ಟುಮಡು, ಕತ್ರಿಗುಪ್ಪೆ, ಚನ್ನಮ್ಮನ ಕೆರೆ, ಬನಶಂಕರಿ. ಕುಮಾರಸ್ವಾಮಿ ಲೇಔಟ್. ಉತ್ತರಳ್ಳಿ, ಸುಬ್ರಮಣ್ಯಪುರ, ಮುಂತಾದ ಏರಿಯಾಗಳಲ್ಲಿ ಸುತ್ತಾಡುತ್ತಾ ಹವಾ ಮೇಂಟೇನ್ ಮಾಡುತ್ತಾ ಜನರಲ್ಲಿ ಭಯದ ವಾತಾವರಣ ಉಂಟುಮಾಡುತ್ತಿದ್ದಾರೆಂಬ ಕಂಪ್ಲೇಂಟ್‌ಗಳಿವೆ! ಬೆಂಗಳೂರು ಸಿಸಿಬಿ ಪೊಲೀಸರು ಕೇಸ್‌ಗಳಾಗಿ ಕಂಪ್ಲೇಂಟ್ ಬರುವ ತನಕ ಕಾಯದೆ ಈಗಲೇ ಎಚ್ಚೆತ್ತುಕೊಂಡು ಇಂತಹ ಪುಂಡರ ಹಾವಳಿಯಿಂದ ನಾಗರೀಕರನ್ನು ಕಾಪಾಡಬೇಕಿದೆ!

ಈ ಗ್ಯಾಂಗ್ ವಾರ್ ನಂತರ ಸುಬ್ರಮಣ್ಯಪುರ ಪೊಲೀಸರು ಇಬ್ಬರ ಕಡೆಯಿಂದಲೂ ಕಂಪ್ಲೇಂಟ್ ಬರೆಸಿಕೊಂಡು, ಒಬ್ಬ ಸಾವು ಬದುಕಿನ ನಡುವೆ ಹೋರಾಡುತ್ತಿದ್ದರೂ, ರಾಜಿ ಸಂದಾನ ಮಾಡಿಸಲು ಹರ ಸಾಹಸ ಪಟ್ಟಿರುವುದು ನಾಚಿಕೆಗೇಡಿನ ವಿಚಾರವಾಗಿದೆ! ಇದೇ ಸಂದರ್ಭದಲ್ಲಿ ರೌಡಿಶೀಟರ್ ಬೇಕರಿ ರಘು ಫೈನಾನ್ಸಿಯರ್ ಒಬ್ಬನ ಕಿಡ್ನಾಪ್ ಮಾಡಿ ಹಣಕ್ಕೆ ಬೇಡಿಕೆ ಇಟ್ಟು, ಹಲ್ಲೆ ಮಾಡಿದ ಕೇಸಿನಲ್ಲಿ ಬಂಧಿತನಾಗಿ ಕೋಕಾ ಕಾಯ್ದೆ ಅಡಿ ಪರಪ್ಪನ ಅಗ್ರಹಾರ ಜೈಲು ಸೇರಿಕೊಂಡಿದ್ದಾನೆ!

ಆತನ ಒಂದು ಕಾಲದ 'ಬಾಸ್' ಸೈಕಲ್ ರವಿಯೊಂದಿಗೆ ಸ್ನೇಹ ಅಷ್ಟಕಷ್ಟೇ ಎನ್ನುವ ಗಾಳಿ ಸುದ್ದಿಗಳಿವೆ! ಈ ಹಿಂದೆ ಬೇಕರಿ ರಘು ಹುಡುಗರು ಕರಿಯಾ ರಾಜೇಶ ಎನ್ನುವ ಹುಡುಗನಿಗೂ ಲಾಂಗ್ ಬೀಸಿ ಹಲ್ಲೆಮಾಡಿದ್ದರು! ಇದನ್ನೆಲ್ಲಾ ಗಮನಿಸಿದರೆ, ಒಂದು ಕಾಲದ ಅಪ್ತರಾದ ಸೈಕಲ್ ಬೇಕರಿ ದುಷ್ಮನ್ ಗಳಾದರಾ? ಗುರುಶಿಷ್ಯರ ನಡುವೆ ಕೋಲ್ಡ್ ವಾರ್ ಈಗ ಬೀದಿಜಗಳಗಳಾಗಿ ಗ್ಯಾಂಗ್ ವಾರ್ ಆರಂಭವಾಯ್ತಾ? ಒಂದೇ ಸಿಂಡಿಕೇಟ್‌ನಲ್ಲಿ ಬಿರುಕು ಮೂಡಿತಾ? ಎಂಬ ಡೌಟ್ಸ್ ಬರುತ್ತಿದೆ!!

ಬೆಂಗಳೂರಿನ ಅಂಡರ್‌ವರ್ಡ್‌ನಲ್ಲೀಗ ರಾತ್ರೋ ರಾತ್ರಿ ರೌಡಿ ಸಿಂಡಿಕೇಟ್‌ಗಳೇ ಬದಲಾಗಿ ಬೆಚ್ಚಿ ಬೀಳುವಂತಾಗಿದೆ. ಎಣ್ಣೆ ಟೇಬಲ್‌ನಲ್ಲೇ ಕಾಂಪ್ರಮೈಸ್‌ಗಳಾಗುತ್ತಿವೆ. ದುಡ್ಡೇ ದುಷ್ಮನ್‌ಗಳನ್ನು ಕ್ರೀಯೇಟ್ ಮಾಡುತ್ತಿದೆ. ಈಗಿನ ರೌಡಿ ಗ್ಯಾಂಗ್ ಗಳಲ್ಲಿ ಆಳ್ ಕಾಟೀಗಳ ಕಾಟ ಜಾಸ್ತಿ ಆಗಿ 'ಬಿರುಕು' ಸಾಮಾನ್ಯವಾಗಿದೆ! ನಂಬಿಕೆ ಶೂನ್ಯವಾಗಿದೆ! ನಿಯತ್ತು ಸತ್ತೇ ಹೋಗಿದೆ!

ರೌಡಿ ಅರಸಯ್ಯನ ಕೊಂದಿದ್ದ ಬನಶಂಕರಿ ಪಳನಿ ಟೀಮ್ ಜೊತೆಗೂ ರಾಜೀ ಮಾಡಿ ಕೊಂಡು, ರೌಡಿ ಕೋದಂಡನ ಕನೆಕ್ಷನ್ ನಿಂದ ಸೈಕಲ್ ರವಿ ಈಗ ವಿಲ್ಸನ್ ಗಾರ್ಡನ್ ನಾಗನ ಸಿಂಡಿಕೇಟ್ ಸೇರಿಕೊಂಡು ಸೇಫಾಗಿದ್ದಾನಂತೆ! ರೌಡಿ ಲಕ್ಷ್ಮಣ ಸತ್ತ ಬಳಿಕ ಸೈಕಲ್ ರವಿ ಬೆನ್ನಿಗೆ ಗಾಯಿತ್ರಿ ನಗರದ ಲಕ್ಕಿ ಅಲಿಯಾಸ್ ಲಕ್ಷ್ಮೀನಾರಾಯಣ್ ಕೃಪಾಶೀರ್ವಾದವಿದೆಯಂತೆ! ಬೇಕರಿ ರಘುಗೂ ವಿಲ್ಸನ್ ಗಾರ್ಡನ್ ನಾಗನಿಗೂ ಅಷ್ಟಕ್ಕಷ್ಟೇ... ಎನ್ನಲಾಗಿದೆ. ಇಬ್ಬರ ನಡುವೆ ಗೆಳೆತನವಿಲ್ಲ. ದುಷ್ಮನಿಯೂ ಇಲ್ಲ. ಬೇಕರಿ ರಘು ಈಗ ತನ್ನದೇ ಆದ ಇಂಡಿಫೆಂಡೆಂಟ್ ಗ್ಯಾಂಗ್ ಕಟ್ಟಿಕೊಂಡು ಲೇಡಿ ಡಾನ್ ಗಳನ್ನೂ ಜೊತೆಗಿಟ್ಟುಕೊಂಡು ಬೆಂಗಳೂರು ಸಿಟಿಯಲ್ಲದೆ ಗ್ರಾಮಾಂತರದ ಹಳ್ಳಿಗಳಲ್ಲೂ ಹವಾ ಮೈಂಟೈನ್ ಮಾಡಿಕೊಂಡು ಮುನ್ನುಗ್ಗುತ್ತಿರೋದು ಸೈಕಲ್ ರವಿಗೆ ಸ್ವಲ್ಪ ಹೊಟ್ಟೆ ಕಿಚ್ಚು ತರಿಸಿರಬಹುದು! ಅಥವಾ ರೌಡಿ ಲಕ್ಷ್ಮಣನ ಹಂತಕ ಕ್ಯಾಟ್ ರಾಜನ ಟೀಮ್ ಜೊತೆಗೆ ಬೇಕರಿ ಗೆಳೆತನಕ್ಕೆ ಕೈಚಾಚಿರೋದು ಬೇಸರ ಮೂಡಿಸಿರಲೂಬಹುದು! ಬೆನ್ನಿಗೆ ಚೂರಿ ಹಾಕೋದು, ಬೆಳೆಸಿದವರಿಗೆ ಹಳ್ಳ ತೋಡೋದು, ಒಂದೇ ತಟ್ಟೆಯಲ್ಲಿ ಅನ್ನ ತಿಂದು ಸ್ಕೆಚ್ ಹಾಕೋದು ಅಂಡರ್ ವರ್ಡ್ ನಲ್ಲಿ ಕಾಮನ್! ಆದರೆ ಈ ಇಬ್ಬರು ರೌಡಿಗಳ ಕಾಳಗಕಾದಾಟದಲ್ಲಿ ಬೆಂಗಳೂರಿನ ನಾಗರೀಕರ ನೆಮ್ಮದಿ ಹಾಳಾಗದಿದ್ದರೆ ಸಾಕು!!



ಕಮಿಷನರ್ ಸೀಮಂತ್‌ಕುಮಾರ್ ಸಿಂಗ್



ಡಿಸಿಪಿ ಅನಿತಾ ಹದ್ದಣ್ಣವರ್



ಸುಬ್ರಮಣ್ಯಪುರ ಪೊಲೀಸ್ ಠಾಣೆ

# ಬುರ್ಖಾ ಧರಿಸಿ ಪತಿಯನ್ನೇ ಕೊಲ್ಲಲು ಯತ್ನಿಸಿದ ಪತ್ನಿ!

**ದಕ್ಷಿಣ ಕನ್ನಡ**

ಮೋಹನ್ ಬೋಳಂಗಡಿ



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೇಂದ್ರಸ್ಥಾನ ಬಿ.ಸಿ.ರೋಡ್. ಇಲ್ಲಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಪಕ್ಕದ ವಾಣಿಜ್ಯ ಕಟ್ಟಡದಲ್ಲಿ ಇರುವ ಬಟ್ಟೆ ಅಂಗಡಿಯ ಹೆಸರು ಸೋಮಯಾಜಿ ಟೆಕ್ಸ್‌ಟೈಲ್ಸ್. ಇದರ ಮಾಲೀಕ ಕೃಷ್ಣಕುಮಾರ್ ಸೋಮಯಾಜಿ. ತನ್ನ ಪತ್ನಿಯಿಂದಲೇ ಮಾರಣಾಂತಿಕವಾಗಿ ಗಾಯಗೊಂಡು ಸದ್ಯಕ್ಕೆ ಮಂಗಳೂರಿನ ಎ.ಜೆ. ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಅವರನ್ನು ಕೊಲೆಗೈಯ್ಯಲು ಯತ್ನಿಸಿದ್ದ ಪತ್ನಿ ಕೆ.ಟಿ. ಜ್ಯೋತಿ ಸೋಮಯಾಜಿ ಮಂಗಳೂರಿನ ಸಬ್ ಜೈಲಿಗೆ ತಳ್ಳಲ್ಪಟ್ಟಿದ್ದಾರೆ. ಬಿ.ಸಿರೋಡ್ ಪರಿಸರದಲ್ಲಿ ಆತಂಕಕ್ಕೆ ಕಾರಣವಾಗಿದ್ದಂತಹ ಈ ಘಟನೆ ಸಾಕಷ್ಟು ಕುತೂಹಲ ಕೆರಳಿಸಿದೆ.

**ಎಂಟು ವರ್ಷಗಳ ಹಿಂದೆ!**

2017, ಜುಲೈ 4ರ ಸಂಜೆ, ಸುಮಾರು 7.00 ಗಂಟೆಯ ಹೊತ್ತಿಗೆ ಬಿ.ಸಿ. ರೋಡ್ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಪಕ್ಕದ ಕಟ್ಟಡದಲ್ಲಿ ಇರುವಂತಹ ಉದಯ ಲಾಂಡ್ರಿ ಎಂಬ ಅಂಗಡಿಗೆ ನುಗ್ಗಿದ ದುಷ್ಕರ್ಮಿಗಳು ಅಂಗಡಿಯಲ್ಲಿದ್ದ ಶರತ್ ಮಡಿವಾಳ ಎಂಬ 29 ವರ್ಷದ ಯುವಕನನ್ನು ಕತ್ತಿಯಿಂದ ಕಡಿದು ಕೊಲೆಗೈದಿದ್ದರು. ಶರತ್ ಮಡಿವಾಳ ಮೂಲತಃ ಮಾರ್ನಬೈಲ್ ಸಮೀಪದ ಕಂದೂರಿನವನಾಗಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಕ್ರಿಯ ಕಾರ್ಯಕರ್ತನಾಗಿದ್ದ. ಈತನ ಹತ್ಯೆ ಭಾರೀ ಸಂಚಲನ ಸೃಷ್ಟಿಸಿತ್ತು. ಚಾಮರಾಜನಗರ ಜಿಲ್ಲೆಯ ಪಿಎಫ್‌ಐ ಸಂಘಟನೆಯ ಕಾರ್ಯಕರ್ತರು ಬಂಟ್ವಾಳಕ್ಕೆ ಬಂದು ಈ ಕೃತ್ಯ ನಡೆಸಿದ್ದರು. ಈ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಮಾರ್ನಬೈಲು ಸಮೀಪದ ಕಾರಾಜೆಯ ಖಲಂದರ್ ಶಾಫಿ ವಿದೇಶಕ್ಕೆ ಹೋಗಿ ತಲೆಮರೆಸಿಕೊಂಡಿದ್ದರೆ ಉಳಿದ ನೇರ ಆರೋಪಿಗಳೂ ಸೇರಿದಂತೆ ಹತ್ತು ಮಂದಿಯನ್ನು ಪೊಲೀಸರು ಬಂಧಿಸಿದ್ದರು. ಈ ಘಟನೆ ಬಿ.ಸಿ.ರೋಡ್ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆಗಮನ ದ್ವಾರದ ಬಳಿ ನಡೆದಿದ್ದರೆ ನವೆಂಬರ್ 19ರ ಸಂಜೆ 7 ಗಂಟೆಯ ವೇಳೆಗೆ ನಡೆದ ಘಟನೆ ಬಸ್ ನಿಲ್ದಾಣದ ನಿರ್ಗಮನ ದ್ವಾರದ ಬಳಿಯ ವಾಣಿಜ್ಯ ಕಟ್ಟಡದಲ್ಲಿ ನಡೆದಿದೆ.






ರಾಷ್ಟ್ರೀಯ ಹೆದ್ದಾರಿಗೆ ತಾಗಿಕೊಂಡೇ ಇರುವ ವಾಣಿಜ್ಯ ಕಟ್ಟಡದಲ್ಲಿ ಸೋಮಯಾಜಿ ಟೆಕ್ಸ್‌ಟೈಲ್ಸ್ ಎಂಬ ಸಿದ್ಧ ಉಡುಪುಗಳ ಮಳಿಗೆ ಇದೆ. ಬಂಟ್ವಾಳ ಭಂಡಾರಿಬೆಟ್ಟುವಿನಲ್ಲಿ ಮನೆ ಹೊಂದಿರುವ ಕೃಷ್ಣಕುಮಾರ್ ಸೋಮಯಾಜಿ ಈ ಮಳಿಗೆಯ ಮಾಲೀಕರು. ನಮಿತಾ ಎಂಬ ಹೆಣ್ಣುಮಗಳು ಸೇಲ್ಸ್‌ಗರ್ಲ್ ಆಗಿ ಕೆಲಸ ಮಾಡುತ್ತಿದ್ದಾಳೆ. ನವೆಂಬರ್ 19ರ ಸಂಜೆ 7 ಗಂಟೆಯ ವೇಳೆಗೆ ಆ ಮಳಿಗೆಗೆ ಬುರ್ಖಾ ಧರಿಸಿದ್ದ ಮಹಿಳೆಯೊಬ್ಬಳು ಗ್ರಾಹಕಿಯಂತೆ ಬಂದಿದ್ದಳು. ಕೆಲಸದಾಕೆ ನಮಿತಾ ಏನು ಬೇಕು ಎಂದು ಕೇಳಿದಾಗ ನವಜಾತ ಶಿಶುವನ್ನು ಕಟ್ಟುವ ಬಟ್ಟೆ ಬೇಕು ಎಂದು ಹಿಂದಿ ಭಾಷೆಯಲ್ಲಿ ಕೇಳಿದ್ದಳು. ಅಂತಹ ಬಟ್ಟೆ ಮಹಡಿಯ ಮೇಲಿದೆ. ಬಂದು ನೋಡಿ ಎಂದು ಹೇಳಿದಾಗ ಬೇಡ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಳು. ನಮಿತಾ ಮಹಡಿಗೆ ಹೋದ ಸಂದರ್ಭದಲ್ಲಿ ಅಂಗಡಿಯ ಕ್ಯಾಶ್ ಕೌಂಟರ್‌ನಲ್ಲಿ ಕುಳಿತಿದ್ದ ಮಾಲೀಕ ಕೃಷ್ಣಕುಮಾರ್ ಸೋಮಯಾಜಿ ಅವರು ಬೊಬ್ಬೆ ಹೊಡೆದಿದ್ದರು. ಗ್ರಾಹಕಿಯಂತೆ ಬುರ್ಖಾ ಧರಿಸಿ ಬಂದಿದ್ದ ಮಹಿಳೆ ಕೈಯಲ್ಲಿ ಕತ್ತಿ ಹಿಡಿದು ರೌದ್ರವತಾರ ತಾಳಿದ್ದಳು. ಸೋಮಯಾಜಿಯವರ ತಲೆಗೆ ಬಲವಾದ ಕತ್ತಿಯೇಟು ತಗಲಿತ್ತು. ಅವರು ಬೊಬ್ಬೆ ಹೊಡೆದುಕೊಂಡು ಅಂಗಡಿಯಿಂದ ಹೊರಗೆ ಓಡತೊಡಗಿದಂತೆ ಬೆನ್ನ ಹಿಂದೆ ಮತ್ತೆರಡು ಕತ್ತಿ ಏಟು ಬಿದ್ದಿತ್ತು. ಅವರು ಪಕ್ಕದಲ್ಲೇ ಇದ್ದ ಮೆಟ್ಟಿಲುಗಳ ಮೂಲಕ ಮಹಡಿಗೆ ಹೋದರು. ಆ ವೇಳೆಗೆ ಅವರ ಕೆಲಸದಾಳು ನಮಿತಾ ಮತ್ತು ಸ್ಥಳೀಯರು ಸೇರಿ ಬುರ್ಖಾಧಾರಿ ಮಹಿಳೆಯನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ಆಕೆಯ ಕೈಯಲ್ಲಿದ್ದ ಕತ್ತಿಯನ್ನು ಸೆಳೆದಿದ್ದರು. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಘಟನಾ ಸ್ಥಳದಲ್ಲಿ ಜಮಾಯಿಸಿದ್ದ ಕುತೂಹಲಿಗಳನ್ನು ತೆರವುಗೊಳಿಸಿ ಬುರ್ಖಾಧಾರಿಣಿಯನ್ನು ವಶಕ್ಕೆ ತೆಗೆದುಕೊಂಡು ಪೊಲೀಸ್ ಠಾಣೆಗೆ ಕರೆದೊಯ್ದರೆ ನಮಿತಾ ಮತ್ತು ಇತರರು ಗಾಯಗೊಂಡಿದ್ದ ಕೃಷ್ಣಕುಮಾರ್ ಸೋಮಯಾಜಿಯನ್ನು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮಂಗಳೂರಿನ ಎಜೆ ಆಸ್ಪತ್ರೆಗೆ ದಾಖಲಿಸಿದ್ದರು. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

**ಬೇಸ್ತುಬಿದ್ದ ಪೊಲೀಸರು!**

ಕೃಷ್ಣಕುಮಾರ್ ಸೋಮಯಾಜಿಯನ್ನು ಕಡಿದು ಕೊಲೆಗೈಯ್ಯಲು ಯತ್ನಿಸಿದ್ದ ಬುರ್ಖಾಧಾರಿಣಿಯನ್ನು ಠಾಣೆಗೆ ಕರೆದೊಯ್ದ ಪೊಲೀಸರು ಆಕೆ ಧರಿಸಿದ್ದ ಬುರ್ಖಾವನ್ನು ತೆಗೆಸಿದಾಗ ಬೆಚ್ಚಿಬಿದ್ದಿದ್ದರು. ಏಕೆಂದರೆ ಆಕೆ ಸಾಮಾನ್ಯವಾಗಿ ಬುರ್ಖಾ ಧರಿಸುವ ಮುಸ್ಲಿಂ ಸಮುದಾಯದ ಹೆಣ್ಣುಮಗಳು ಆಗಿರಲಿಲ್ಲ. ಬದಲಾಗಿ ಗಾಯಗೊಂಡಿರುವ ಕೃಷ್ಣಕುಮಾರ್ ಸೋಮಯಾಜಿಯವರ ಹೆಂಡತಿಯೇ ಆಗಿದ್ದಳು. ಆಕೆಯ ಹೆಸರು ಕೆಟಿ ಜ್ಯೋತಿ ಸೋಮಯಾಜಿ. ಈಕೆ ಮೂಲತಃ ಉಡುಪಿ ಜಿಲ್ಲೆಯ ಬ್ರಹ್ಮಾವರದವಳು. ಮದುವೆಯಾಗಿ ಒಂದು ಗಂಡು ಮಗುವಿನ ತಾಯಿಯಾಗಿದ್ದಳು. ಆಕೆಗೆ ಮತ್ತು ಗಂಡನಿಗೆ ವಿರಸ ಉಂಟಾಗಿ ಅದು ವಿವಾಹ ವಿಚ್ಛೇದನದಲ್ಲಿ ಕೊನೆಗೊಂಡಿತ್ತು. ತದನಂತರ ಅಂದರೆ 2010ರಲ್ಲಿ ವಿಧುರರಾಗಿದ್ದ ಕೃಷ್ಣ ಕುಮಾರ್ ಸೋಮಯಾಜಿ ಅವರನ್ನು ವಿವಾಹವಾಗಿದ್ದಳು. ಕೃಷ್ಣಕುಮಾರ್ ಸೋಮಯಾಜಿ ಅವರಿಗೆ ಮದುವೆಯಾಗಿದ್ದು, ಅವರಿಗೆ ಗಂಡುಮಗನಿದ್ದಾನೆ. ಅವರ ಪತ್ನಿ ಸುಮಾರು 20 ವರ್ಷಗಳ ಹಿಂದೆ ಅನಾರೋಗ್ಯದಿಂದ ಮೃತಪಟ್ಟಿದ್ದರು. ಸಣ್ಣ ಪ್ರಾಯದ ಗಂಡು ಮಗು ಇದ್ದುದರಿಂದ ಮತ್ತು ಮನೆಗೆ ವಾರೀಸುದಾರರು ಬೇಕು ಎಂಬ ನೆಲೆಯಲ್ಲಿ ವಿಚ್ಛೇದಿತೆ ಜ್ಯೋತಿಯನ್ನು ಆಕೆಯ ಕುಟುಂಬಿಕರ ಒಪ್ಪಿಗೆಯಿಂದಲೇ ಮದುವೆಯಾಗಿದ್ದರು. ಬಂಟ್ವಾಳದ ಭಂಡಾರಿಬೆಟ್ಟುವಿನಲ್ಲಿ ಭವ್ಯವಾದ ಮನೆ ಇತ್ತು. 2024ರ ತನಕ ಅವರ ಸಂಸಾರದಲ್ಲಿ ಯಾವುದೇ ಬಿರುಕು ಉಂಟಾಗಿರಲಿಲ್ಲ. ದಂಪತಿಗಳು ಅನ್ಯೋನ್ಯವಾಗಿ ಇದ್ದರು. ಇಂತಹ ಸುಂದರ ಸಂಸಾರಕ್ಕೆ ಬರಸಿಡಿಲು ಬಡಿದದ್ದು 2024ರಲ್ಲಿ.




ಕೃಷ್ಣ ಕುಮಾರ್ ಸೋಮಯಾಜಿ ಅವರ ಮೊದಲ ಹೆಂಡತಿಯ ಮಗ ಮತ್ತು ಜ್ಯೋತಿ ಅವರ ಮೊದಲ ಪತಿಯ ಮಗ ಇಬ್ಬರೂ ಸರಿ ಸುಮಾರು ಒಂದೇ ಪ್ರಾಯದವರು. ಇಬ್ಬರಿಗೂ ಒಂದೇ ರೀತಿಯ ವಿದ್ಯಾಭ್ಯಾಸವನ್ನು ಸೋಮಯಾಜಿಯವರು ಕೊಡಿಸಿದ್ದರು. ಅವರ ಮೊದಲ ಪತ್ನಿಯ ಮಗ ವಿದ್ಯಾಭ್ಯಾಸ ಮುಗಿಸಿ ಬೆಂಗಳೂರಿನ ಸಂಸ್ಥೆಯೊಂದರಲ್ಲಿ ಉತ್ತಮ ಉದ್ಯೋಗ ಹೊಂದಿದ್ದರೆ ಜ್ಯೋತಿಯವರ ಮೊದಲ ಪತಿಯ ಮಗ ದುರಂತ ಸಾವನ್ನಪ್ಪಿದ್ದ. 2024ರಲ್ಲಿ ಜ್ಯೋತಿ ಅವರ ಮಗ ತನ್ನ ಸ್ನೇಹಿತರ ಜೊತೆ ಸುರತ್ಕಲ್ ಕಡಲ ಕಿನಾರೆಗೆ ಹೋಗಿದ್ದ. ಆ ಸಂದರ್ಭದಲ್ಲಿ ಆಕಸ್ಮಿಕವಾಗಿ ಆತ ಸಮುದ್ರಕ್ಕೆ ಬಿದ್ದು ಮೃತಪಟ್ಟಿದ್ದ.



ಈ ಘಟನೆಯ ನಂತರ ಜ್ಯೋತಿ ಅವರು ಮಾನಸಿಕವಾಗಿ ಆಘಾತಕ್ಕೆ ಒಳಗಾಗಿದ್ದರು. ಅವರು ಪತಿ ಕೃಷ್ಣಕುಮಾರ್ ವಿರುದ್ಧ ರೋಷವನ್ನು ವ್ಯಕ್ತಪಡಿಸುತ್ತಿದ್ದರು. ತನ್ನ ಮಗ ಅಸ್ವಾಭಾವಿಕವಾಗಿ ಸಾವಿಗೀಡಾಗಲು ಪತಿಯೇ ಕಾರಣ ಎಂದು ಅವರು ಭಾವಿಸಿದ್ದರು. ಪರಿಣಾಮವಾಗಿ ದಿನನಿತ್ಯ ಅವರ ಮಧ್ಯೆ ಗಲಾಟೆಗಳು ನಡೆಯುತ್ತಿದ್ದವು. ಕೆಲವು ಬಾರಿ ಅಂಗಡಿಗೂ ಬಂದು ಗಲಾಟೆ ಮಾಡಿದ್ದರು. ಬಂಟ್ವಾಳ ನಗರ ಠಾಣೆಗೆ ಹಲವು ಬಾರಿ ದೂರು ನೀಡಲಾಗಿತ್ತು. ಪೊಲೀಸರು ಕರೆಸಿ ವಿಚಾರಣೆ ನಡೆಸಿದ್ದರು. ಜ್ಯೋತಿ ಅವರನ್ನು ಮಾನಸಿಕ ತಜ್ಞರ ಬಳಿ ಕಳುಹಿಸಿ ಚಿಕಿತ್ಸೆಯನ್ನು ಕೊಡಿಸಲಾಗಿತ್ತು. ಈ ಮಧ್ಯೆ ಕೃಷ್ಣಕುಮಾರ್ ಸೋಮಯಾಜಿ ಅವರಿಗೆ ಪತ್ನಿ ಜ್ಯೋತಿ ಅವರಿಂದ ಜೀವ ಭಯ ಕಾಡತೊಡಗಿತ್ತು. ಅದಕ್ಕಾಗಿ ಜ್ಯೋತಿ ಅವರ ತಾಯಿ ಮತ್ತು ಸಹೋದರರನ್ನು ಕರೆಸಿಕೊಂಡು ಮಾತುಕತೆ ನಡೆಸಿದ್ದರು ಅಲ್ಲದೆ ತನ್ನ ಭಂಡಾರಿಬೆಟ್ಟುವಿನ ಮನೆಯನ್ನು ಜ್ಯೋತಿಯವರಿಗೆ ನೀಡಿ ತಾನು ಬಾಡಿಗೆ ಮನೆಯಲ್ಲಿ ವಾಸವಿದ್ದರು. ಮಗ ಬೆಂಗಳೂರಲ್ಲಿ ಉದ್ಯೋಗದಲ್ಲಿದ್ದುದರಿಂದ ಆತನಿಗೊಂದು ಮದುವೆ ಮಾಡಿ ಆತನೊಂದಿಗೆ ಜೀವನ ಕಳೆಯಬೇಕು ಎಂದು ನಿರ್ಧರಿಸಿದ್ದರು. ಆತನಿಗೆ ಹುಡುಗಿ ನಿಶ್ಚಯವಾಗಿದ್ದು, ಡಿಸೆಂಬರ್ 5ರಂದು ಮದುವೆ ಮಾಡಲು ದಿನ ನಿಗದಿಪಡಿಸಲಾಗಿತ್ತು. ಈ ಮಧ್ಯೆ ಮನೆಯಲ್ಲಿದ್ದ ಜ್ಯೋತಿಯವರ ತಾಯಿ ಮತ್ತು ಸಹೋದರ ತಮ್ಮ ಮನೆಯಲ್ಲಿ ಬೇರೆ ಕೆಲಸ ಇದ್ದುದರಿಂದ ಮತ್ತು ಜ್ಯೋತಿ ಅವರು ಸಹಜ ಸ್ಥಿತಿಗೆ ಬಂದಿದ್ದರಿಂದ ಊರಿಗೆ ಹೋಗಿದ್ದರು. ಮನೆಯಲ್ಲಿ ಒಬ್ಬಂಟಿಯಾಗಿದ್ದಂತಹ ಜ್ಯೋತಿ ಅವರಿಗೆ ಏಕಾಏಕಿ ಮತ್ತೇ ಮಾನಸಿಕ ವ್ಯಾಕುಲತೆ ಆರಂಭಗೊಂಡಿತ್ತು. ಅದು ಅವರ ಗಂಡನತ್ತ ತಿರುಗಿತು. ನ. 17ರಂದು ಸಂಜೆ ವೇಳೆಗೆ ಮನೆಯಿಂದ ಹೊರಟ ಜ್ಯೋತಿ ಅವರು ನೇರವಾಗಿ ಪಾಣೆ ಮಂಗಳೂರಿಗೆ ಹೋಗಿ ಅಲ್ಲಿನ ಅಂಗಡಿಯೊಂದರಿಂದ ಬುರ್ಖಾ ಖರೀದಿಸಿ ಮತ್ತೊಂದು ಅಂಗಡಿಯಿಂದ ಕತ್ತಿಯನ್ನು ಖರೀದಿಸಿದ್ದರು. ಅಲ್ಲಿಯೇ ಬುರ್ಖಾ ಧರಿಸಿಕೊಂಡು ರಿಕ್ಷಾದಲ್ಲಿಯೇ ಬಿ.ಸಿ. ರೋಡ್‌ಗೆ ಬಂದು ಪತಿಯ ಅಂಗಡಿಗೆ ಬಂದಿದ್ದರು. ಕೆಲಸದಾಕೆಯೊಂದಿಗೆ ಹಿಂದಿಯಲ್ಲಿ ಮಾತನಾಡಿ ಬಟ್ಟೆ ಖರೀದಿಸುವ ನೆಪದಲ್ಲಿ ಆಕೆಯನ್ನು ಮಹಡಿ ಮೇಲಕ್ಕೆ ಕಳುಹಿಸಿ ಕ್ಯಾಶ್ ಕೌಂಟರ್‌ನಲ್ಲಿ ಕುಳಿತಿದ್ದ ಪತಿಗೆ ಕತ್ತಿಯಿಂದ ಕಡಿದು ಕೊಲೆಗೈಯ್ಯಲು ಯತ್ನಿಸಿದ್ದಾಳೆ. ಇದೀಗ ಜೈಲು ಪಾಲಾಗಿದ್ದಾಳೆ.


# ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ರಾವಲ್ಪಿಂಡಿ ಜೈಲಿನಲ್ಲೇ ಕೊಲೆಯಾದರೆ?!



✍ ಮಹದೇವ್ ಕೆಂಪಯ್ಯ

**ಪಾ**ಕಿಸ್ತಾನದ ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ನಿಗೂಢವಾಗಿ ಸಾವನ್ನಪ್ಪಿದ್ದಾರೆ ಎಂಬ ಸ್ಫೋಟಕ ಸುದ್ದಿ ಹಬ್ಬಿದೆ! ಇದನ್ನು ಪಾಕ್ ಮೂಲದ 'ಅಫ್ಘಾನ್ ಟೈಮ್ಸ್' ಎಂಬ ನ್ಯೂಸ್ ಡೆಸ್ಕ್ ಹೇಳಿದ ನಂತರವೇ ಈ ವದಂತಿ ಹಬ್ಬಿದೆ! ಈ ಬಳಿಕ ಜಗತ್ತಿನೆಲ್ಲೆಡೆ ಸೋಶಿಯಲ್ ಮೀಡಿಯಾದಲ್ಲಿ ಶಾಕಿಂಗ್ ನ್ಯೂಸ್ ವೈರಲ್ ಆಗಿದ್ದು, ಪಾಕ್ ಮತ್ತು ನಮ್ಮಲ್ಲೂ ಕೂಡ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಜೈಲಿನಲ್ಲೇ ನಿಗೂಢವಾಗಿ ಸಾವನ್ನಪ್ಪಿದ್ದಾರೆ ಎಂಬ ವಿಷಯ ಹರಿದಾಡತೊಡಗಿದೆ. ಹಾಗಾದ್ರೆ ಅಡಿಯಾಲಾ ಜೈಲಿನಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಕೊಲೆಯಾಗಿದ್ದಾರ?! ಒಂದಂತೂ ಸತ್ಯ. ಅಡಿಯಾಲಾ ಜೈಲಿನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಸಾವಿನ ಬಗ್ಗೆ ಅನಧಿಕೃತ ಹೇಳಿಕೆಗಳು ಸಾಮಾಜಿಕ ಮಾಧ್ಯಮದಲ್ಲಿ ಇದೀಗ ಟ್ರೆಂಡ್ ಆಗಿದೆ!

ಆಧಾರರಹಿತವಾದ ಈ ಹೇಳಿಕೆಗಳನ್ನು ಯಾವುದೇ ವಿಶ್ವಾಸಾರ್ಹ ಸಂಸ್ಥೆ ಅಥವಾ ಇಲಾಖೆ ಇದುವರೆಗೆ ದೃಢೀಕರಿಸಿಲ್ಲವಾದರೂ ಇಮ್ರಾನ್ ಖಾನ್ ಅವರ ಮೃತದೇಹ ಎನ್ನಲಾದ ಫೋಟೋವೊಂದು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ! ಇಮ್ರಾನ್ ಬಗ್ಗೆ ಹರಡಿರುವ ಸುದ್ದಿಗಳನ್ನು ಸತ್ಯಾಸತ್ಯತೆಯನ್ನು ತಿಳಿಯಲು ಇಮ್ರಾನ್ ಅವರ ಸೋದರಿಯರು ಇತ್ತೀಚೆಗೆ ಅಡಿಯಾಲಾ ಜೈಲಿಗೆ ಭೇಟಿ ನೀಡಿದ್ದಾಗ, ಅವರ ಮೇಲೆ ಜೈಲು ಪೊಲೀಸರು ಹಲ್ಲೆ ಮಾಡಿದ್ದಾರೆಂಬ ವಿಚಾರ ಈಗ ಭಾರಿ ವಿವಾದಕ್ಕೆ ಕಾರಣವಾಗಿದೆ. ಇದು ಇಮ್ರಾನ್ ಅವರ ಸಾವಿನ ಬಗ್ಗೆ ಇರುವ ಅನುಮಾನಗಳನ್ನು ಮತ್ತಷ್ಟು ಹೆಚ್ಚಿಸಿದೆ.



'ಪಾಕಿಸ್ತಾನ ತೆಹ್ರೀಕ್ ಎ ಇನ್ಸಾಫ್' ಪಕ್ಷದ ಸದಸ್ಯರ ಪ್ರಕಾರ, ಇಮ್ರಾನ್ ಖಾನ್ ಅವರ ಸಹೋದರಿಯರಾದ ನೂರಿನ್ ನಿಜಾವ್, ಅಲೀಮಾ ಖಾನ್ ಮತ್ತು ಡಾ. ಉಜ್ಮಾ ಖಾನ್ ಅವರು ಅಡಿಯಾಲಾ ಜೈಲಿನ ಹೊರಗೆ ಪ್ರತಿಭಟನೆ ನಡೆಸುತ್ತಿದ್ದರು. ತಮ್ಮ ಸಹೋದರನ ಆರೋಗ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿ, ಅವರನ್ನು ಭೇಟಿಯಾಗಲು ಅವಕಾಶ ನೀಡಬೇಕೆಂದು ಅವರು ಮನವಿ ಮಾಡುತ್ತಿದ್ದರು. ಆದರೆ, ಪೊಲೀಸರು ಯಾವುದೇ ಎಚ್ಚರಿಕೆ ನೀಡದೆ, ದಿಢೀರನೆ ಬೀದಿ ದೀಪಗಳನ್ನು ಆಫ್ ಮಾಡಿ, ಕತ್ತಲಲ್ಲಿ ಇಮ್ರಾನ್ ಸೋದರಿಯರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಹಾಗಾದ್ರೆ, ಕಳೆದ ಎರಡು ವರ್ಷಗಳಿಂದ ಜೈಲಿನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಜೈಲಿನ ಒಳಗಡೆ ನಿಗೂಢವಾಗಿ ಕೊಲೆ ಮಾಡಲಾಗಿದೆಯೇ? ಯಾರಿಂದಲೂ ನಿಖರ ಉತ್ತರ ಲಭ್ಯವಿಲ್ಲ. ಹೀಗಾಗಿ, ಇಮ್ರಾನ್ ಅವರ ಸಾವಿನ ಬಗ್ಗೆ ವ್ಯಾಪಕ ಊಹಾಪೋಹಗಳು ಹಬ್ಬಿವೆ. ಇಮ್ರಾನ್ ಅವರ ಪಕ್ಷವಾದ ಪಾಕಿಸ್ತಾನ್ ತೆಹ್ರೀಕ್ಇಇನ್ಸಾಫ್ (PTI)ನ ನಾಯಕರು ಮತ್ತು ಕಾರ್ಯಕರ್ತರೂ ಸಹ ಇಮ್ರಾನ್ ಜೈಲಿನಲ್ಲಿ ನಿಧನರಾಗಿದ್ದಾರೆ ಎಂದು ಹೇಳಿಕೊಂಡು ಧರಣಿ ಹೂಡಿದ್ದಾರೆ. ಈ ಮಧ್ಯೆ ಪಾಕಿಸ್ತಾನದ ಅಡಿಯಾಲಾ ಜೈಲಿನ ಅಧಿಕಾರಿಗಳು ಈ ಊಹಾಪೋಹವನ್ನು ಹೋಗಲಾಡಿಸಲು ಹೇಳಿಕೆಯನ್ನು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಇಮ್ರಾನ್ ಸಾವಿನ ಸುದ್ದಿಯನ್ನು ಅಡಿಯಾಲಾ ಜೈಲು 'ಆಧಾರರಹಿತ' ಎಂದು ಕರೆದಿದೆ. ಮಾಜಿ ಪ್ರಧಾನಿಯು ಆರೋಗ್ಯವನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ಹೇಳಲಾಗಿದೆ. ಇಮ್ರಾನ್ ಅವರನ್ನು ಅಡಿಯಾಲಾ ಜೈಲಿನಿಂದ ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ ಎಂಬ ಸುದ್ದಿಯನ್ನು ಸಹ ನಿರಾಕರಿಸಲಾಗಿದೆ. ಇಮ್ರಾನ್ ಅಡಿಯಾಲಾ ಜೈಲಿನಿಂದ ಸ್ಥಳಾಂತರಿಸಲಾಗಿದೆ ಎಂಬ ಸುದ್ದಿ ನಿಜವಲ್ಲ ಎಂದು ಜೈಲು ಅಧಿಕಾರಿಗಳು ತಿಳಿಸಿದ್ದಾರೆ. ಇಮ್ರಾನ್ ಸಂಪೂರ್ಣವಾಗಿ ಆರೋಗ್ಯವಾಗಿದ್ದಾರೆ. ಅಗತ್ಯವಿರುವ ಎಲ್ಲಾ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ ಎಂದು ಸಹ ಹೇಳಲಾಗಿದೆ.

ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಕೂಡ ಇಮ್ರಾನ್ ಜೈಲಿನಲ್ಲಿ ಆರೋಗ್ಯವಾಗಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅವರ ಪ್ರಕಾರ, ಪಾಕಿಸ್ತಾನದ ಮಾಜಿ ಪ್ರಧಾನಿಗೆ ಪಂಚತಾರಾ ಹೋಟೆಲ್‌ಗಳಲ್ಲಿಯೂ ಲಭ್ಯವಿಲ್ಲದ ಆಹಾರವನ್ನು ನೀಡಲಾಗುತ್ತಿದೆ. ಅವರು ಜೈಲಿನಲ್ಲಿ ಟಿವಿಯನ್ನು ಸಹ ವೀಕ್ಷಿಸುವ ಅವಕಾಶವಿದೆ. ಚಳಿಗಾಲದಲ್ಲಿ ಇಮ್ರಾನ್‌ಗಾಗಿ ಒಳ್ಳೆಯ ಹಾಸಿಗೆ ಮತ್ತು ಉಣ್ಣೆಯ ಕಂಬಳಿಯನ್ನು ನೀಡಲಾಗಿದೆಯಂತೆ!




## ಇವರೇ ಮೊದಲಿಗರಲ್ಲ!


**ಪಾ**ಕ್ ಜೈಲಿನಲ್ಲಿ ಕ್ರೂರ ಶಿಕ್ಷೆ ಅನುಭವಿಸಿದವರಲ್ಲಿ ಇಮ್ರಾನ್ ಮೊದಲಿಗರೇನಲ್ಲ. ಅಲ್ಲಿ ಮಾಜಿ ಪ್ರಧಾನಿಗಳನ್ನು, ಎದುರು ಮಾತಾಡುವ ಇತರೆ ಗಣ್ಯರನ್ನು ಹಾಲಿ ಪ್ರಧಾನಿಗಳು, ಸೇನಾ ಮುಖ್ಯಸ್ಥರು ಯಾವ್ಯಾವುದೋ ಆರೋಪ ಹೊರಿಸಿ ಬಂಧಿಸಿ ಜೈಲಿಗೆ ದಬ್ಬಿ ನರಳಿ ನರಳಿ ಸಾಯುವಂತೆ ಮಾಡುವುದು ಮಾಮೂಲಿಯಾಗಿದೆ!

ಮಾಜಿ ಪ್ರಧಾನಿ ಜುಲ್ಫಿಕರ್ ಬುಟ್ಟೋ, ಅವರ ಪತ್ನಿ ಬೆನಜಿರ್ ಬುಟ್ಟೋ, ನವಾಜ್ ಷರೀಫ್, ಮುಷರಫ್... ಇವರೆಲ್ಲ ಜೈಲಲ್ಲಿ ಚಿತ್ರಹಿಂಸೆ ಅನುಭವಿಸಿದ್ದರು. ಜುಲ್ಫಿಕರ್‌ಗೆ ಗಲ್ಲು ಶಿಕ್ಷೆ ಆಗಿತ್ತು. ಬೆನಜಿರ್ ಬುಟ್ಟೋ ವಿಶ್ವದ ನೆರವಿನಿಂದ ಜೈಲಿಂದ ಹೊರಬಂದರೂ ಕೂಡ ಬಾಂಬರ್ ಒಬ್ಬ ಅವರನ್ನು ಪಬ್ಲಿಕ್ ಪ್ಲೇಸ್‌ನಲ್ಲಿ ಅಹುತಿ ತೆಗೆದುಕೊಂಡ. ಸೇನಾ ಕ್ರಾಂತಿ ನಡೆಸಿ ಪ್ರಧಾನಿಯಾಗಿದ್ದ ಮುಷರಫ್, ಮಾಜಿಯಾದ ಬಳಿಕ ಜೈಲು ಸೇರಿದ್ದಲ್ಲದೆ, ದೇಶವನ್ನೇ ತೊರೆದು ಕಾಲ ಕ್ರಮೇಣ ಸತ್ತುಹೋದರು. ನವಾಜ್ ಷರೀಫ್ ಯಾವುದೋ ಖಾಯಿಲೆ ನೆವ ಹೇಳಿ ಚಿಕಿತ್ಸೆಗಾಗಿ ಅಂತೇಳಿ ವಿದೇಶ ಸೇರಿಕೊಂಡವರು ಇಂದಿಗೂ ಪಾಕ್ ಗೆ ಹಿಂತಿರುಗಿಲ್ಲ!

ಇವತ್ತು ಇಮ್ರಾನ್ ಖಾನ್‌ಗೆ ಚಿತ್ರಹಿಂಸೆ ಕೊಡುತ್ತಿರೋ ವ್ಯಕ್ತಿಗಳು ಕೂಡ ನಾಳೆ ಮಾಜಿ ಯಾದ ಬಳಿಕ ಅದೇ ಜೈಲು ಸೇರದಿದ್ದರೆ ಕೇಳಿ... ಎನ್ನುತ್ತಾರೆ, ಪಾಕ್ ಕುತಂತ್ರ ರಾಜಕಾರಣ ಬಲ್ಲವರು!! ☯











## ಡೆತ್ ಸೆಲ್‌ನಲ್ಲಿ ಚಿತ್ರಹಿಂಸೆ?!

**ಇ**ಮ್ರಾನ್ ಪುತ್ರ ಖಾಸಿಮ್ ಇದೀಗ ಮಾಧ್ಯಮಗಳ ಮುಂದೆ ಒಂದು ಹೇಳಿಕೆ ದಾಖಲಿಸಿ, ಈಗ ವಿಶ್ವಸಂಸ್ಥೆ ಮಧ್ಯ ಪ್ರವೇಸಿಸಿ ತಮಗೆ ನೇರವಾಗಬೇಕು ಎಂದು ಕೋರಿದ್ದಾರೆ! ತನ್ನ ತಂದೆ ಇಮ್ರಾನ್ ಖಾನ್ ಅವರನ್ನು ಕಳೆದ ಆರು ವಾರಗಳಿಂದ ಡೆತ್ ಸೆಲ್ ಎನ್ನುವ ಗರಿಷ್ಠ ಭದ್ರತಾ ಏಕಾಂತ ಕೊಠಡಿಯಲ್ಲಿ ಇರಿಸಲಾಗಿದ್ದು, ಕುಟುಂಬ ಭೇಟಿಗೂ ಅವಕಾಶ ನೀಡಿಲ್ಲ! ಅಲ್ಲಿಂದಲೂ ಫೋನ್ ಕರೆಗಳಿಲ್ಲ. ಅವರು ಜೀವಂತವಿರುವುದಕ್ಕೆ ಯಾವುದೇ ಪುರಾವೆಗಳಿಲ್ಲ! ನಾವು ಅವರೊಂದಿಗೆ ಯಾವುದೇ ಸಂಪರ್ಕದಲ್ಲಿಲ್ಲ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಇದು ಭದ್ರತಾ ಕ್ರಮವಲ್ಲ. ಅವರ ನಿಜವಾದ ಸ್ಥಿತಿಯನ್ನು ಮರೆಮಾಚಲು ಕೈಗೊಂಡಿರುವ ಉದ್ದೇಶಿತ ಪ್ರಯತ್ನ ಎಂದು ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ತಂದೆಯ ಸುರಕ್ಷತೆಗೆ ಸರ್ಕಾರ ಮತ್ತು ಆಡಳಿತವನ್ನು ಕಾನೂನುಬದ್ಧ ನೈತಿಕ ಮತ್ತು ಅಂತರರಾಷ್ಟ್ರೀಯವಾಗಿ ಹೊಣೆಗಾರರನ್ನಾಗಿ ಮಾಡುವುದಾಗಿ ಅವರು ಎಚ್ಚರಿಸಿದ್ದಾರೆ ಕೂಡ! ಅಲ್ಲದೆ, ಈ ವಿಚಾರವಾಗಿ ಅಂತರರಾಷ್ಟ್ರೀಯವಾಗಿ ವಿಶ್ವಸಂಸ್ಥೆ ಮಧ್ಯಪ್ರವೇಶಕ್ಕೆ ಮನವಿ ಮಾಡಿದ ಖಾಸಿಮ್, ಜಾಗತಿಕ ಮಾನವ ಹಕ್ಕುಗಳ ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಸಮುದಾಯವು ತುರ್ತಾಗಿ ಮಧ್ಯಪ್ರವೇಶಿಸಿ, ಇಮ್ರಾನ್ ಅವರು ಜೀವಂತವಿರುವುದಕ್ಕೆ ಪುರಾವೆ ಬಿಡುಗಡೆ ಮಾಡಬೇಕು. ನ್ಯಾಯಾಲಯದ ಆದೇಶದಂತೆ ಕುಟುಂಬ ಭೇಟಿ, ಏಕಾಂತ ಬಂಧನ ಅಂತ್ಯ ಮತ್ತು ರಾಜಕೀಯ ಕಾರಣಗಳಿಂದ ಬಂಧಿತರಾಗಿರುವ ತಮ್ಮ ತಂದೆಯ ಬಿಡುಗಡೆಗಾಗಿ ಒತ್ತಾಯಿಸಬೇಕೆಂದು ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಪಿಟಿಐ ಪಕ್ಷದ ಕಾರ್ಯಕರ್ತರು ಖಾಸಿಂ ಜೊತೆಯಲ್ಲಿದ್ದು,ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಿಡುಗಡೆಗಾಗಿ ಅಗ್ರಹಿಸಿದ್ದಾರೆ. ☯





ಅಂದಹಾಗೆ, ಇಸವಿ 2022ರಲ್ಲಿ ಪಾಕ್ ಸಂಸತ್ ನಲ್ಲಿ ನಡೆದ ಅವಿಶ್ವಾಸ ನಿರ್ಣಯ ಮತದಲ್ಲಿ ಇಮ್ರಾನ್ ಪದಚ್ಯುತಗೊಂಡಿದ್ದರು. ನಂತರ ಅವರನ್ನು ರಾಷ್ಟಕ್ಕೆ ಸಂಬಂಧಿಸಿದ ಅಮೂಲ್ಯ ವಸ್ತುಗಳನ್ನು ದುಡ್ಡಿಗೆ ಮಾರಿಕೊಂಡಿದ್ದಾರೆ, ಭಾರಿ ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪ ಹೊರಿಸಿ ಬಂಧಿಸಲಾಗಿತ್ತು. ಪಾಕ್ ಇತ್ತೀಚಿಗೆ ತನ್ನ ನೆಲದಲ್ಲಿ ಸಿಕ್ಕ ಅಪರೂಪದ ಖನಿಜವನ್ನು ಅಮೇರಿಕಕ್ಕೆ ರವಾನೆ ಮಾಡಿ ತನ್ನ ಆರ್ಥಿಕತೆಯನ್ನು ಸುಧಾರಿಸಿಕೊಳ್ಳುವ ನಿರ್ಧಾರ ಮಾಡಿದ ಸುದ್ದಿ ನಿಮಗೆಲ್ಲ ಗೊತ್ತಿರುತ್ತೆ. ಈ ಹಿನ್ನಲೆಯಲ್ಲಿ ಪಾಕಿಸ್ತಾನವು ಅಮೆರಿಕಕ್ಕೆ ವಿರಳ ಲೋಹದ ಮೊದಲ ಸರಕನ್ನು ರವಾನಿಸಿದೆ ಕೂಡ.

ಆರ್ಥಿಕ ಹಿಂಜರಿತದಿಂದ ಕೆಟ್ಟು ನಿಂತಿರುವ ದೇಶದ ಆರ್ಥಿಕತೆಗೆ ಇದು ಉತ್ತೇಜನ ನೀಡುವ ನಿರೀಕ್ಷೆ ಇದೆ ಜೊತೆಗೆ, ಇದು ಉದ್ಯೋಗ ಸೃಷ್ಟಿ ಮತ್ತು ತಂತ್ರಜ್ಞಾನ ವರ್ಗಾವಣೆಗೆ ನೆರವಾಗುವ ಆಶಯವೂ ಇದೆ. ಆದರೆ, ಹಾಲಿ ಪಾಕ್ ಸರ್ಕಾರದ ಈ ನಡೆಯನ್ನು ಕಳೆದ ಸೆಪ್ಟಂಬರ್‌ನಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ತೀವ್ರವಾಗಿ ಖಂಡಿಸಿದ್ದರು! ಇದರಿಂದ ಹಾಲಿ ಪ್ರಧಾನಿ ಶಹಬಾಜ್ ಕೋಪಗೊಂಡಿದ್ದರು ಎನ್ನಲಾಗಿದೆ. ಹೀಗಾಗಿ, ಜೈಲಿನಲ್ಲಿರುವ ಇಮ್ರಾನ್ ಖಾನ್‌ರನ್ನು ಏಕಾಂತವಾಗಿ ಸಣ್ಣ ಕೊಠಡಿಯಲ್ಲಿ ಇರಿಸಿ ಅಮಾನವೀಯವಾಗಿ ನೋಡಿಕೊಳ್ಳಲಾಗುತ್ತಿದೆ! ಹಾಗಂತ ಇಮ್ರಾನ್ ಅವರ ಸಹೋದರಿ ಮತ್ತು ಪುತ್ರರು ಹೇಳಿಕೊಂಡರೂ ಈ ಬಗ್ಗೆ ಅಲ್ಲಿನ ಮಾಧ್ಯಮಗಳ ಮುಂದೆ ಹೇಳಿಕೊಂಡಿದ್ದಾರೆ.

ಪಿಟಿಐ ಮುಖ್ಯಸ್ಥ ಇಮ್ರಾನ್ ಖಾನ್ ವಿರುದ್ಧ ರಾಷ್ಟ್ರದ ಅಮೂಲ್ಯ ಉಡುಗೊರೆಗಳನ್ನು ಮಾರಾಟ ಮಾಡಿದ ಪ್ರಕರಣಗಳು ಮತ್ತು ಇತರ ಭ್ರಷ್ಟಾಚಾರ ಪ್ರಕರಣಗಳಿವೆ. ಇಮ್ರಾನ್ ಹಲವಾರು ಪ್ರಕರಣಗಳಿಂದಾಗಿ ಎರಡು ವರ್ಷಗಳಿಗೂ ಹೆಚ್ಚು ಕಾಲ ಜೈಲಿನಲ್ಲಿದ್ದಾರೆ. ಪಾಕಿಸ್ತಾನದ ಕಾರಾಗೃಹ ಕಾನೂನುಗಳ ಪ್ರಕಾರ, ಕುಟುಂಬ ಸದಸ್ಯರು ವಾರಕ್ಕೊಮ್ಮೆ ಇಮ್ರಾನ್ ಅವರನ್ನು ಭೇಟಿ ಮಾಡಬಹುದು. ಆದರೆ ಹಾಲಿ ಪ್ರಧಾನಿ ಶಹಬಾಜ್ ಸರ್ಕಾರ ಈ ಕಾನೂನನ್ನು ಗೌರವಿಸುತ್ತಿಲ್ಲ ಎಂದು ಆರೋಪಿಸಲಾಗಿದೆ! ಕಳೆದ ಒಂದು ತಿಂಗಳಿಂದ ಇಮ್ರಾನ್ ಕುಟುಂಬಕ್ಕೆ ಜೈಲ್ ಒಳಗೆ ಹೋಗಲು ಎಂಟ್ರಿ ಸಿಕ್ಕಿಲ್ಲವಂತೆ! ಸಾವಿನ ಸುದ್ದಿ ಹರಡಲು ಮೂಲಕಾರಣ ಇದೇ ಎನ್ನಲಾಗಿದೆ.

ಯಸ್, ಇಮ್ರಾನ್ ಖಾನ್ ಅವರನ್ನು ಕಳೆದ ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ಜೈಲಿನಲ್ಲಿ ಭೇಟಿಯಾಗಲು ಸರ್ಕಾರ ಅವಕಾಶ ನೀಡಿಲ್ಲ. ಆಗಸ್ಟ್ 2023 ರಿಂದ ಇಮ್ರಾನ್ ಖಾನ್ ಅವರು ಹಲವು ಪ್ರಕರಣಗಳಲ್ಲಿ ಜೈಲಿನಲ್ಲಿದ್ದಾರೆ. ಈ ಹಿಂದೆ 'ಖೈಬರ್ ಪಖ್ತುಂಖ್ವಾ'ದ ಮುಖ್ಯಮಂತ್ರಿ ಸೋಹೈಲ್ ಆಫ್ರಿದಿ ಅವರು ಖಾನ್ ಅವರನ್ನು ಭೇಟಿಯಾಗಲು ಏಳು ಬಾರಿ ಪ್ರಯತ್ನಿಸಿದರೂ, ಜೈಲು ಅಧಿಕಾರಿಗಳು ಅದಕ್ಕೆ ಅವಕಾಶ ನೀಡಿರಲಿಲ್ಲ. ಈ ಅಧಿಕಾರಿಗಳು ಸೇನಾ ಅಧಿಕಾರಿಯೊಬ್ಬರ ನಿಯಂತ್ರಣದಲ್ಲಿದ್ದಾರೆ ಎಂದು ಇಮ್ರಾನ್ ಖಾನ್ ಸಹೋದರಿಯರು ಆರೋಪಿಸಿದ್ದಾರೆ.



ಜೈಲು ಅಧಿಕಾರಿಗಳ ನಡವಳಿಕೆ ಇಮ್ರಾನ್ ಖಾನ್ ಅವರ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ತೀವ್ರ ಕಳವಳ ಮೂಡಿಸಿವೆ ಎನ್ನಲಾಗಿದ್ದು ಅವರ ಬೆಂಬಲಿಗರು ಮತ್ತು ಕುಟುಂಬದವರು ಅವರ ಭೇಟಿಗೆ ಅವಕಾಶ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಜೈಲಿನೊಳಗೆ ಅವರ ಮೇಲೆ ಹಲ್ಲೆ ನಡೆದಿದೆ, ಅದರಿಂದಲೇ ಅಸುನೀಗಿದ್ದಾರೆ ಎಂಬ ವದಂತಿಗಳು ಹರಡಿದ್ದರಿಂದಾಗಿ ಪಾಕ್‌ನಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

ಪಿಟಿಐ ಕಾರ್ಯಕರ್ತರು ರಾವಲ್ಪಿಂಡಿ ಜೈಲು ಮುಂಭಾಗ ಧರಣಿ ಹೂಡಿದ್ದಾರೆ. ಪಾಕ್‌ನಲ್ಲಿರೋ ಇಮ್ರಾನ್ ಅಭಿಮಾನಿಗಳು ಕೂಡ ಅಲ್ಲಲ್ಲಿ ಸರ್ಕಾರದ ವಿರುದ್ಧ ಧರಣಿ ನಡೆಸುತ್ತಿದ್ದಾರೆ. ಇಷ್ಟೆಲ್ಲಾ ಆದರೂ ಅಲ್ಲಿನ ಪ್ರಧಾನಿ ಈ ಬಗ್ಗೆ ಸ್ಪಷ್ಟನೆ ನೀಡಿಲ್ಲ! ಜೈಲು ಅಧಿಕಾರಿಗಳು ಕೂಡ ಇಮ್ರಾನ್ ಮುಖ ತೋರಿಸುತ್ತಿಲ್ಲ!! ಘನ ನ್ಯಾಯಾಲಯದ ಅನುಮತಿಯ ಹೊರತಾಗಿಯೂ ಜೈಲು ಆಡಳಿತವು ಇಮ್ರಾನ್ ಕುಟುಂಬಕ್ಕೆ ಭೇಟಿಯಾಗೋ ಅವಕಾಶವನ್ನು ನಿರಾಕರಿಸುತ್ತಿರುವುದರಿಂದ ಅವರ ಕುಟುಂಬ ಮತ್ತು ಬೆಂಬಲಿಗರು ಭಾರಿ ಚಿಂತಿತರಾಗಿದ್ದಾರೆ.






ಅವರ ಸಹೋದರಿಯರು ಪಂಜಾಬ್ ಪ್ರಾಂತ್ಯದ ಐ.ಜಿ. ಅವರಿಗೆ ದೂರು ನೀಡಿದ್ದಾರೆ. ಇಮ್ರಾನ್ ಖಾನ್ ಅವರ ಆರೋಗ್ಯ ಸ್ಥಿತಿ ಮತ್ತು ಅವರು ಎಲ್ಲಿದ್ದಾರೆ ಎಂಬುದರ ಬಗ್ಗೆ ಜೈಲು ಆಡಳಿತವಾಗಲಿ ಅಥವಾ ಸರ್ಕಾರವಾಗಲಿ ಯಾವುದೇ ಮಾಹಿತಿಯನ್ನು ಒದಗಿಸುತ್ತಿಲ್ಲ ಎಂಬುದು ಅವರ ಪ್ರಮುಖ ಆರೋಪವಾಗಿದೆ. ಈ ಗೌಪ್ಯತೆ 'ಅವರು' ಚೆನ್ನಾಗಿಲ್ಲ.... ಎಂಬ ವದಂತಿಗಳಿಗೆ ಉತ್ತೇಜನ ನೀಡುತ್ತಿದೆಯಲ್ಲವೇ.... ☯


## ಇಮ್ರಾನ್ ಮತ್ತು ಬಾಲಿವುಡ್ ನಟಿಮಣಿಯರು!



**ಇ**ಮ್ರಾನ್ ಖಾನ್ ಪ್ರಧಾನಿ ಆಗುವ ಮುಂಚೆ ಸ್ಟಾರ್ ಕ್ರಿಕೆಟರ್ ಆಗಿದ್ದವರು. ಹೀಗಾಗಿ ಅವರಿಗೆ ಜಗತ್ತಿನೆಲ್ಲೆಡೆ ಅಭಿಮಾನಿಗಳಿದ್ದಾರೆ. ಇಮ್ರಾನ್ ಖಾನ್ ಅವರಿಗೆ ಅಧಿಕೃತವಾಗಿಯೇ ಮೂವರು ಹೆಂಡಿರು! ಬುಶ್ರ ಬೀಬಿ, ರೆಹಮ್ ಖಾನ್ ಮತ್ತು ಜೆಮಿಮ ಗೋಲ್ಡ್ ಸ್ಮಿತ್. ಸ್ಫುರದ್ರೂಪಿ 'ಕ್ರಿಕೆಟ್ ತಾರೆ' ಇಮ್ರಾನ್ ಖಾನ್ ಅವರ ಹೆಸರು ಅನೇಕ ಬಾಲಿವುಡ್ ತಾರೆಯರೊಂದಿಗೆ ತಳುಕು ಹಾಕಿಕೊಂಡಿತ್ತು.

ನಟಿ ಮೂನ್‌ಮೂನ್ ಸೇನ್ ನಡುವಿನ ಆತ್ಮೀಯತೆ ಬಲೇ ಫೇಮಸ್ ಆಗಿತ್ತು. ಕೆಲವು ಮಾಧ್ಯಮ ವರದಿಗಳ ಪ್ರಕಾರ, ಬಾಲಿವುಡ್ 'ದಿವಾ' ಜೀನತ್ ಅಮನ್ ಅವರೊಂದಿಗಿನ ಪ್ರೇಮ ಬಹಳ ಪ್ರಸಿದ್ಧವಾಗಿತ್ತು! ಈ ಜೋಡಿ ಲಂಡನ್‌ನಲ್ಲಿ ಭೇಟಿಯಾಗಿ ರೊಮ್ಯಾನ್ಸ್ ಮಾಡುತ್ತಿದ್ದರು ಎಂಬ ವದಂತಿಗಳಿವೆ.

1979ರಲ್ಲಿ ಪಾಕಿಸ್ತಾನ ತಂಡ ಭಾರತದಲ್ಲಿದ್ದಾಗ, ಇಮ್ರಾನ್ ಖಾನ್ ತಮ್ಮ 27ನೇ ಹುಟ್ಟುಹಬ್ಬವನ್ನು ಜೀನತ್ ಅಮನ್ ಅವರೊಂದಿಗೆ ಆಚರಿಸಿಕೊಂಡಿದ್ದರಂತೆ! ಇಮ್ರಾನ್ ಜೀನತ್‌ಳನ್ನು ವಿವಾಹವಾಗಲು ಬಯಸಿದ್ದರಂತೆ. ಆದರೆ ಜೀನತ್ ಅಮನ್ ಭಾರತವನ್ನು ಬಿಡಲು ಒಪ್ಪಲಿಲ್ಲವಾದ್ದರಿಂದ ಅವರ ಸಂಬಂಧವು ಮುಂದುವರಿಯಲಿಲ್ಲ ಎನ್ನಲಾಗಿದೆ.




ಇನ್ನು, ಇಮ್ರಾನ್ ಖಾನ್ ಅವರ ಹೆಸರು ಎವರ್ ಗ್ರೀನ್ ಸುಂದರಿ ರೇಖಾ ಅವರೊಂದಿಗೂ ಬೆಸೆದುಕೊಂಡಿತ್ತು! ಮಾತ್ರವಲ್ಲ, ಇಬ್ಬರ ಸಂಬಂಧ ಮದುವೆಯ ಹತ್ತಿರಕ್ಕೂ ಹೋಗಿತ್ತು ಎನ್ನಲಾಗಿದೆ. 'ಸ್ಟಾರ್'ಸಿನಿಮಾ ಪತ್ರಿಕೆಯಲ್ಲಿನ ವರದಿಯೊಂದು 'ರೇಖಾ ಇಮ್ರಾನ್ ವಿವಾಹವಾಗಲಿದ್ದಾರೆ' ಎಂಬ ಶೀರ್ಷಿಕೆ ನೀಡಿ ಮುಖಪುಟದಲ್ಲಿ ವರದಿ ಮಾಡಿತ್ತು. ಈ ಸುದ್ದಿಯ ಪ್ರಕಾರ, ಇಮ್ರಾನ್ ಖಾನ್ ಸುಮಾರು ಒಂದು ತಿಂಗಳ ಕಾಲ ಮುಂಬೈನಲ್ಲಿ ತಂಗಿದ್ದರು. ಜೊತೆಗೆ ಆಗಾಗ್ಗೆ ರೇಖಾ ಅವರೊಂದಿಗೆ ಬೀಚ್‌ನಲ್ಲಿ, ನೈಟ್‌ಕ್ಲಬ್‌ಗಳಲ್ಲಿ ಮತ್ತು ಅವರ ಮನೆಯಲ್ಲಿಯೂ ಕಾಣಿಸಿಕೊಳ್ಳುತ್ತಿದ್ದರು! ರೇಖಾಳ ತಾಯಿ ಇಮ್ರಾನ್ ಖಾನ್‌ನನ್ನು ಅಳಿಯನಂತೆ ಇಷ್ಟಪಟ್ಟಿದ್ದರು ಮತ್ತು ಅವರ ಮದುವೆಗೆ ಒಪ್ಪಿಗೆಯನ್ನೂ ನೀಡಿದ್ದರು. ಆದರೆ ಕಾಲ ಕ್ರಮೇಣ ಇಬ್ಬರೂ ಬೇರೆಯಾಗಲು ನಿರ್ಧರಿಸಿದರು ಎನ್ನಲಾಗಿದೆ! ರೇಖಾ ಅವರ ಬದುಕಲ್ಲಿ ಆಗಿನ Angry young man ಅಮಿತಾಬ್ ಬಚ್ಚನ್ ಎಂಟ್ರಿಯಾಗಿದ್ದೆ ಇಮ್ರಾನ್ ದೂರ ಸರಿಯಲು ಕಾರಣ ಎಂಬ ವಾದವೂ ಇದೆ!! ☯

# ಧರ್ಮಸ್ಥಳದ ಸೌಜನ್ಯ ಪ್ರಕರಣ ಸುಪ್ರೀಂ ಕೋರ್ಟ್‌ಗೆ!

ದಕ್ಷಿಣ ಕನ್ನಡ

ಮೋಹನ್ ಬೋಳಂಗಡಿ

ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಕಳೆದ 13 ವರ್ಷಗಳಿಂದ ಅಂಟಿರುವ ಕಳಂಕ ಅಂದರೆ ಧರ್ಮಸ್ಥಳದ ಆಡಳಿತಕ್ಕೆ ಒಳಪಟ್ಟಂತಹ ಉಜಿರೆ ಎಸ್‌ಡಿಎಂ ಕಾಲೇಜಿನ ಪಿಯುಸಿ ಕಲಾವಿಭಾಗದ ವಿದ್ಯಾರ್ಥಿನಿ ಸೌಜನ್ಯ ಅತ್ಯಾಚಾರ ಮತ್ತು ಹತ್ಯೆ. ಆರೋಪಿ ಕಾರ್ಕಳ ಕುಕ್ಕುಂದೂರಿನ ಸಂತೋಷ್‌ರಾವ್‌ನನ್ನು ಪೊಲೀಸರು ಬಂಧಿಸಿದ್ದರು. ಸ್ಥಳೀಯ ಪೊಲೀಸರು, ಸಿಓಡಿ ಮತ್ತು ಸಿಬಿಐ ಅಧಿಕಾರಿಗಳು ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಸಂತೋಷ್‌ರಾವ್ ಸಾಕ್ಷ್ಯಾಧಾರಗಳ ಕೊರತೆಯಿಂದ ನಿರ್ದೋಷಿ ಎಂದು ಪರಿಗಣಿಸಲ್ಪಟ್ಟು ಬೆಂಗಳೂರಿನ ಸಿಬಿಐ ನ್ಯಾಯಾಲಯದಿಂದ ಬಿಡುಗಡೆಗೊಂಡಿದ್ದರು. ತದನಂತರ ಮತ್ತೇ ಸೌಜನ್ಯಪರ ಹೋರಾಟ ಆರಂಭಗೊಂಡಿತ್ತು. ಆ ಹೋರಾಟ ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧವೇ ಆಗಿತ್ತು. ನೇರವಾಗಿ ಧರ್ಮಾಧಿಕಾರಿಗಳ ವಿರುದ್ಧವೇ ಆರೋಪವನ್ನು ಹೊರಿಸಲಾಗಿತ್ತು. ಸೌಜನ್ಯ ಹೆತ್ತವರು, ಮಾವಂದಿರು ಸೇರಿದಂತೆ ಹೋರಾಟಕ್ಕೆ ಇಳಿದಿದ್ದ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಜಯಂತ್ ಟಿ. ಮತ್ತಿತರರು ಧರ್ಮಸ್ಥಳದ ವಿರುದ್ಧವೇ ಆರೋಪ ಹೊರಿಸಿದಂತಹ ಸಂದರ್ಭದಲ್ಲಿ ಧರ್ಮಸ್ಥಳದ ಪರವಾಗಿ ಭಾರೀ ದೊಡ್ಡ ಪ್ರತಿ ಹೋರಾಟ ನಡೆದಿತ್ತು. ರಾಜ್ಯ ಹೈಕೋರ್ಟ್ ಸೌಜನ್ಯ ಪ್ರಕರಣದ ಮೇಲ್ಮನವಿಯನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ ಪ್ರಕರಣದಲ್ಲಿ ಆರೋಪಿಯಾಗಿದ್ದ ಸಂತೋಷ್ ರಾವ್ ಮತ್ತು ಸೌಜನ್ಯನ ತಂದೆ ಚಂದಪ್ಪಗೌಡರು ಹೈಕೋರ್ಟ್‌ಗೆ ಪ್ರತ್ಯೇಕವಾಗಿ ರಿಟ್‌ಅರ್ಜಿಯನ್ನು ಸಲ್ಲಿಸಿದ್ದರು. ರಾಜ್ಯ ಹೈಕೋರ್ಟ್ ಸಿಬಿಐನ ಮೇಲ್ಮನವಿ ಮತ್ತು ಎರಡೂ ರಿಟ್ ಪಿಟಿಶನ್‌ಗಳನ್ನು ವಿಚಾರಣೆ ನಡೆಸಿ ತಳ್ಳಿಹಾಕಿತ್ತು. ಮತ್ತೇ ಹೋರಾಟ ಆರಂಭಗೊಂಡ ಸಂದರ್ಭದಲ್ಲಿ ಹೋರಾಟಗಾರರ ತಂಡ ಈ ಹಿಂದೆ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸ್ವಚ್ಛತಾ ಕಾರ್ಮಿಕನಾಗಿದ್ದು, 2014ರಲ್ಲಿ ಕೆಲಸ ತೊರೆದಿದ್ದ ಮಂಡ್ಯ ಮೂಲದವನಾಗಿದ್ದು, ತಮಿಳುನಾಡಿನ ಈರೋಡಿನಲ್ಲಿ ವಾಸವಿದ್ದ ಸಿಎಚ್ ಚೆನ್ನಯ್ಯ ಎಂಬಾತನ ಮೂಲಕ ತಲೆಬುರುಡೆಯನ್ನು ಹಿಡಿದುಕೊಂಡು ಬಂದು ಧರ್ಮಸ್ಥಳದ ಸುತ್ತಮುತ್ತ ನೂರಾರು ಹೆಣ್ಣುಮಕ್ಕಳನ್ನು ಅತ್ಯಾಚಾರಗೈದು ಕೊಲೆಮಾಡಿ ಹೂತು ಹಾಕಲಾಗಿದೆ ಎಂದು ಆರೋಪ ಮಾಡಿದ್ದರು. ಇದು ದೇಶಾದ್ಯಂತ ಸಂಚಲನ ಸೃಷ್ಟಿ ಮಾಡಿತ್ತು. ಈ ಬಗ್ಗೆ ಪ್ರಗತಿಪರರು ಎಂದು ಹೇಳಿಕೊಳ್ಳುತ್ತಿರುವ ಎಡಪಂಥೀಯ ನಿಲುವಿನ ವಿಚಾರವಾದಿಗಳು ಮತ್ತು ವಕೀಲರ ತಂಡ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಮೇಲೆ ಒತ್ತಡ ಹೇರಿ ಎಸ್‌ಐಟಿ ರಚನೆಗೆ ಕಾರಣರಾಗಿದ್ದಾರೆ. ಎಡಿಜಿಪಿ ಪ್ರಣವ್ ಮೊಹಂತಿ ಅವರ ನೇತೃತ್ವದಲ್ಲಿ ಎಸ್‌ಐಟಿ ರಚನೆಯಾಗಿ ದೂರುದಾರ ಚೆನ್ನಯ್ಯ ತೋರಿಸಿದ ಹದಿಮೂರು ಸ್ಥಳಗಳಲ್ಲದೇ ಹೆಚ್ಚುವರಿಯಾಗಿ ಮತ್ತೆ ನಾಲ್ಕು ಸ್ಥಳಗಳನ್ನು ಅಗೆದರೂ ಮೃತದೇಹಗಳನ್ನು ಹೂತಿಟ್ಟ ಕುರುಹುಗಳು ಪತ್ತೆಯಾಗಲಿಲ್ಲ. ಪತ್ತೆಯಾಗಿದ್ದ ಅಸ್ಥಿಪಂಜರವೊಂದು ಗಂಡಸಿದ್ದು ಎಂದು ಖಚಿತವಾಗಿ ಅದರ ವಾರೀಸುದಾರರು ಪತ್ತೆಯಾಗಿದ್ದರು. ಚೆನ್ನಯ್ಯ ಹಿಡಿದುಕೊಂಡು ಬಂದಿದ್ದ ತಲೆಬುರುಡೆಯು 45ರ ಹರೆಯದ ಗಂಡಸಿನದ್ದು ಎಂದು ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಖಚಿತವಾಗಿತ್ತು. ಈ ಎಲ್ಲಾ ಹಿನ್ನೆಲೆಯಲ್ಲಿ ತನಿಖೆ ನಡೆಸಿದ್ದ ಎಸ್‌ಐಟಿಯು ದೂರುದಾರ ಚೆನ್ನಯ್ಯನನ್ನೇ ಆರೋಪಿಯನ್ನಾಗಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿ ಶಿವಮೊಗ್ಗ ಜೈಲಿಗೆ ಕಳುಹಿಸಿತ್ತು. ನಾಲ್ಕು ತಿಂಗಳ ಕಾಲ ತನಿಖೆ ನಡೆಸಿದ ಎಸ್‌ಐಟಿ 3992 ಪುಟಗಳ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಈ ಮಧ್ಯೆ ಜಿಲ್ಲಾ ಸೆಶನ್ಸ್ ನ್ಯಾಯಾಲಯವು ನ್ಯಾಯಾಂಗ ಬಂಧನದಲ್ಲಿದ್ದ ಚೆನ್ನಯ್ಯನಿಗೆ ತಾಂತ್ರಿಕ ಕಾರಣಗಳಿಂದ 12 ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿದ್ದು, ಷರತ್ತು ಪೂರೈಸಲಾಗದೆ ಇನ್ನೂ ಶಿವಮೊಗ್ಗ ಜೈಲಿನಲ್ಲಿಯೇ ಇದ್ದಾನೆ.


ಸೌಜನ್ಯ


ಕುಸುಮಾವತಿ


ಸಂತೋಷ್ ರಾವ್

ಈ ಮಧ್ಯೆ ಶ್ರೀ ಕ್ಷೇತ್ರ ಧರ್ಮಸ್ಥಳದ ಪರವಾಗಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಜನಪ್ರತಿನಿಧಿ ಗಳು ಧರ್ಮಸ್ಥಳಕ್ಕೆ ರಾಜ್ಯದಾದ್ಯಂತದಿಂದ ಜಾಥಾ ನಡೆಸಿದ್ದು, ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜೆಯೇಂದ್ರ ನೇತೃತ್ವದ ಬಿಜೆಪಿ ನಿಯೋಗ ಸೌಜನ್ಯಳ ಮನೆಗೆ ಭೇಟಿ ನೀಡಿ ತಾಯಿ ಕುಸುಮಾವತಿ ಅವರಲ್ಲಿ ಸೌಜನ್ಯ ನ್ಯಾಯಕ್ಕಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವಂತೆಯೂ ಅದಕ್ಕೆ ತಗಲುವ ಖರ್ಚನ್ನು ಪಕ್ಷ ಭರಿಸುತ್ತದೆ ಎಂಬ ಭರವಸೆ ನೀಡಿದ್ದರು. ಆ ಸಂದರ್ಭದಲ್ಲಿ ಈ ಮಾತಿಗೆ ಮನ್ನಣೆ ನೀಡದ ಕುಸುಮಾವತಿಯವರು ಇದೀಗ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸದೆ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರು ತನಿಖೆ ನಡೆಸುವಂತೆ ಸ್ಪೆಷಲ್ ಲೀವ್ ಪಿಟಿಶನ್ ಸಲ್ಲಿಸಿದ್ದರೆ ಸೌಜನ್ಯ ಹಂತಕ ಸಂತೋಷ್‌ರಾವ್ ಕೂಡಾ ಸುಪ್ರೀಂಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದಾನೆ.



ಬೆಂಗಳೂರಿನ ಸಿಬಿಐ ನ್ಯಾಯಾಲಯ ಸಂತೋಷ್‌ರಾವ್‌ನನ್ನು ಖುಲಾಸೆಗೊಳಿಸಿ ತೀರ್ಪು ನೀಡಿತ್ತು. ಆ ತೀರ್ಪನ್ನು ಪ್ರಶ್ನಿಸಲು ಸೌಜನ್ಯ ಹೆತ್ತವರಿಗೆ ಅವಕಾಶ ಇತ್ತು. ಅವರು ಪ್ರಶ್ನಿಸಲಿಲ್ಲ. ಆದರೆ ಸಿಬಿಐ ಆ ತೀರ್ಪಿನ ವಿರುದ್ಧ ಹೈಕೋರ್ಟ್‌ನ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ ಸಂದರ್ಭದಲ್ಲಿ ಸೌಜನ್ಯಳ ತಂದೆ ಚಂದಪ್ಪ ಗೌಡರು ಈ ಪ್ರಕರಣದ ಮರು ತನಿಖೆ ನಡೆಸಬೇಕು ಎಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರೆ ಪ್ರಕರಣದ ಆರೋಪಿ ಸಂತೋಷ್‌ರಾವ್ ತನ್ನನ್ನು 5 ವರ್ಷಗಳ ಕಾಲ ನ್ಯಾಯಾಂಗ ಬಂಧನದಲ್ಲಿ ವಿನಾಕಾರಣ ಇರಿಸಲಾಗಿದ್ದು, ನನಗೆ 50 ಲಕ್ಷ ರೂಪಾಯಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದ. ಈ ಮೂರು ಅರ್ಜಿಗಳನ್ನು ಏಕ ಕಾಲದಲ್ಲಿ ವಿಚಾರಣೆ ನಡೆಸಿದ ರಾಜ್ಯ ಹೈಕೋರ್ಟ್‌ನ ವಿಭಾಗೀಯ ಪೀಠ 2024 ಜುಲೈ 16ರಂದು ವಜಾಗೊಳಿಸಿ ತೀರ್ಪು ನೀಡಿತ್ತು.

ಈ ತೀರ್ಪಿನ ವಿರುದ್ಧ ಸಿಬಿಐ ಸುಪ್ರೀಂ ಕೋರ್ಟ್ ಗೆ ಮೇಲ್ಮನವಿ ಸಲ್ಲಿಸಿಲ್ಲ. ರಿಟ್ ಪಿಟಿಶನ್ ವಜಾ ಆಗಿದ್ದ ಆದೇಶದ ವಿರುದ್ಧ ಚಂದಪ್ಪ ಗೌಡರು ಮತ್ತು ಸಂತೋಷ್ ರಾವ್ ಸುಪ್ರೀಂ ಕದ ತಟ್ಟಲಿಲ್ಲ. ಬದಲಾಗಿ ಬುರುಡೆ ಕಥೆಯನ್ನು ಸೃಷ್ಟಿಸಿ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆಸಿ ಇದೀಗ ಎಸ್‌ಐಟಿ ತನಿಖೆಯಲ್ಲಿ ಸಿಕ್ಕಿ ಬೀಳುವ ಹಂತದಲ್ಲಿ ಕುಸುಮಾವತಿ ಮತ್ತು ಸಂತೋಷ್‌ರಾವ್ ಪರ ಸುಪ್ರೀಂ ಕೋರ್ಟ್‌ನಲ್ಲಿ ದೋಷಪೂರಿತ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿದೆ. ಸುಪ್ರೀಂ ಕೋರ್ಟ್ ಎರಡೂ ಅರ್ಜಿಗಳನ್ನು ವಿಚಾರಣೆಗೆ ಸ್ವೀಕರಿಸಿ ದೋಷಗಳನ್ನು ಗುರುತಿಸಿ, ದೋಷಗಳ ಪಟ್ಟಿಗೆ ಸೇರಿಸಿದ್ದ, ಎರಡೂ ಅರ್ಜಿಗಳ ದೋಷಗಳನ್ನು ಸರಿಪಡಿಸಲು 90 ದಿನಗಳ ಕಾಲಾವಕಾಶ ನೀಡಿದೆ. ಒಂದು ವೇಳೆ ನಿಗದಿತ ಅವಧಿಯೊಳಗೆ ದೋಷಗಳನ್ನು ಸರಿಪಡಿಸದಿದ್ದಲ್ಲಿ ಎರಡೂ ಅರ್ಜಿಗಳು ಸ್ವಯಂ ಆಗಿ ವಜಾಗೊಳ್ಳಲಿದೆ.

ಸಂತೋಷ್ ರಾವ್ ಸೆ.2ರಂದು ತಾನು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ರಾಜ್ಯ ಹೈಕೋರ್ಟ್ ವಜಾಗೊಳಿಸಿದ್ದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರೆ ಸೌಜನ್ಯಳ ತಾಯಿ ಕುಸುಮಾವತಿಯವರು ನ.19ರಂದು ಅರ್ಜಿ ಸಲ್ಲಿಸಿದ್ದಾರೆ. ಮೇಲ್ಮನವಿ ಸಲ್ಲಿಸಲು ಅನುಮತಿ ಪಡೆಯುವುದು ಈ ಸ್ಪೆಷಲ್ ಲೀವ್ ಪಿಟಿಷನ್‌ನ ಉದ್ದಶವಾಗಿತ್ತು. ವಿಚಾರಣೆಗೆ ಬರುವ ಮೊದಲೇ ಅರ್ಜಿಗಳು ದೋಷಪೂರಿತವಾಗಿರುವುದರಿಂದ ವಿಚಾರಣೆ ಸ್ಥಗಿತಗೊಳ್ಳುವಂತಾಗಿದೆ.

### ಏನೇನು ದೋಷಗಳು?

ಎರಡೂ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಕೂಲಂಕಷವಾಗಿ ಪರಿಶೀಲನೆ ನಡೆಸಿದಾಗ ಗಂಭೀರ ಸ್ವರೂಪದ ದೋಷಗಳು ಕಂಡುಬಂದಿದೆ. ಸಂತೋಷ್ ರಾವ್ ಸಲ್ಲಿಸಿದ್ದ ಅರ್ಜಿಯಲ್ಲಿ ಅತ್ಯಾಚಾರದ ಪ್ರಕರಣಗಳಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದಂತಹ ಸಂತ್ರಸ್ಥೆಯ ಗುರುತನ್ನು ಮರೆಮಾಚುವಲ್ಲಿ ವಿಫಲವಾಗಿರುವುದು ಕಂಡುಬಂದಿದೆ. ಅಫಿದಾವಿತ್ ಮತ್ತು ದಾಖಲೆಗಳನ್ನು ಸಮರ್ಪಕವಾಗಿ ನಿಯಮಾನುಸಾರ ಸೀಲ್ ಮಾಡಿದ ಕವರ್‌ನಲ್ಲಿ ಸಲ್ಲಿಸದಿರುವುದು, ಅರ್ಜಿಯ ಪ್ರಮುಖ ಪ್ಯಾರಾಗಳಲ್ಲಿ ತಪ್ಪು ದಿನಾಂಕ ಮತ್ತು ಕಡ್ಡಾಯ ಮಾಹಿತಿಯ ಕೊರತೆ ಇದೆ. ಅರ್ಜಿ ಸಲ್ಲಿಸಲು ನಿಗದಿತ ಅವಧಿ ಗಿಂತ 276 ದಿನಗಳ ವಿಳಂಬವಿದ್ದು, ಕ್ಷಮಿಸಲು ಕೋರಿದ್ದ ಅರ್ಜಿ ಅಪೂರ್ಣವಾಗಿದೆ ಎಂದು ಸುಪ್ರೀಂ ಕೋರ್ಟ್ ಪಟ್ಟಿ ಮಾಡಿದೆ.

ಕುಸುಮಾವತಿ ಸಲ್ಲಿಸಿದ್ದ ಅರ್ಜಿಯಲ್ಲಿ ಪ್ರಕರಣದ ಮೂಲ ದಾಖಲೆ ನಾಪತ್ತೆಯಾಗಿದೆ. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರೈಂ ನಂ. 250/12ರ ಪ್ರತಿಯನ್ನೇ ಸಲ್ಲಿಸಲಿಲ್ಲ. ಕೆಲವು ಅರ್ಜಿಗಳಿಗೆ ಸಹಿಯೇ ಹಾಕಲಿಲ್ಲ. ರಿಜಿಸ್ಟ್ರೀಯ ಸೂಚನೆಗೆ ವಿರುದ್ಧವಾಗಿ ಸಂತ್ರಸ್ಥೆಯ ವಿವರಗಳನ್ನು ಅರ್ಜಿಯಲ್ಲಿ ಸೇರಿಸಲಾಗಿದೆ. ಅರ್ಜಿ ಸಲ್ಲಿಕೆಗೆ ವಿಳಂಬವಾಗಿದ್ದು, ಕ್ಷಮಿಸಲು ಕೋರಿ ಸಲ್ಲಿಸಲಾದ ಅರ್ಜಿಯಲ್ಲಿ ಅಗತ್ಯ ಪ್ರಮಾಣ ಪತ್ರ ಮತ್ತು ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಲಾಗಿಲ್ಲ. ಈ ಎಲ್ಲಾ ಕಾರಣಗಳನ್ನು ಮುಂದಿಟ್ಟು ಸುಪ್ರೀಂಕೋರ್ಟ್ ಅರ್ಜಿಗಳ ವಿಚಾರಣೆಯನ್ನು ಸದ್ಯಕ್ಕೆ ಅಮಾನತ್‌ನಲ್ಲಿಟ್ಟಿದೆ.

90ದಿನಗಳ ಒಳಗೆ ಈ ಎಲ್ಲಾ ದೋಷಗಳನ್ನು ಸರಿಪಡಿಸಿಕೊಂಡು ಅರ್ಜಿದಾರರ ವಕೀಲರ ತಂಡವು ಮರು ಅರ್ಜಿ ಸಲ್ಲಿಸಬೇಕಾಗುತ್ತದೆ. ಹಾಗಾದರೆ ಮಾತ್ರ, ಸುಪ್ರೀಂಕೋರ್ಟ್ ಮೇಲ್ಮನವಿ ಸಲ್ಲಿಸಲು ಅನುಮತಿ ನೀಡುವುದನ್ನು ಪರಿಗಣಿಸಲಿದ್ದು, ಇಬ್ಬರ ಅರ್ಜಿಗಳು ಕಾನೂನು ಬದ್ಧವಾಗಿದ್ದರೆ ಸೌಜನ್ಯ ಪ್ರಕರಣದ ಮರು ತನಿಖೆಗೆ ಮತ್ತು ಆರೋಪಿ ಸಂತೋಷ್‌ರಾವ್‌ಗೆ ಪರಿಹಾರ ನೀಡುವ ಬಗ್ಗೆ ವಿಚಾರಣೆ ನಡೆಸಲಿದೆ.


ಚೆನ್ನಯ್ಯ

# ಜೆಡಿಎಸ್ ಪಕ್ಷಕ್ಕೀಗ ಬೆಳ್ಳಿ ಹಬ್ಬದ ಸಂಭ್ರಮ! ಸಿದ್ದು ವಿರುದ್ಧ ಕಿಡಿಕಾರಿದ ದೇವೇಗೌಡರು!!




ಮಹಾನ್ ಮುತ್ಸದ್ಧಿ ಹೆಚ್.ಡಿ. ದೇವೇಗೌಡರ ಸಾಧನೆಗಳ ಪೈಕಿ ಜೆಡಿಎಸ್ ಪಕ್ಷ ಸ್ಥಾಪನೆ ಮಾಡಿದ್ದು ಒಂದಾಗಿದೆ. ಕರ್ನಾಟಕ ರಾಜ್ಯದ ಹೆಮ್ಮೆಯ ಪ್ರಾದೇಶಿಕ ಪಕ್ಷ ಜೆಡಿಎಸ್ ಎಂಬುದರಲ್ಲಿ ಅನುಮಾನವಿಲ್ಲ. ಜೆಡಿಎಸ್ ಪಕ್ಷಕ್ಕೆ ಈವಾಗ ಬೆಳ್ಳಿಹಬ್ಬದ ಸಂಭ್ರಮ. ಈ ಹಿನ್ನಲೆಯಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಬೆಳ್ಳಿ ಹಬ್ಬದ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಸದರಿ ಕಾರ್ಯಕ್ರಮವನ್ನು ಉದ್ಘಾಟಿಸಲು ಸಾಕ್ಷಾತ್ ದೇವೇಗೌಡರೇ ಆಗಮಿಸಿದ್ದರು. ಬಳಿಕ ಮುತ್ಸದ್ಧಿ ದೇವೇಗೌಡರು ಕಾರ್ಯಕರ್ತರು ಹಾಗೂ ಮುಖಂಡರನ್ನು ಉದ್ದೇಶಿಸಿ ಭಾಷಣ ಮಾಡಿದರು.

ಯಾವುದೇ ಕಾರಣಕ್ಕೂ ನಾವು ಎನ್‌ಡಿಎ ಜೊತೆಗಿನ ಮೈತ್ರಿಯನ್ನು ಕಡಿದುಕೊಳ್ಳುವುದಿಲ್ಲ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ನಾಯಕತ್ವದಲ್ಲಿ ವಿಶ್ವಾಸ ಇರಿಸಿದ್ದೇವೆ ಎಂದು ಮೊದಲಿಗೆ ಹೇಳಿದರು. ನಾವು ಎನ್‌ಡಿಎ ಜತೆ ಇದ್ದೇವೆ. ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ವಿಶ್ವಾಸ ಇಟ್ಟಿದ್ದೇವೆ. ಅವರ ನೇತೃತ್ವದಲ್ಲಿ ಬಲಿಷ್ಠ ಸರ್ಕಾರ ಇದೆ. ಇದನ್ನು ನಮ್ಮ ಕಾರ್ಯಕರ್ತರು, ಮುಖಂಡರು ಯಾರು ಮರೆಯಬಾರದು ಎಂದರು.



ತುರ್ತು ಪರಿಸ್ಥಿತಿ ಹೇರಿದಾಗ ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಿದ ಜಯಪ್ರಕಾಶ ನಾರಾಯಣ ಅವರ ಜತೆಯಲ್ಲಿ ನಾವು, ಅವತ್ತಿನ ಬಿಜೆಪಿಯವರು ಒಟ್ಟಿಗೆ ಕೆಲಸ ಮಾಡಿದ್ದೇವೆ. ಹೀಗಾಗಿ ನಾವು ರಾಷ್ಟ್ರದ ಹಿತದೃಷ್ಟಿಯಿಂದ ಒಟ್ಟಾಗಿ ಕೆಲಸ ಮಾಡಬೇಕಿದೆ. ಕಾಂಗ್ರೆಸ್ ಪಕ್ಷದ ಕೆಟ್ಟ ಆಡಳಿತಕ್ಕೆ ಪಾಠ ಕಲಿಸಬೇಕು ಎಂದು ಗುಡುಗಿದರು.

### ಸಿದ್ದರಾಮಯ್ಯ ವಿರುದ್ಧ ತೀವ್ರ ವಾಗ್ದಾಳಿ

ಜೆಡಿಎಸ್ ಪಕ್ಷದಲ್ಲೇ ಇದ್ದಿದ್ದರೆ ನಾನು ಸಿಎಂ ಆಗುತ್ತಿರಲಿಲ್ಲ ಎಂದು ಸಿದ್ದರಾಮಯ್ಯ ಅವರು ಚಾಮರಾಜನಗರದಲ್ಲಿ ಹೇಳಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ದೇವೇಗೌಡರು, ಅವರನ್ನು ನಾನು ಸಿಎಂ ಮಾಡಲು ತಯಾರಿದ್ದೆ. ಆದರೆ ಸೋನಿಯಾ ಗಾಂಧಿ ಅವರು ಧರ್ಮಸಿಂಗ್ ಅವರನ್ನು ಸಿಎಂ ಮಾಡಲು ಪಟ್ಟು ಹಿಡಿದರು. ಕಾಶ್ಮೀರದಲ್ಲಿ ಗುಲಾಮ್ ನಬಿ ಆಜಾದ್ ಅವರನ್ನು ಡಿಸಿಎಂ ಮಾಡಿದ್ದೀರಿ, ಮುಫ್ತಿ ಮೊಹಮ್ಮದ್ ಸಯ್ಯಿದ್ ಅವರನ್ನು ಸಿಎಂ ಮಾಡಿದ್ದೀರಿ. ಅದೇ ರೀತಿ ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ಸಿಎಂ ಮಾಡಿ ಎಂದು ಮೂರು ಬಾರಿ ಸೋನಿಯಾ ಗಾಂಧಿ ಮನೆ ಬಾಗಿಲಿಗೆ ಹೋಗಿ ಕೇಳಿದ್ದೆ. ಸಿದ್ದರಾಮಯ್ಯ ಬೇಕಿದ್ದರೆ ಸೋನಿಯಾ ಗಾಂಧಿ ಅವರನ್ನು ಕೇಳಲಿ, ಅವರು ಇನ್ನೂ ಬದುಕಿದ್ದಾರೆ ಎಂದು ಹೇಳಿದರು!

ಸಿದ್ದರಾಮಯ್ಯ ನೀವು ಸತ್ಯ ಹೇಳಲಿಲ್ಲ, ಯಾವ ಸಂದರ್ಭದಲ್ಲಿ ಏನು ಬೇಕಾದರೂ ಮಾತನಾಡುತ್ತೀರಿ. ಆದರೆ ಸೋನಿಯಾ ಗಾಂಧಿ ಇದ್ದಾರೆ, ಅವರಿಗೆ ಸತ್ಯ ಗೊತ್ತಿದೆ. ಅಹಮದ್ ಪಟೇಲ್ ಅವರಿಗೆ ತಿಳಿದಿತ್ತು. ಸಿದ್ಧರಾಮಯ್ಯ ಅವರನ್ನು ಸಿಎಂ ಮಾಡಲು ಸೋನಿಯಾ ಗಾಂಧಿ ಸುತಾರಾಂ ಒಪ್ಪಲಿಲ್ಲ. ನೀವು ನಮ್ಮ ಸಿಎಂ ಅಭ್ಯರ್ಥಿಯನ್ನಾಗಿ ಒಪ್ಪಿಕೊಳ್ಳಬೇಕು, ಇಲ್ಲವಾದರೆ ನಾವು ಚುನಾವಣೆಗೆ ಹೋಗುತ್ತೇವೆ ಎಂದರು. ನಾವು ವಿಧಿ ಇಲ್ಲದೆ ಒಪ್ಪಿಕೊಂಡೆವು ಎಂದು ದೇವೇಗೌಡರು ಹಳೆಯ ವಿಷಯವನ್ನು ಮೆಲುಕು ಹಾಕಿದರು.



ಆ ಚುನಾವಣೆಯಲ್ಲಿ ಜೆಡಿಎಸ್ 58 ಸೀಟು ಗೆಲ್ಲೋಕೆ ಚನ್ನಪ್ಪ ಎನ್ನುವ ಲೇವಾದೇವಿದಾರರೊಬ್ಬರ ಮನೆಗೆ ರಾತ್ರಿ ಹನ್ನೆರಡು ಹೊತ್ತಿನಲ್ಲಿ ಹೋಗಿ ಎರಡು ಚೆಕ್ ಕೊಟ್ಟು ಎರಡು ಕೋಟಿ ಸಾಲ ತಂದೆ! ಆಗ ಈ ಸಿದ್ದರಾಮಯ್ಯ ಏನು ಮಾಡುತ್ತಿದ್ದರು? ಮಾತಾಡುವಾಗ ಕನಿಷ್ಠ ಪ್ರಮಾಣದ ಕ್ರಿಯೆ ಇರಬೇಕು, ಪ್ರಾಮಾಣಿಕತೆ ಇರಬೇಕು. ಸುಳ್ಳು ಹೇಳಬಾರದು ಎಂದು ದೇವೇಗೌಡರು ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

ರಾಮಕೃಷ್ಣ ಹೆಗಡೆ ಅವರು ಎಂಟು ವರ್ಷ ಸಿಎಂ ಆಗಿದ್ದರು. ಅವರು ನಿಮ್ಮನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದಾರಾ? ನಿಮ್ಮನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದು ಈ ದೇವೇಗೌಡ. ಹೆಗಡೆ ಆಗಲಿ ಬೊಮ್ಮಾಯಿ ಆಗಲಿ ನಿಮ್ಮನ್ನು ಹಣಕಾಸು ಮಂತ್ರಿ ಮಾಡಲಿಲ್ಲ. ನೀವೇನೂ ಮಹಾ ಮೇಧಾವಿ ಆಗಿದ್ದೀರಾ? ನೀವು ಆಕ್ಸ್




ಫರ್ಡ್ ವಿವಿಯಲ್ಲಿ ಹಣಕಾಸು ಪದವಿ ಪಡೆದಿದ್ರಾ? ನೀವು ಸುಪ್ರೀಂ ಕೋರ್ಟ್ ಲಾಯರ್ ಏನೂ ಅಲ್ಲ, ಹೈಕೋರ್ಟ್‌ನಲ್ಲಿಯೂ ಲಾಯರ್ ಅಲ್ಲ. ಮೈಸೂರಿನಲ್ಲಿ ಎಲ್ಲೋ ಒಂದೆರಡು ಕೇಸು ವಾದ ಮಾಡಿಕೊಂಡು ಇದ್ದವರು. ನಾನು ಬದುಕಿದ್ದೇನೆ, ಸೋನಿಯಾ ಗಾಂಧಿ ಕೂಡ ಬದುಕಿದ್ದಾರೆ. ಸುಳ್ಳು ಹೇಳಬೇಡಿ. ಜೆಡಿಎಸ್ ಪಕ್ಷಕ್ಕೆ ನಿಮ್ಮ ದೇಣಿಗೆ ಹೇಳಿ? ಎಂದು ದೇವೇಗೌಡರು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಹೆಗಡೆ ನಿಮ್ಮನ್ನು ಕನ್ನಡ ಕಾವಲು ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದರು. ಆಮೇಲೆ ಇನ್ನೊಮ್ಮೆ ಪಶು ಸಂಗೋಪನೆ ಅಥವಾ ಯಾವುದೋ ಖಾತೆ ನಿರ್ವಹಿಸಿದಿರಿ. ವೀರಪ್ಪ ಮೊಯಿಲಿ ಸಿಎಂ ಆಗಿದ್ದಾಗ ಸರಕಾರಿ ನೌಕರರ ಸಂಬಳ ಕೊಡೋಕೆ ದುಡ್ಡು ಇಲ್ಲ ಎಂದು ಪಿಯರ್‌ಲೆಸ್ ಕಂಪನಿಯಿಂದ 200 ಕೋಟಿ ಸಾಲ ತಂದರು. ಅದಾದ ಮೇಲೆ ಬಂದ ಸರ್ಕಾರದಲ್ಲಿ ನಿಮ್ಮನ್ನು ಹಣಕಾಸು ಮಂತ್ರಿ ಮಾಡಿದೆ. ಆ ಸಾಲ ತಂದ ಸಂದರ್ಭದಲ್ಲಿ ರಾಜ್ಯದಲ್ಲಿ ಹಣಕಾಸು ಸ್ಥಿತಿ ಹದಗೆಟ್ಟು ಹೋಗಿತ್ತು. ನಿಮಗೆ ಗೊತ್ತಿಲ್ಲವೇ? ರಾಜ್ಯದ ಹಣಕಾಸು ಸ್ಥಿತಿ ಸರಿ ಮಾಡಲೇಬೇಕು ಎಂದು ನಾನು ನಿರ್ಧಾರ ಕೈಗೊಂಡು ಈ ವ್ಯಕ್ತಿಯನ್ನು ಹಣಕಾಸು ಮಂತ್ರಿಯನ್ನಾಗಿ ಮಾಡಿದೆ. ಅದೇ ನಾನು ಮಾಡಿದ ತಪ್ಪು ಎಂದು ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

### ಉಪ ಮುಖ್ಯಮಂತ್ರಿ ಮಾಡಿದ್ದಕ್ಕೆ ಕಣ್ಣೀರಿಟ್ಟಿದ್ದೇನೆ

ಅನೇಕ ಸಂದರ್ಭಗಳಲ್ಲಿ ನಾನು ಈ ವ್ಯಕ್ತಿಯನ್ನು ಉಪ ಮುಖ್ಯಮಂತ್ರಿ ಮಾಡಿದ್ದಕ್ಕೆ ಕಣ್ಣೀರು ಇಟ್ಟಿದ್ದೇನೆ. ಇವರನ್ನು ಹಣಕಾಸು ಮಂತ್ರಿ ಮಾಡಿದ್ದು ಹೆಗಡೆ ಅಲ್ಲ, ನಾನು! ಅದನ್ನು ಆ ಮನುಷ್ಯ ನೆನಪು ಇಟ್ಟುಕೊಳ್ಳಬೇಕು ಎಂದು ಗುಡುಗಿದ ಗೌಡರು, ಸಿದ್ದರಾಮಯ್ಯ ನಮ್ಮ ಪಕ್ಷಕ್ಕೆ ಏನು ಕೊಡುಗೆ ನೀಡಿಲ್ಲ. ನಾನು ಆ ವ್ಯಕ್ತಿಯನ್ನು ಪಕ್ಷದ ರಾಜ್ಯಾಧ್ಯಕ್ಷ ಮಾಡಬೇಕು ಎಂದು ಹೊರಟಾಗ ಹೆಗಡೆ ಅವರು ತಮ್ಮ ಕೋಣೆಯಲ್ಲಿ ನನ್ನ ಕೈ ಹಿಡಿದು ಯಾರನ್ನಾದರೂ ಮಾಡು, ಸಿದ್ದರಾಮಯ್ಯನನ್ನು ಮಾತ್ರ ಮಾಡಬೇಡ ಎಂದು ಹೇಳಿದರು. ನಾನು ಹೆಗಡೆ ಅವರ ಮಾತು ಕೇಳಲಿಲ್ಲ... ಎಂದು ಹೇಳಿದರು.

ನಾನು ಜಾಲಪ್ಪ ಅವರಿಂದ ನಾನು ರಾಜಕೀಯವಾಗಿ ಬೆಳೆದೆ ಅಂತಾರೆ. ಆ ಸಮುದಾಯಕ್ಕೆ ಒಂದು ಮೆಡಿಕಲ್ ಕಾಲೇಜು ಇರಲಿ ಎಂದು ನಾನು ಮಂಜೂರು ಮಾಡಿದೆ. ದೇವರಾಜು ಅರಸು ಹೆಸರಿನಲ್ಲಿ ಸ್ಥಾಪನೆ ಆಗಲಿ ಎಂದು ಕೊಟ್ಟೆ. ಇವತ್ತು ಅದು ಜಾಲಪ್ಪ ಮೆಡಿಕಲ್ ಕಾಲೇಜು ಆಗಿದೆ. ಅವರ ಕುಟುಂಬದ ಆಸ್ತಿಯಾಗಿದೆ. ಸಮುದಾಯದ ಆಸ್ತಿ ಆಗಬೇಕಿದ್ದ ಮೆಡಿಕಲ್ ಕಾಲೇಜು ಅವರ ಕುಟುಂಬದ ಆಸ್ತಿಯಾಗಿ ಬದಲಾಗಿದೆ. ಇದು ಇವರ ಸಾಮಾಜಿಕ ನ್ಯಾಯ! ಎಂದು ದೇವೇಗೌಡರು ಲೇವಡಿ ಮಾಡಿದರು.

ಅಹಿಂದ ಸಮಾವೇಶ ಮಾಡಲು ಹೊರಟಾಗ ಅದನ್ನು ಪಕ್ಷದ ವೇದಿಕೆಯಲ್ಲಿ ಮಾಡಿ ಎಂದು ಸೂಚಿಸಿದೆ. ಅದನ್ನು ಅವರು ಕೇಳಲಿಲ್ಲ. ಪ್ರತ್ಯೇಕವಾಗಿ ಹುಬ್ಬಳ್ಳಿಯಲ್ಲಿ ಸಮಾವೇಶ ಮಾಡುವುದಾಗಿ ಹೊರಟರು. ಕೊನೆಗೆ ಬೇರೆ ದಾರಿ ಇರಲಿಲ್ಲ. ಹೀಗಾಗಿ ನಾನು ಅವರನ್ನು ಪಕ್ಷದಿಂದ ಹೊರ ಹಾಕಲು ನಿರ್ಧಾರ ತೆಗೆದುಕೊಂಡೆ. ಈ ಬಗ್ಗೆ ನನಗೆ ಯಾವ ಪಶ್ಚಾತ್ತಾಪವು ಇಲ್ಲ. ಇಂತಹವರು ಅನೇಕರು ಬಂದಿದ್ದಾರೆ, ಹೋಗಿದ್ದಾರೆ. ಹೆದರುವುದಿಲ್ಲ, ನಾನು ಪಕ್ಷ ಕಟ್ಟುತ್ತೇನೆ. ಎಲ್ಲಿ ಕರೆದರೂ ಹೋಗುತ್ತೇನೆ. ದೇವೇಗೌಡ ಸುಮ್ಮನೆ ಕೂರುವ ವ್ಯಕ್ತಿಯಲ್ಲ ಎಂದರು. ಈ ಇಳಿ ವಯಸ್ಸಿನಲ್ಲೂ ಅವರ ಉತ್ಸಾಹ ಆದರ್ಶನೀಯ, ಅನುಕರಣೀಯ...

## ಅಲ್ಲಿ ಜೆಡಿಯು ಇಲ್ಲಿ ಜೆಡಿಎಸ್!!

ಉತ್ತರದಲ್ಲಿ ಜೆಡಿಯು, ದಕ್ಷಿಣದಲ್ಲಿ ಜೆಡಿಎಸ್ ಎಂದು ಘೋಷಣೆ ಮೊಳಗಿಸಿದ ದೇವೇಗೌಡರು, ಅಲ್ಲಿ ನಿತೀಶ್ ಕುಮಾರ್, ಇಲ್ಲಿ ಕುಮಾರಸ್ವಾಮಿ ಎಂದು ಒತ್ತಿ ಹೇಳಿದರು. ನಿತೀಶ್ ಅವರು ಮೂವತ್ತು ವರ್ಷದಿಂದಲೂ ರಾಜಕಾರಣದಲ್ಲಿ ಇದ್ದಾರೆ. ಈಗ ಹತ್ತನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ಮಾಡಿದ್ದಾರೆ. ಅವರು ಬಹಳ ಸೂಕ್ಷ್ಮವಾಗಿ ರಾಜಕಾರಣ ಮಾಡಿಕೊಂಡಿದ್ದಾರೆ. ಇದನ್ನು ನಾವು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ಅವರು ಮಾರ್ಮಿಕವಾಗಿ ನುಡಿದರು.

ಕಾಂಗ್ರೆಸ್ ಪಕ್ಷದ ಒಳ ಜಗಳ ಇದೀಗ ಬಹಿರಂಗ ಹಂತ ತಲುಪಿದೆ. ಮತ್ತೆ ಪಕ್ಷ ಕಟ್ಟಲು ಇದು ಒಳ್ಳೆ ಸಮಯ. ಈಗ ಕಷ್ಟಪಟ್ಟರೆ ಇನ್ನೆರಡು ವರ್ಷದಲ್ಲಿ ಮತ್ತೆ ಫಲ ಉಣ್ಣಬಹುದು. ಬಿಜೆಪಿ ದೋಸ್ತಿ ಇರುವಾಗ ಜೆಡಿಎಸ್ ಮುಖಂಡರಿಗೆ ಹಾಗೂ ಕಾರ್ಯಕರ್ತರಿಗೆ ದಾರಿ ಸುಲಭವಾಗಿಯೇ ಇದೆ. ಮತ್ತೆ ಪಕ್ಷ ಕಟ್ಟುವ ಬೆಳೆಸುವ ಕೆಲಸ ಈಗಿಂದಲೇ ಶುರುವಾಗಬೇಕಿದೆ!

ಅಂದಹಾಗೆ, ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾಗಿ ಅದ್ಭುತ ಸಾಹಸಗಳಿಗೆ ಕೈ ಹಾಕಿದ್ದಾರೆ. ನೆರೆಯ ಆಂಧ್ರದಲ್ಲಂತು ದೊಡ್ಡ ದೊಡ್ಡ ಯೋಜನೆಗಳಿಗೆ ಚಾಲನೆ ಕೊಡಲಾಗಿದೆ. ಅದೇ ರೀತಿ ಕರ್ನಾಟಕದಲ್ಲಿಯೂ ಒಳ್ಳೆ ಕೆಲಸಗಳು ಆಗಲಿವೆ. ಹೆಚ್‌ಡಿಕೆ ದಕ್ಷಿಣದ ಉಕ್ಕಿನ ಮನುಷ್ಯ ಆಗುವ ದಿನಗಳು ದೂರವಿಲ್ಲ. ಜೆಡಿಎಸ್ ಪಕ್ಷ ಹಾಗೂ ಹೆಚ್.ಡಿ. ಕುಮಾರಸ್ವಾಮಿ ಅವರ ಕೈ ಬಲಪಡಿಸದಿದ್ದರೆ ನಷ್ಟ ಬೇರಾರಿಗೂ ಅಲ್ಲ, ನಮಗೇನೇ. ರಾಜ್ಯ ನಿವಾಸಿಗಳೇ ಚೆನ್ನಾಗಿ ಯೋಚಿಸಿ...

# ಸೌಜನ್ಯ ಫೈಲ್ಸ್



8

ನಿರೂಪಣೆ :

ಮೋಹನ್ ಬೋಳಂಗಡಿ

# ಯಶೋಧ ಹೇಳಿಕೆಯಲ್ಲಿ ಕಂಡು ಬಂತು ವಿರೋಧಾಭಾಸ!

ಸಂತ್ರಸ್ತೆ ಸೌಜನ್ಯಳ ತಾಯಿ ಕುಸುಮಾವತಿಯವರು ನಾಲ್ವರು ಯುವಕರಾದ ನಿಶ್ಚಲ್ ಜೈನ್, ಧೀರಜ್ ಕೆಲ್ಲ, ಉದಯ್ ಜೈನ್ ಮತ್ತು ಮಲ್ಲಿಕ್ ಜೈನ್ ಅವರ ಹೆಸರುಗಳನ್ನು ಪ್ರಸ್ತಾಪಿಸಿದ್ದರು. ಯಾವುದೇ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಯಾರದ್ದೇ ಹೆಸರುಗಳು ಪ್ರಸ್ತಾಪವಾದರೆ ಅವರನ್ನು ವಿಚಾರಿಸಲೇಬೇಕಾದ ಅನಿವಾರ್ಯತೆ ತನಿಖಾಧಿಕಾರಿಗಳಿಗೆ ಇರುತ್ತದೆ. ತನಿಖಾಧಿಕಾರಿಗಳ ಗಮನಕ್ಕೆ ಬಂದಿದ್ದಂತಹ ಅಂಶ ಎಂದರೆ ನಿಶ್ಚಲ್ ಜೈನ್ ಧರ್ಮಸ್ಥಳದಲ್ಲಿ ಇರಲಿಲ್ಲ. ಮತ್ತು ಇತರ ಮೂವರ ಆತ್ಮೀಯ ಸಂಪರ್ಕದಲ್ಲೂ ಇರಲಿಲ್ಲ. ಆದ್ದರಿಂದ ಘಟನೆ ನಡೆದ ದಿನದಂದು ನಾಲ್ವರು ಮಣ್ಣಸಂಕದ ಬಳಿ ಒಟ್ಟಾಗಿ ಇರಲು ಸಾಧ್ಯವಿರಲಿಲ್ಲ. ಆದರೆ ಮೂವರು ಇರಬಹುದಾದ ಸಾಧ್ಯತೆಗಳು ಇದ್ದಿದ್ದರಿಂದ ಅವರನ್ನು ಕರೆದು ವಿಚಾರಿಸಿದ್ದರು. ಅವರು ವಿಚಾರಣೆಯ ಸಂದರ್ಭದಲ್ಲಿ ಘಟನೆ ನಡೆದ ಸಮಯದಲ್ಲಿ ಘಟನಾ ಸ್ಥಳದಿಂದ ಸುಮಾರು10ರಿಂದ 30 ಕಿಮೀ.ದೂರದಲ್ಲಿ ಇದ್ದದ್ದು ಸ್ಪಷ್ಟವಾಗಿತ್ತು. ಆ ಮೂವರು ಯುವಕರು ನೀಡಿದಂತಹ ಹೇಳಿಕೆಯನ್ನು ಪುನರ್ ಪರಿಶೀಲನೆ ನಡೆಸಲಾಗಿತ್ತು. ತಾಂತ್ರಿಕವಾಗಿ ದೃಢಪಡಿಸಿಕೊಳ್ಳಲಾಗಿತ್ತು.



ಆ ನಾಲ್ವರ ಹೆಸರುಗಳನ್ನು ಕುಸುಮಾವತಿಯವರು ಪ್ರಸ್ತಾಪಿಸಿದ ಸಂದರ್ಭದಲ್ಲಿ ತನ್ನ ತಂಗಿ ಯಶೋಧ ಮನೆಗೆ ಬರುತ್ತಿದ್ದ ಸಂದರ್ಭದಲ್ಲಿ ಅವರನ್ನು ಮಣ್ಣಸಂಕದ ಬಳಿ ನೋಡಿದ್ದಾಗಿ ತಿಳಿಸಿದ್ದಳು ಎಂದು ಹೇಳಿದ್ದರು. ಹಾಗಾದರೆ ಕುಸುಮಾವತಿಯವರು ಅವರನ್ನು ನೋಡಿರಲಿಲ್ಲ. ಬದಲಾಗಿ ತಂಗಿ ಮಾತಿನ ಭರದಲ್ಲಿ ಹೇಳಿದಂತಹ ಮಾತುಗಳನ್ನು ನಂಬಿ ತನಿಖಾಧಿಕಾರಿ ರುದ್ರಮುನಿಯವರ ಎದುರಲ್ಲಿ ಆ ವಿಷಯವನ್ನು ಸ್ಪಷ್ಟಪಡಿಸಿದ್ದರು. ಈ ಹಂತದಲ್ಲಿ ಡಿವೈಎಸ್ಪಿ ರುದ್ರಮುನಿ ಅವರಿಗೆ ಯಶೋಧಾಳನ್ನು ತನಿಖೆಗೆ ಒಳಪಡಿಸುವ ಅನಿವಾರ್ಯತೆ ಇತ್ತು. ಅದಕ್ಕಾಗಿ ಅವರು ಯಶೋಧಾಳಿಗೆ ಪೊಲೀಸ್ ನೋಟೀಸು ನೀಡಿದ್ದರು. ಅದರಂತೆ ಯಶೋಧಾ ಅವರ ಮುಂದೆ ಹಾಜರಾಗಿದ್ದರು. ತನಿಖಾಧಿಕಾರಿಯವರು ಯಶೋಧಾಳನ್ನು ಕೂಲಂಕಷವಾಗಿ ವಿಚಾರಣೆ ನಡೆಸಿದರು. ಘಟನೆ ನಡೆದ ದಿನದಂದು ತನ್ನ ಮನೆಯಿಂದ ಪಾಂಗಾಳದ ಮೂಲ ಮನೆಗೆ ಬರುವ ಕಾರಣ ಏನು ಇತ್ತು ಎಂಬ ಪ್ರಶ್ನೆಗೆ ಯಶೋಧಾ ಸಾವಧಾನವಾಗಿ ಉತ್ತರಿಸಿದ್ದಳು. ಪ್ರತೀವರ್ಷದಂತೆ ಆ ವರ್ಷವೂ ಪಾಂಗಾಳದ ಮೂಲ ಮನೆಯಲ್ಲಿ ಹೊಸ ಅಕ್ಕಿ ಊಟ ಮಾಡುವ ಸಂಪ್ರದಾಯ ಇದೆ. ಆ ಸಂದರ್ಭದಲ್ಲಿ ಹಿರಿಯರು ಇರುವುದರಿಂದ ಇಡೀ ಮನೆಯ ಸದಸ್ಯರು ಒಟ್ಟು ಸೇರುತ್ತೇವೆ. ಆದ್ದರಿಂದ ಮೂಲ ಮನೆಗೆ ಹೋಗಿದ್ದೆ ಎಂಬ ಉತ್ತರ ಬಂದಿತ್ತು.

ತನಿಖಾಧಿಕಾರಿಯವರ ಎರಡನೇಯ ಪ್ರಶ್ನೆ ತಟಕ್ಕನೆ ಎದುರಾಗಿತ್ತು. ತನ್ನ ಮನೆಯಿಂದ ಮೂಲ ಮನೆಗೆ ಹೋದದ್ದು ಹೇಗೆ ಎಂಬುದು. ಅದಕ್ಕೆ ಯಶೋಧಾ ಅವರು ಯಾವುದೇ ಗಲಿಬಿಲಿಗೊಳ್ಳದೆ ರಿಕ್ಷಾದಲ್ಲಿ ಹೋಗಿದ್ದೆ ಎಂದು ವಿವರಿಸಿದ್ದರು. ರಿಕ್ಷಾದಲ್ಲಿ ಹೋಗುವಾಗ ನೇತ್ರಾವತಿ ಸ್ನಾನಘಟ್ಟದ ಮೂಲಕವೇ ಹಾದು ಹೋಗಿದ್ದಾ ಎಂಬ ಪ್ರಶ್ನೆಗೆ ಹೌದು ಎನ್ನುವ ಉತ್ತರ ಬಂದಿತ್ತು. ನೇತ್ರಾವತಿ ಸ್ನಾನಘಟ್ಟದಲ್ಲಿ ತುಂಬಾ ಮಂದಿ ಭಕ್ತರು ಇದ್ದಿರಬಹುದಲ್ಲವೇ ಎಂಬ ಪ್ರಶ್ನೆಗೂ ಹೌದು ಎನ್ನುವ ಉತ್ತರ ಲಭಿಸಿತ್ತು. ಆ ಸಂದರ್ಭದಲ್ಲಿ ಪರಿಚಿತರು ಯಾರಾದರೂ ಅಲ್ಲಿ ಕಾಣಲು ಸಿಕ್ಕಿದ್ದರೇ ಎಂಬ ಪ್ರಶ್ನೆ ಎದುರಾದಾಗ ಯಶೋಧಾ ಅವರು ಆಲೋಚನೆ ಮಾಡಿ ಇಲ್ಲ ಎಂದು ಉತ್ತರಿಸಿದ್ದರು. ಸ್ನಾನಘಟ್ಟದಿಂದ ಮುಂದಕ್ಕೆ ಹೋಗುತ್ತಿದ್ದಾಗ ಪರಿಚಯ ಉಳ್ಳಂತಹ ಯಾರಾದರೂ ವ್ಯಕ್ತಿಗಳು ಇದ್ದರಾ ಎಂಬ ಪ್ರಶ್ನೆಗೂ ಯಶೋಧಾ ಅವರ ಉತ್ತರ ನಕರಾತ್ಮಕವಾಗಿತ್ತು. ಯಶೋಧಾ ಅವರ ವಿಚಾರಣೆಯ ಸಂದರ್ಭದಲ್ಲಿ ಈ ಹಿಂದೆ ಕುಸುಮಾವತಿಯವರು ಹೇಳಿದ್ದ ಮಾತಿಗೆ ಪುಷ್ಠಿ ನೀಡುವಂತಹ ಹೇಳಿಕೆ ಬರಲಿಲ್ಲ. ಮೇಲ್ನೋಟಕ್ಕೆ ಅವರಿಬ್ಬರಲ್ಲಿ ಒಬ್ಬರಾದರೂ ಸುಳ್ಳು ಹೇಳುತ್ತಿದ್ದಾರೆ ಎಂಬುದು ತನಿಖಾಧಿಕಾರಿಗಳಿಗೆ ಸ್ಪಷ್ಟವಾಗಿತ್ತು. ಹೆಚ್ಚು ಸ್ಪಷ್ಟವಾದದ್ದು ಎಂದರೆ ಕುಸುಮಾವತಿಯವರ ಹೇಳಿಕೆ ಯಾರೋ ಹೇಳಿಕೊಟ್ಟ ರೀತಿಯಲ್ಲಿ ಇತ್ತು ಎಂಬುದು. ಆದ್ದರಿಂದ ತನಿಖಾಧಿಕಾರಿಗಳು ಯಶೋಧಾ ಅವರ ಹೇಳಿಕೆಗೆ ಅಷ್ಟೊಂದು ಮಹತ್ವ ನೀಡಲಿಲ್ಲ.



ಧೀರಜ್ ಕೆಲ್ಲ



ಉದಯ್ ಜೈನ್



ಮಲ್ಲಿಕ್ ಜೈನ್



ನಿಶ್ಚಲ್ ಜೈನ್

ತದನಂತರದ ಸಿಓಡಿ ತನಿಖಾಧಿಕಾರಿಗಳ ತನಿಖೆಯಲ್ಲಿ ಸ್ಪಷ್ಟವಾದ ಅಂಶ ಎಂದರೆ ಸೌಜನ್ಯಳನ್ನು ಅದೇ ಸ್ಥಳದಲ್ಲಿ ಅತ್ಯಾಚಾರಗೈದು ಕೊಲೆ ಮಾಡಲಾಗಿದೆ ಎಂದು. ಆರೋಪಿ ಸಂತೋಷ್‌ರಾವ್ ನ್ಯಾಯಾಂಗ ಬಂಧನದಲ್ಲಿದ್ದ. ಮಂಗಳೂರಿನ ಸಬ್ ಜೈಲಿನಲ್ಲಿ ವಿಚಾರಣಾಧೀನ ಖೈದಿಯಾಗಿದ್ದ. ಆತನನ್ನು ಈ ಹಿಂದೆ ಬೆಳ್ತಂಗಡಿ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ತನಿಖೆ ನಡೆಸಿದ್ದರು. ಆತನ ದೇಹದ ಮೇಲಿದ್ದ ಗಾಯದ ಗುರುತುಗಳನ್ನು ಕೆ.ಎಸ್.ಹೆಗ್ಡೆ ಮೆಡಿಕಲ್ ಕಾಲೇಜು ಆಸ್ಪತ್ರೆಯ ಫಾರೆನ್ಸಿಕ್ ವಿಭಾಗದ ತಜ್ಞರಾದ ಡಾ. ಮಹಾಬಲೇಶ್ ಶೆಟ್ಟಿ ಅವರು ಪರಿಶೀಲನೆ ನಡೆಸಿ ವರದಿ ನೀಡಿದ್ದರು. ಸೌಜನ್ಯ ಮೃತದೇಹದ ಪೋಸ್ಟ್‌ಮಾರ್ಟಂ ನಡೆಸಿದ್ದ ಡಾ. ಆದಂ ಮತ್ತು ಡಾ. ರಶ್ಮಿ ಅವರು ಪೋಸ್ಟ್ ಮಾರ್ಟಂ ವರದಿ ಒಪ್ಪಿಸಿದ್ದರು. ಆದ್ದರಿಂದ ಅಷ್ಟೂ ಮಂದಿಯನ್ನು ಸಿಓಡಿ ತನಿಖಾಧಿಕಾರಿಗಳು ಭೇಟಿ ಮಾಡಿ ಅವರಿಗೆ ನೋಟೀಸು ನೀಡಿ ವಿಚಾರಣೆ ನಡೆಸಿದ್ದರು. ಇವರೆಲ್ಲರ ವಿಚಾರಣೆಯಲ್ಲಿ ಕಂಡುಬಂದ ಏಕಮಾತ್ರ ಅಂಶ ಎಂದರೆ ಸೌಜನ್ಯಳನ್ನು ಮಣ್ಣಸಂಕದ ಅದೇ ಸ್ಥಳದಲ್ಲಿ ಅತ್ಯಾಚಾರ ನಡೆಸಿ ಕೊಲೆಗೈಯ್ಯಲಾಗಿದೆ ಎಂಬ ಅಂಶ. ಅಲ್ಲದೇ ಆ ಕೃತ್ಯವನ್ನು ಒಬ್ಬನೇ ಮಾಡಿದ್ದಾನೆ ಸದ್ಯ ಇರುವಂತಹ ಸಾಕ್ಷ್ಯಾಧಾರಗಳ ಹಿನ್ನೆಲೆಯಲ್ಲಿ ಸಂತೋಷ್ ರಾವ್ ಅಪರಾಧಿ ಎಂಬ ತೀರ್ಮಾನಕ್ಕೆ ತನಿಖಾಧಿಕಾರಿಗಳು ಬಂದಿದ್ದರು. ಅದರಂತೆ ತನಿಖೆ ನಡೆಸಿ ತನಿಖಾಧಿಕಾರಿ ರುದ್ರಮುನಿ ಅವರು ಎಲ್ಲಾ ರೀತಿಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಸಂತೋಷ್‌ರಾವ್‌ನನ್ನು ಬಂಧಿಸಿದ 87ನೇ ದಿವಸಕ್ಕೆ ಬೆಳ್ತಂಗಡಿ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದರು. 2013 ಜನವರಿಯಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿತ್ತು. ಸಂತೋಷ್‌ರಾವ್ ಪರ ಯಾವುದೇ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರಲಿಲ್ಲ. ಅಲ್ಲಿಗೆ ಪ್ರಕರಣದ ಪ್ರಖರತೆ ಕಡಿಮೆಯಾಗುತ್ತಾ ಬಂದಿತ್ತು. ಸೌಜನ್ಯಪರ ಹೋರಾಟವೂ ನಿಂತಿತ್ತು.



ಸಂತೋಷ್ ರಾವ್



ಕುಸುಮಾವತಿ

ಈ ಮಧ್ಯೆ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಸ್ಥಾಪಕಾಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಅವರ ಕೆಲವು ಸಂಗಡಿಗರು ಸೇರಿಕೊಂಡು ಸೌಜನ್ಯ ಪ್ರಕರಣಕ್ಕೆ ತಿರುವು ನೀಡಲು ನಿರ್ಧರಿಸಿದ್ದರು. ಯಾವುದೇ ರೀತಿಯ ಹೋರಾಟಗಳನ್ನು ಸಂಘಟಿಸಿದರೆ ಅದಕ್ಕೆ ಸರಿಯಾದ ರೀತಿಯಲ್ಲಿ ಪ್ರಚಾರ ಸಿಗುವುದಿಲ್ಲ. ಸ್ಥಳೀಯ ಪತ್ರಕರ್ತರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಆಡಳಿತ ವರ್ಗದವರೊಂದಿಗೆ ಉತ್ತಮ ಸಂಬಂಧ ಇರುವುದರಿಂದ ಅವರು ಸರಿಯಾದ ರೀತಿಯಲ್ಲಿ ಹೋರಾಟದ ವರದಿಗಳನ್ನು ಮಾಡುವುದಿಲ್ಲ. ಮಾಧ್ಯಮದ ಬೆಂಬಲ ಇಲ್ಲದೆ ಜನಸಾಮಾನ್ಯರನ್ನು ರೊಚ್ಚಿಗೆಬ್ಬಿಸಲು ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಮನಗಂಡಿದ್ದ ಮಹೇಶ್ ಶೆಟ್ಟಿ ತಿಮರೋಡಿ ಅವರು ಈ ಬಗ್ಗೆ ಸಂಪರ್ಕ ಸೇತುವಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯೊಬ್ಬರ ಹುಡುಕಾಟದಲ್ಲಿದ್ದರು. ಮಹೇಶ್ ತಿಮರೋಡಿಯವರಿಗೆ ಈ ಹಿಂದೆ ಹೋರಾಟದಲ್ಲಿ ಸಾತ್ ನೀಡಿದ್ದ ಸ್ಥಳೀಯ ಕಮ್ಯೂನಿಷ್ಟ್ ಪಕ್ಷದ ಮುಂದಾಳುಗಳು ಹೋರಾಟದಿಂದ ಹಿಂದೆ ಸರಿದಿದ್ದರು. ಬೆಳ್ತಂಗಡಿಯಲ್ಲಿ ನಡೆದಿದ್ದ ಹೋರಾಟದ ಸಂದರ್ಭದಲ್ಲಿ ಸಂಗ್ರಹವಾಗಿದ್ದ ಸುಮಾರು 25 ಲಕ್ಷ ರೂ.ಗಳನ್ನು ತಿಮರೋಡಿಯವರೊಬ್ಬರೇ ನುಂಗಿದ್ದಾರೆ. ಹೋರಾಟಕ್ಕೆ ಅನುಕೂಲವಾಗುವಂತೆ ಸ್ಟೇಜ್, ಪೆಂಡಾಲ್, ಧ್ವನಿವರ್ಧಕ ಮತ್ತು ಅನುಮತಿಗಾಗಿ ಖರ್ಚು ಮಾಡಿದ್ದಂತಹ ಹಣವನ್ನೂ ಸಹ ನೀಡಿಲ್ಲ ಎಂಬ ಕೋಪದಿಂದ ಕಮ್ಯೂನಿಸ್ಟ್ ಮುಖಂಡರು ಹೋರಾಟದಿಂದ ಹಿಮ್ಮುಖರಾಗಿದ್ದರು. ಆದ್ದರಿಂದ ಮಹೇಶ್ ಶೆಟ್ಟಿ ತಿಮರೋಡಿಯವರು ಈ ಹೋರಾಟವನ್ನು ರಾಜ್ಯ ಮಟ್ಟಕ್ಕೆ ಕೊಂಡೊಯ್ಯುವಂತಹ ತೀರ್ಮಾನವನ್ನು ಕೈಗೊಂಡಿದ್ದರಾದರೂ ಅದಕ್ಕೆ ಸರಿಯಾದ ರೀತಿಯಲ್ಲಿ ರೂಪುರೇಶೆ ಸಿದ್ಧಪಡಿಸಲು ಸಾಧ್ಯವಾಗಿರಲಿಲ್ಲ. ಇಂತಹ ಸಂದರ್ಭದಲ್ಲೇ ಮಹೇಶ್ ಶೆಟ್ಟಿ ತಿಮರೋಡಿಯವರ ಮನಸ್ಸಿಗೆ ಬಂದದ್ದು ರಾಜ್ಯಮಟ್ಟದ ಸೆಟಲೈಟ್ ಚಾನೆಲ್‌ನಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮವನ್ನು ಮಾಡಿಸಬೇಕು ಅದರಲ್ಲಿ ಸಂತ್ರಸ್ತೆ ಸೌಜನ್ಯ ಮನೆಯವರಿಂದಲೇ ಧರ್ಮಸ್ಥಳದ ವಿರುದ್ಧ ಆರೋಪ ಮಾಡಿಸಬೇಕು ಎಂಬುದು. ಆದರೆ ರಾಜ್ಯ ಮಟ್ಟದ ಪ್ರಭಾವಿ ಸೆಟಲೈಟ್ ಚಾನೆಲ್‌ನ್ನು ಸಂಪರ್ಕಿಸಿ ಅವರನ್ನು ಒಪ್ಪಿಸುವಂತಹ ಸೂಕ್ತ ವ್ಯಕ್ತಿಗಾಗಿ ಹುಡುಕಾಟ ನಡೆಸಿದ್ದರು ತಿಮರೋಡಿ. ಅವರ ಪ್ರಯತ್ನ ಕಡೆಗೂ ಕೈಗೂಡಿತ್ತು. ರಾಜ್ಯ ಮಟ್ಟದ ಚಾನೆಲ್‌ಗಳ ವರದಿಯ ಸಂದರ್ಭದಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದ ವ್ಯಕ್ತಿಯೊಬ್ಬರನ್ನು ಶೋಧಿಸುವಲ್ಲಿ ತಿಮರೋಡಿ ಯಶಸ್ವಿಯಾಗಿದ್ದರು. ಹಾಗಾದರೆ ಅವರು ಯಾರು?



ಮಹೇಶ್ ಶೆಟ್ಟಿ ತಿಮರೋಡಿ

ಮುಂದುವರಿಯುವುದು.....

# ಇಮ್ಮಡಿ ಮಾದೇವಸ್ವಾಮಿಗೆ ಜಾಮೀನು! ಸತ್ತವರ ಆತ್ಮಗಳು ಲಭೋ ಲಭೋ...!!



ಕರ್ಮಫಲ.....

**ಸುಳ್ವಾಡಿ ಕಿಚ್ಚಗುತ್ತಿ ಮಾರಮ್ಮ ಟೆಂಪಲ್‌ನಲ್ಲಿ ಪ್ರಸಾದಕ್ಕೆ ವಿಷ ಬೆರೆಸಿ 17 ಜನರನ್ನು ಕೊಂದ ಆರೋಪ ಹೊತ್ತು ಕಳೆದ ಆರು ವರ್ಷದಿಂದ ಮೈಸೂರು ಸೆಂಟ್ರಲ್ ಜೈಲ್‌ನಲ್ಲಿದ್ದ ಆರೋಪಿ ಇಮ್ಮಡಿ ಮಹದೇವಸ್ವಾಮಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ! ಅನಾರೋಗ್ಯದ ಕಾರಣ ನೀಡಿ ಜಾಮೀನು ಪಡೆದಿರೋ ಆತ ಮೈಸೂರು ಜೈಲಿನಿಂದ ಬಿಡುಗಡೆಯಾಗಿದ್ದು, ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ! ಮೃತರ ಕುಟುಂಬದವರು ಕೊಲೆ ಆರೋಪಿಗೆ ಹೈಕೋರ್ಟ್ ಜಾಮೀನು ಕೊಟ್ಟಿರೋ ನಿರ್ಧಾರವನ್ನು ಖಂಡಿಸಿ ದೇವಸ್ಥಾನದ ಮುಂದೆ ಪ್ರತಿಭಟನೆ ನಡೆಸಿದ್ದಾರೆ...**

ಡಿಸೆಂಬರ್ 14,2018. ಮಲೆ ಮಾದೇಶ್ವರ ಬೆಟ್ಟದ ಆಸು ಪಾಸಿನ ಜನ ಎಂದಿಗೂ ಮರೆಯಲಾಗದ



ಕರಾಳ ದಿವಸ! ಅವತ್ತು ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳನ್ನು ಬೆಚ್ಚಿ ಬೀಳಿಸಿದ್ದ ದುರಂತ ಘಟನೆ ಜರುಗಿತ್ತು! ಮಾರ್ಟಳ್ಳಿ ಸುಳ್ವಾಡಿ ಕಿಚ್ಚಗುತ್ತಿ ಮಾರಮ್ಮನ ಸನ್ನಿಧಿಯಲ್ಲಿ ವಿಷ ಪ್ರಸಾದ ಸೇವಿಸಿ 17 ಭಕ್ತರು ಪ್ರಾಣ ಕಳೆದುಕೊಂಡಿದ್ದರು!!

ಆ ಪ್ರಕರಣದಲ್ಲಿ ಮೊದಲನೇ ಆರೋಪಿಯಾಗಿ ಕಳೆದ ಆರು ವರ್ಷಗಳಿಂದ ಜೈಲಿನಲಿದ್ದ ಅ1ಆರೋಪಿ ಇಮ್ಮಡಿ ಮಹದೇವಸ್ವಾಮಿಗೆ ಇದೀಗ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ! ವಿವಾದಿತ ಸ್ವಾಮೀಜಿ ಮಹದೇವಸ್ವಾಮಿ ಕಳೆದ ಸೋಮವಾರ ಮೈಸೂರು ಸೆಂಟ್ರಲ್ ಜೈಲಿನಿಂದ ಬಿಡುಗಡೆಯಾಗಿದ್ದಾನೆ!

ಅನಾರೋಗ್ಯದ ಕಾರಣಕ್ಕಾಗಿ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದ್ದು ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ ತಕ್ಷಣದ ವೈದ್ಯಕೀಯ ಚಿಕಿತ್ಸೆಗಾಗಿ ಹೈ ಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಹೈಕೋರ್ಟ್ ಮಂಜೂರು ಮಾಡಿರುವ ಜಾಮೀನು ಪ್ರತಿಯನ್ನು ಚಾಮರಾಜನಗರ ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಸಲ್ಲಿಸಲು ಖುದ್ದು ಚಾಮರಾಜನಗರ ಜಿಲ್ಲಾ ನ್ಯಾಯಾಲಯಕ್ಕೆ ಇಮ್ಮಡಿ ಮಹಾದೇವಸ್ವಾಮಿ ಹಾಜರಾಗಿದ್ದರು.

ಕಾವಿ ಧರಿಸದೇ ಶ್ವೇತ ವಸ್ತ್ರಧಾರಿಯಾಗಿ ನ್ಯಾಯಾಲಯಕ್ಕೆ ಹಾಜರಾದ ಸ್ವಾಮೀಜಿ ವಿಚಾರಣೆ ಮುಗಿಸಿ ತನ್ನ ವಕೀಲ ಸಿದ್ದಾರ್ಥ್ ಜೊತೆ ಹೋಗಿದ್ದಾರೆ. ನಂತರ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಅನ್ನೋದು ಸುದ್ದಿ. ಸಂತ್ರಸ್ತರು ಆರೋಪಿ ಇಮ್ಮಡಿ ಮಹಾದೇವಸ್ವಾಮಿಗೆ ಜಾಮೀನು ಮಂಜೂರು ಆಗಿರುವುದನ್ನು ಖಂಡಿಸಿ ಸುಳ್ವಾಡಿ ಗ್ರಾಮದ ಕಿಚ್ಚುಗುತ್ತಿ ಮಾರಮ್ಮ ದೇಗುಲದ ಮುಂಭಾಗ ಪ್ರತಿಭಟನೆ ನಡೆಸಿದ್ದಾರೆ.





ಸುಳ್ವಾಡಿ ಕಿಚ್ಚುಗುತ್ತಿ ಮಾರಮ್ಮ ದೇಗುಲದ ಮುಂಭಾಗ ಜಮಾಯಿದ್ದ ಸಂತ್ರಸ್ತ ಕುಟುಂಬಗಳು, ಕೈಯಲ್ಲಿ ಪೆಟ್ರೋಲ್ ಹಿಡಿದು ಇಮ್ಮಡಿ ಮಹಾದೇವಸ್ವಾಮಿ ವಿರುದ್ಧ ಧಿಕ್ಕಾರ ಕೂಗಿ, ಅವರ ಪ್ರತಿಕೃತಿ ದಹಿಸಿ ಆಕ್ರೋಶ ಹೊರಹಾಕಿದ್ದಾರೆ. ಕೆಲ ಸಂತ್ರಸ್ತರು ಮಾಧ್ಯಮಗಳೊಂದಿಗೆ ಮಾತನಾಡಿ, ''ವಿಷ ಪ್ರಸಾದ ಘಟನೆಯಲ್ಲಿ 17 ಭಕ್ತರು ಮೃತಪಟ್ಟು, 150ಕ್ಕೂ ಹೆಚ್ಚು ಮಂದಿ ಚಿಕಿತ್ಸೆಗೆ ಒಳಪಟ್ಟಿದ್ದರು. ಇಂದಿಗೂ ಹಲವು ಸಂತ್ರಸ್ತರು ದೀರ್ಘಕಾಲದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ಪ್ರಕರಣದ ಪ್ರಮುಖ ಆರೋಪಿ ಇಮ್ಮಡಿ ಮಹದೇವಸ್ವಾಮಿಗೆ ಹೈಕೋರ್ಟ್ ನೀಡಿರುವ ಜಾಮೀನನ್ನು ಈ ಕೂಡಲೇ ಸರಕಾರ ಮತ್ತು ಪೊಲೀಸ್ ಇಲಾಖೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬೇಕು! ಮಾನ್ಯ ಸುಪ್ರೀಂ ಕೋರ್ಟ್ ಜಾಮೀನು ಮಂಜೂರನ್ನು ತಡೆ ಹಿಡಿಯಬೇಕು'' ಎಂದು ಅಗ್ರಹಿಸಿದ್ದಾರೆ. ಅಲ್ಲದೆ, ''ಜಾಮೀನು ರದ್ದುಪಡಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ'' ಎಂದು ಸರ್ಕಾರವನ್ನು ಎಚ್ಚರಿಸಿದ್ದಾರೆ!

ತದ ನಂತರ ಬಿದರಹಳ್ಳಿಯಲ್ಲಿ ಮೃತರ ಸಮಾಧಿ ಗಳ ಬಳಿ ತೆರಳಿದ ಸಂತ್ರಸ್ತರು ಅಲ್ಲಿ ಕಣ್ಣೀರಿಡುತ್ತ ಶೋಕ ವ್ಯಕ್ತಪಡಿಸಿದ್ದಾರೆ! ಹನೂರು ತಾಲೂಕಿನ ಮಾರ್ಟಳ್ಳಿ ಸಮೀಪದ ಸುಳ್ವಾಡಿಯಲ್ಲಿರೋ ಕಿಚ್ಚುಗುತ್ತಿ ಮಾರಮ್ಮ ದೇವಸ್ಥಾನದ ಆಡಳಿತ ಮಂಡಳಿಯಲ್ಲಿ ಪಾರಮ್ಯ ಸಾಧಿಸಲು 2018ರ ಡಿ.14ರಂದು ಪ್ರಸಾದಕ್ಕೆ ವಿಷ ಬೆರೆಸಲಾಗಿತ್ತು. ವಿಷ ಪ್ರಸಾದ ಸೇವಿಸಿದ್ದ 17 ಮಂದಿ ಭಕ್ತರು ಸಾವನ್ನಪ್ಪಿ, 150ಕ್ಕೂ ಅಧಿಕ ಮಂದಿ ಅಸ್ವಸ್ಥರಾಗಿದ್ದರು.



ಆ ಪ್ರಕರಣದಲ್ಲಿ ಎ1 ಆರೋಪಿಯಾಗಿರುವ ಮಹಾದೇವಸ್ವಾಮಿ 2018ರಿಂದಲೂ ಮೈಸೂರು ಕೇಂದ್ರ ಕಾರಾಗೃಹದಲ್ಲಿ ವಿಚಾರಣಾ ಖೈದಿಯಾಗಿದ್ದರು. ಬೆಂಗಳೂರಿನ ಹೆಸರಾಂತ ವಕೀಲರೊಬ್ಬರು ಇದೀಗ ಅವರಿಗೆ ಜಾಮೀನು ಮಾಡಿಸಿದ್ದಾರೆ. ಮಹದೇವಸ್ವಾಮಿಯನ್ನು ನೋಡ್ತಾ ಇದ್ರೆ ಅವರು ನಿಜಕ್ಕೂ ಕಿಡ್ನಿ ಖಾಯಿಲೆಯಿಂದ ಬಳಲುತ್ತಿದ್ದಾರೆ ಅನ್ನಿಸುತ್ತದೆ. ಮಾಡಿದ ಕರ್ಮ... ಪ್ರತಿಫಲ ಉಣ್ಣಲೇಬೇಕಲ್ವಾ... ನೆನಪಿರಲಿ, ಈ ಜಾಮೀನು ಕೇವಲ ಒಂದು ವರ್ಷದ ಅವಧಿಗೆ ಮಾತ್ರ! ಬಳಿಕ ಮಹದೇವಸ್ವಾಮಿ ವಾಪಸ್ ಜೈಲಿಗೆ ಹಿಂತಿರುಗಬೇಕು!! ಆಪರೇಷನ್ ಮಾಡಿಸಿಕೊಳ್ಳದೆ ಊರೂರು ಸುತ್ತಾಡಿದ್ರೆ, ದಾಸನಿಗೆ ಆದ ಗತಿಯೇ ಈ ಇಮ್ಮಡಿಗೂ ಆಗಬಹುದು!!! ☯

# ರಾಜ್ಯದಲ್ಲಿ ಸಿಎಂ ಪಟ್ಟದ ಆಟಕ್ಕೆ ತಾತ್ಕಾಲಿಕ ವಿರಾಮ?

4 ☞

ಒಟ್ಟಿಗೆ ಹೋಗುತ್ತೇವೆ ಎನ್ನುವ ಮೂಲಕ ಒಕ್ಕಲಿಗ ಮತ್ತು ಕರುಬ ಸಮುದಾಯದ ನಡುವಿನ ಅಸಮಾಧಾನಕ್ಕೆ ಮುಲಾಮು ಹಚ್ಚುವ ಪ್ರಯತ್ನ ಮಾಡಿದ್ದಾರೆ.

ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಇವತ್ತಿನವರೆಗೂ ಇಲ್ಲ, ಮುಂದೆಯೂ ಇರುವುದಿಲ್ಲ. ಇಬ್ಬರೂ ಹೈಕಮಾಂಡ್ಹೇಳಿದಂತೆ ಕೇಳುತ್ತೇವೆ ಎಂದಿದ್ದಾರೆ. ಆದರೆ ಅಧಿವೇಶನ ಹಿನ್ನೆಲೆಯಲ್ಲಿ ಹೈಕಮಾಂಡ್ ಇಬ್ಬರಿಗೂ ಗೊಂದಲ ತಿಳಿ ಮಾಡಲು ಹೇಳಿರಬಹುದು ಎನ್ನುವುದನ್ನು ತಳ್ಳಿಹಾಕಲಾಗದು, ಇನ್ನು ಮುಂದೆ ಯಾವ ಗೊಂದಲವೂ ಇರದು. ಇಬ್ಬರೂ ಒಟ್ಟಿಗೆ ಹೋಗುತ್ತೇವೆ



ಎಂದು ಸಿಎಂ ಸಿದ್ದರಾಮಯ್ಯ ಮಾಧ್ಯಮದ ಮೂಲಕ ಜನರಿಗೆ ತಿಳಿಸಿದಷ್ಟೇ ಅಲ್ಲದೆ, ಎಲ್ಲವನ್ನೂ ಮಾಧ್ಯಮಗಳ ಮೇಲೆ ಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ಅದು ಹೇಗೆಂದರೆ ನಮ್ಮಲ್ಲಿ ಗೊಂದಲ ಇಲ್ಲ. ಅದು ಆಗಿದೆ. ಕೆಲವು ಮಾಧ್ಯಮಗಳು ಮಾಡಿವೆ ಅಷ್ಟೇ. ಸಚಿವ ಸ್ಥಾನಕ್ಕಾಗಿ ಕೆಲವರು ದೆಹಲಿಗೆ ಹೋಗಿರಬಹುದು, ಅಂದ ಹಾಗೆ ಅವರು ನಾಯಕತ್ವದ ವಿರೋಧಿಗಳಲ್ಲ ಎಂದು ತೇಪೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಮಾತನಾಡಿ ಒಂದಷ್ಟು ಜನರು ವಿಶ್ವಾಸ ಇಟ್ಟುಕೊಂಡಿದ್ದಾರೆ. ಅದನ್ನು ಈಡೇರಿಸುತ್ತೇವೆ. ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರ ರಚನೆಯಾಗಿದೆ. ಹೈಕಮಾಂಡ್ ತೀರ್ಮಾನದಂತೆ ಕೆಲಸ ಮಾಡುತ್ತೇವೆ. ಪಕ್ಷದ ವರಿಷ್ಠರು ಹೇಳಿದಂತೆ ಕೆಲಸ ಮಾಡುವುದೇ ನಮ್ಮ ತೀರ್ಮಾನ. ನಮ್ಮ ಯಾವ ಗುಂಪು ಇಲ್ಲ. ಯಾವ ಗುಂಪಿಗೂ ಅವಕಾಶ ಕೊಡಲ್ಲ. ನಮ್ಮದು ಕಾಂಗ್ರೆಸ್ಗುಂಪು. ಒಟ್ಟಿಗೆ ಸೇರಿ ಕೆಲಸ ಮಾಡುತ್ತೇವೆ ಎನ್ನುವ ಮೂಲಕ ಮತ್ತೊಮ್ಮೆ ಒಗ್ಗಟ್ಟಿನ ಮಂತ್ರ ಜಪಿಸಿದ್ದಾರೆ.

ಇದೆಲ್ಲವನ್ನು ಗಮನಿಸಿದರೆ ಕುರ್ಚಿ ಗುದ್ದಾಟ ಮುಗಿದೇ ಹೋಯಿತು ಎನ್ನುವುದು ಕಷ್ಟವೇ. ಮೇಲ್ನೋಟಕ್ಕೆ ಇದು ಕದನ ವಿರಾಮದಂತೆ ಗೋಚರಿಸುತ್ತಿದ್ದು, ಅಧಿವೇಶನದ ತನಕ ಹೀಗೆಯೇ ಮುಂದುವರಿಸುವ ಪ್ರಯತ್ನ ಹೈಕಮಾಂಡ್ ನದ್ದಾಗಿದ್ದರೂ ಅಚ್ಚರಿಯಿಲ್ಲ. ಕಳೆದ ಒಂದು ತಿಂಗಳಿನಿಂದ ನಡೆಯುತ್ತಿರುವ ಬಡಿದಾಟ ಉಪಹಾರದ ಮೂಲಕ ಮುಗಿದೇ ಹೋಯಿತು ಎನ್ನುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಹೈಕಮಾಂಡ್ ಸಭೆ ನಡೆಸಿ ಇದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸುವ ತನಕ ಇದು ಮುಂದುವರೆಯುದಂತು ನಿಜ. ಮುಂದಿನ ದಿನಗಳಲ್ಲಿ ಏನಾಗಬಹುದು ಎಂಬುದನ್ನು ಕಾದು ನೋಡಬೇಕಾಗಿದೆ. ☯

# ಹಣದ ಆಸೆಗೆ ಹೆತ್ತ ತಾಯಿಯನ್ನೇಬಲಿ ಪಡೆದ್ರಾ ಮಕ್ಕಳು..?!

**ದುಡ್ಡು ಕೊಟ್ಟರೇ ಬೇಕಾದ್ದು ಸಿಗುತ್ತೈತೇ ಈ ಜಗದಾಗೇ ಕಾಣೋ.....ಹೆತ್ತ ತಾಯಿಯ ಕಳಕೊಂಡ ಮ್ಯಾಲೇ ಮತ್ತೇ ಸಿಗುವಳೇನೋ..? ತಮ್ಮ ಮರಳಿ ಬರುವಳೇನೋ...?? ಎಂದು ಭಾವುಕವಾಗಿ ಹಾಡು ಕಟ್ಟಿ ಹಾಡುವ ಕಾಲ ಈಗ ಮಾಯವಾಗಿದೆ! ಅದೇ ದುಡ್ಡಿಗಾಗಿ ಹೆತ್ತ ತಾಯಿಯನ್ನೇ ಹೊಡೆದು ಕೊಂದು ನೀರಿಗಾಕುವ ದುಷ್ಟ ಕಾಲ ಈಗ ನಡೆಯುತ್ತಿದೆ!!**



ನಿಗೂಢ ಸಾವನ್ನಪ್ಪಿರುವ ಶಾರದಮ್ಮ

ಇದು ಕಲಿಯುಗ... ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತು ಹೆತ್ತು ಸಾಕುವ ಮಹಾದೇವತೆ ಅಮ್ಮ. ಅಂಥ ಕರುಣಾಮಯಿ ಅಮ್ಮನ ಋಣ ತೀರಿಸಲು ಯಾವ ಮಗನಿಗಾದರೂ ಎಷ್ಟು ಜನ್ಮ ವೆತ್ತಿದರೂ ಸಾಲದು. ಅಂತದ್ದರಲ್ಲಿ ಇಲ್ಲಿಬ್ಬರು ದುಷ್ಟ ದುರುಳ ಮಕ್ಕಳು ಹೆತ್ತ ತಾಯಿಯನ್ನೇ ಸಾಯಿಸಿ ನೀರಿಗೆ ಬೀಸಾಕಿದ್ದಾರೆಂಬ ಗಾಳಿಸುದ್ದಿಗಳಿಗೆ ರೆಕ್ಕೆಪುಕ್ಕ ಹುಟ್ಟಿಕೊಂಡು ಹಾರಾಡುತ್ತಿವೆ!

ಬೆಂಗಳೂರು ದಕ್ಷಿಣ ತಾಲೂಕು ಉತ್ತರಹಳ್ಳಿ ಹೋಬಳಿ ಗೊಲ್ಲಹಳ್ಳಿ ಗ್ರಾಮದ ನಿವಾಸಿಯಾದ ಎಲ್. ಮುನಿರಾಜು ರವರ ಧರ್ಮ ಪತ್ನಿ 60ವರ್ಷದ ಮಾತೆ ಶಾರದಮ್ಮನವರು ದಿನಾಂಕ 10-11-2025. ಬೆಂಗಳೂರು ದಕ್ಷಿಣದ ತುಳಸೀಪುರ ಬಳಿ ನೈಸ್ ರಸ್ತೆ ಪಕ್ಕದ ನಿರ್ಜನ ಪ್ರದೇಶಕ್ಕೆ ರಾತ್ರೋರಾತ್ರಿ ಇಲ್ಲಿಗೆ ನಡೆದುಕೊಂಡು ಬಂದು ಕೆರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾರೆಂದು ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ!

ಆ ವಯಸ್ಸಾದ ಹೆಂಗಸು ಅಲ್ಲಿಂದ ಇಲ್ಲಿಗಂಟ ನಡೆದುಕೊಂಡು ಬರಲು ಸಾಧ್ಯವೇ? ಅಷ್ಟಕ್ಕೂ ಇಲ್ಲಿಗೇಕೆ ಬಂದು ಸತ್ತಳು?! ಎಂದೂ ಎಲ್ಲಿಗೂ ನಡೆದುಕೊಂಡು ಹೋಗದ ದಡೂತಿ ಅಜ್ಜಿ 120 ಕೆ.ಜಿಯಿದ್ದ ಶಾರದಮ್ಮ ನಡುರಾತ್ರಿಯಲ್ಲಿ ಮನೆಯಿಂದ ಎರಡು ಕಿಲೋಮೀಟರ್ ನಡೆದುಕೊಂಡು ಬರಲು ಸಾಧ್ಯನೇ? ಯಾಕೇ ಈ ಇಳಿ ವಯಸ್ಸಿನಲ್ಲಿ ಏನೂ ಬಡತನವಿಲ್ಲದಿದ್ದರೂ, ತೊಂದರೆ ಇಲ್ಲದಿದ್ದರೂ, ಸಾಲಮಾಡಿಲ್ಲದಿದ್ದರೂ,ಜೀವನ ಬೇಸರವೆಂದು ಸಾಯಲು ಹೋಗುತ್ತಾರೆಂಬುದು ಸ್ಥಳೀಯ ಜನರ ಅಭಿಪ್ರಾಯವಾಗಿದೆ. ಹಾಗಾದರೇ ಯಾಕೆ ಆತ್ಮಹತ್ಯೆ ಕಥೆ ಓಡುತ್ತಿದೆ? ನಿಜವಾಗಿಯೂ ಆತ್ಮಹತ್ಯೆ ಮಾಡಿಕೊಂಡರಾ? ಎಂದು ಕೆದುಕುತ್ತಾ ಹೋದರೇ ಶಾರದಮ್ಮನವರ ಸಾವಿನ ಸುತ್ತ ಅನುಮಾನದ ಹುತ್ತ ಎದ್ದು ನಿಲ್ಲುತ್ತದೆ!!

ಅದು ಆತ್ಮಹತ್ಯೆಯಲ್ಲ,ಕೊಲೆ ಇರಬಹುದೂ... ಎಂಬ ಶಂಕೆಯೂ ಮೂಡುತ್ತಿದೆ!! ಏಕೆಂದರೆ ಶಾರದಮ್ಮನ ಹಿನ್ನಲೆ, ವ್ಯಕ್ತಿತ್ವವನ್ನು ಕೆದಕುತ್ತಾ ಹೋದರೇ ಮನೆಯವರೇ, ಮಂಜುನಾಥ್ ಮತ್ತು ರಾಮ ಕೃಷ್ಣ ಎಂಬ ಗಂಡು ಮಕ್ಕಳೇ ಈ ಕೊಲೆಮಾಡಿ ಆತ್ಮಹತ್ಯೆಯ ನಾಟಕ ಸೃಷ್ಟಿಸಿ ಹೊಸ ಕಣ್ಣೀರಿನ ಕಥೆ ಕಟ್ಟಿರಬಹುದೆಂದು ಪತ್ರಿಕಾ ಮಾಧ್ಯಮಗಳಿಗೆ ಗುಪ್ತವಾಗಿ ಶಾರದಮ್ಮನ ಸಂಬಂಧಿಕರು, ನೆರೆಹೊರೆಯ ಹಿತೈಸಿಗಳು ಮಾಹಿತಿ ನೀಡುತ್ತಿದ್ದಾರೆ!! ಇದು ಆತ್ಮಹತ್ಯೆ ಅಲ್ಲ, ಕೊಲೆ ಎಂದು ವದಂತಿ ಹಬ್ಬಿಸುತ್ತಿದ್ದಾರೆ!! ಹಾಗಾದರೇ ಸತ್ಯ ಸಂಗತಿ ಏನಾಗಿರಬಹದು? ಎಂಬದು ಕುತೂಹಲ ನಮಗೂ ಇದೆ!

ಈ ರಾಮಕೃಷ್ಣ, ಮಂಜುನಾಥ್ ಎಂಬ ಭೂಗಳ್ಳರು ಹಣದ ದುರಾಸೆಯ ಮದ ಹತ್ತಿಸಿಕೊಂಡು ಈ ರೀತಿಯ ದುಷ್ಕೃತ್ಯ ಮಾಡಿರಬಹುದೆಂದು ಅವರ ಚಲನವಲನ, ಕಳ್ಳ ವ್ಯವಹಾರ ಬಲ್ಲವರು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ! ಕ್ರಷರ್ ಬಿಸಿನೆಸ್, ಜೆಸಿಬಿ ಬಾಡಿಗೆ, ರಿಯಲ್ ಎಸ್ಟೇಟ್, ಮನೆ ಬಾಡಿಗೆ, ಬಡ್ಡಿ ದುಡ್ಡು ಬೇಕಾದಷ್ಟು ಬರುತ್ತಿದ್ದರೂ ಇವರಿಗೆ ಅಮ್ಮನ ಪಾಲಿನ ಹಣದ ಮೆಲೂ ಕಣ್ಣಿತ್ತು ಎನ್ನುವವರಿದ್ದಾರೆ!




ದಕ್ಷ ಡಿಸಿಪಿ ಅನಿತಾ ಹದ್ದಣ್ಣವರ್

ಹೊಟ್ಟೆ ಬಟ್ಟೆ ಕಟ್ಟಿ ಸಾಕಿ ಸಲುಹಿ ಇಬ್ಬರು ಗಂಡು ಮಕ್ಕಳಿಗೂ ಶಾರದಮ್ಮ ಮನೆ ಬಾಡಿಗೆ ಬರುವ ಹಾಗೆ ಮಾಡಿದ್ದರೂ, ಮಾನ ಮರ್ಯಾದೆನೇ ಮುಖ್ಯ ಎಂದು ಬದುಕಿದ್ದ ಗಟ್ಟಿಗಿತ್ತಿ ಕರುಣಾಮಯಿ ತಾಯಿಯನ್ನು ಈ ಮಂಜುನಾಥ್, ರಾಮಕೃಷ್ಣ ಸೇರಿಕೊಂಡು ಮುಗಿಸಿ ನೀರಿಗೆಸೆದರಾ ಎಂಬ ಬಲವಾದ ಅನುಮಾನಗಳು ಎಲ್ಲೆಲ್ಲೂ ಈಗ ಬುಗಿಲೆದ್ದು ಕುಣಿಯುತ್ತಿವೆ!!

ಜನರ ಕಣ್ಣಲ್ಲಿ ಖಳನಾಯಕರಾಗಿರುವ ಈ ಇಬ್ಬರು ಮಕ್ಕಳು ತಂದೆ ಮುನಿರಾಜು ಜೊತೆಗೆ ಸೇರಿಕೊಂಡು ಸ್ವಾನದಲ್ಲಿರದಿದ್ದರೂ, 20-04-2006 ರಲ್ಲಿ ಕನ್ನಾಯಕನ ಅಗ್ರಹಾರದಲ್ಲಿರುವ ಸರ್ವೆ ನಂಬರ್ 27/2 ರಲ್ಲಿ 3ಎಕರೆ ಜಮೀನನ್ನು ನಿವೇಶನಗಳನ್ನಾಗಿ ವಿಂಗಡಣೆ ಮಾಡಿ ಸುಮಾರು 78 ಜನರಿಗೆ ಮಾರಿಕೊಂಡಿದ್ದಾರೆ!

ಇವರು ನಿವೇಶನ ಮಾಡಿ ಮಾರಿದ್ದ ಇದೇ ಜಮೀನನ್ನು ಅದಾಗಲೇ ಹರೀಖೋಡೆ ಅಂಡ್ ಫ್ಯಾಮಿಲಿ 2007ರಲ್ಲೆ ಇವರ ಭೂಮಿ ಯನ್ನು ಸೇರಿಸಿ ಒಟ್ಟು 6 ಎಕರೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.... ಹೀಗಿರುವುದರಿಂದ ಇವರಿಂದ ಹಣ ಕೊಟ್ಟು ಸೈಟು ಪಡೆದವರಿಗೆ ಇದುವರೆಗೂ ಸ್ವಾನ ಸಿಕ್ಕಿಲ್ಲ. ಅದಕ್ಕಾಗಿ ಆನೇಕಲ್ ಸಿವಿಲ್ ನ್ಯಾಯಾಲಯದಲ್ಲಿ ಹಣ ಕಳೆದುಕೊಂಡವರು ಎಲ್. ಮುನಿರಾಜು. ಮಂಜುನಾಥ್, ರಾಮಕೃಷ್ಣ ಮೂವರ ವಿರುದ್ಧ ದಾವೆ ಹೂಡಿದ್ದಾರೆ!

ಹೀಗಿರುವಾಗಲೇ ಮಾರಾಟ ವಾಗಿದ್ದ ಅದೇ ಜಮೀನಿನ ಪಹಣಿ ಮತ್ತೇ ಈಗಲೂ ಎಲ್. ಮುನಿರಾಜು ರವರ ಹೆಸರಿನಲ್ಲೇ ಆರ್.ಟಿ.ಸಿ. ಪಹಣಿ ಪತ್ರ ಮುಂದುವರಿದಿದೆ. ಹಣದ ಆಸೆಗೆ ಮಾರಾಟ ಮಾಡಿರುವ ಇದೇ ಜಮೀನನ್ನು ಭೂ ಸ್ವಾನವೇ ಇಲ್ಲದಿದ್ದರೂ ಮತ್ತೊಮ್ಮೆ ಮಾರಾಟ ಮಾಡಲು ನಕಲಿ ದಾಖಲೆ ಸೃಷ್ಟಿಸಿ ಎಂ. ಮಂಜುನಾಥನಿಗೆ ಕುಟುಂಬಸ್ಥರು ಹಕ್ಕು ಬಿಡುಗಡೆ ಪತ್ರ ಮಾಡಿಸಿರುತ್ತಾರೆ.



ಮೃತಳ ಮಕ್ಕಳಾದ ಮಂಜುನಾಥ್ ಹಾಗೂ ರಾಮಕೃಷ್ಣ


ಆಗ ಇದಕ್ಕೆ ಇದೇ ಶಾರದಮ್ಮ ಜನರಿಗೆ ಮೋಸ ಮಾಡುವುದು ಬೇಡವೆಂದು ವಿರೋಧ ಮಾಡಿದಾಗ, ಆಕೆಯ ಮಾತಿಗೆ ಸೊಪ್ಪು ಹಾಕದ ಇವರುಗಳು ಇತ್ತೀಚೆಗೆ ಸುಮಾರು 40ಜನ ಗೂಂಡಾಗಳನ್ನು ಸೇರಿಸಿಕೊಂಡು ಕನ್ನಾಯಕನ ಅಗ್ರಹಾರ ಗ್ರಾಮಕ್ಕೆ ಹೋಗಿ ಅಲ್ಲಿನ ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಸಿರುತ್ತಾರೆ. ಇವರಿಗೆ ಯಾವುದೇ ಭೂಸ್ವಾನ ಇರದೇ ಇರುವುದರಿಂದ ಸರ್ವೆ ನಂಬರ್ 27/2ಕ್ಕೆ ಹದ್ದುಬಸ್ತಿಗೆ ಅರ್ಜಿ ಹಾಕಿ ಪಕ್ಕದ ಸರ್ವೆ ನಂಬರ್16 ಜಮೀನನ್ನು ಕಬಳಿಸಲು ಹಾಗೂ ಬಡ ದಲಿತರ ಅಕ್ಕ ಪಕ್ಕದ ಭೂಮಿಯನ್ನೂ ಒತ್ತುವರಿ ಮಾಡಿ ಕಬಳಿಸಲು ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಲಿಖಿತ ದೂರನ್ನು ನೀಡಿದ'ರ'ೂ ಕ'ಂಪ್ಲೇಂಟ್ ಸ್ವೀಕರಿಸಿರುವುದಿಲ್ಲ!

ಅಂಚೆ ಮೂಲಕ ದೂರು ನೀಡಿದರೂ ಸ್ವೀಕರಿಸದೇ ನಿರಾಕರಿಸಿ ಹಿಂದಿರುಗಿಸಿದ್ದಾರೆಂದರೇ ಈ ಭೂಗಳ್ಳರು ಭ್ರಷ್ಟ ಪೊಲೀಸರನ್ನು ಹಣ ಕೊಟ್ಟು ಹೇಗೆ ಬುಟ್ಟಿಗೆ ಹಾಕಿಕೊಂಡಿರಬಹುದೆಂದು ನೀವೇ ಊಹಿಸಿಕೊಳ್ಳಿ!! ಇದೆಲ್ಲವನ್ನು ತಿಳಿದ ಸತ್ಯವಂತೆಯಾದ ತಾಯಿ ಶಾರದಮ್ಮನವರು, ಇದೆಲ್ಲ ಬೇಡ ಕನ್ರಪ್ಪ, ದೇವರು ನಮಗೆ ಎಲ್ಲಾ ಕೊಟ್ಟಿದ್ದಾನೆ,ದುರಾಸೆ ಬೇಡ ಅಡ್ಡ ದಾರಿ ಹಿಡಿಯಬೇಡಿರೆಂದು ಬುದ್ಧಿಮಾತು ಹೇಳಿ,ನಮಗೆ ಮಾನ ಮರ್ಯಾದೆ, ಗೌರವವೇ ಮುಖ್ಯ, ನನ್ನ ಮತ್ತು ನನ್ನ ಎರಡು ಹೆಣ್ಣು ಮಕ್ಕಳ ಮಾನ ಕಳಿಯುವ ಕೆಲಸ ಮಾಡಿದರೇ ನಾನೇ ನಿಮ್ಮ ಮೇಲೆ ಪೊಲೀಸ್ ಠಾಣೆಗೆ ದೂರು ನೀಡುತ್ತೇನೆಂದು ಜಗಳ ವಾಡಿರುವುದು ಇಡೀ ಊರಿಗೇ ಗೊತ್ತಿರುವ ಸಂಗತಿಯಾಗಿದೆ!

ಈ ಜಗಳ ವಿಕೋಪಕ್ಕೆ ತಿರುಗಿದಾಗ ಶಾರದಮ್ಮನಿಗೆ ಬರುತ್ತಿದ್ದ ಮನೆ ಬಾಡಿಗೆ ಹಣ ಬರದ ಹಾಗೆ ಮಾಡಿ, ಶಾರದಮ್ಮನ ಪಾಲಿನ ಬಾಡಿಗೆ ಯನ್ನು ಕೂಡಾ ಇವರೇ ವಸೂಲಿ ಮಾಡುತ್ತಿದ್ದಾಗ ದೊಡ್ಡ ಜಗಳವಾಗಿ ಶಾರದಮ್ಮ 'ನಾನು ಬದುಕಿರುವವರೆಗೂ ನಾನೇ ನನ್ನ ಪಾಲಿನ ಮನೆಗಳ ಬಾಡಿಗೆ ಪಡೆದುಕೊಳ್ಳುತ್ತೇನೆ' ಎಂದು ಮಕ್ಕಳ ಬಳಿ ಹೇಳಿ ಗಲಾಟೆ ಮಾಡಿದಾಗ, ಮಕ್ಕಳು ಆಕೆಗೆ ಹಲ್ಲೆ ಮಾಡಿ ಮಾನಸಿಕವಾಗಿ ಬೈದು ಹಿಂಸಿಸಿರುವುದನ್ನು ಶಾರದಮ್ಮ ತನ್ನ ಪರಿಚಯಸ್ಥರ ಬಳಿ ಅಳುತ್ತಾ ಹೇಳಿಕೊಂಡಿದ್ದಳಂತೆ!

ಇಂಥ ಹೆಂಗಸು, ಗಟ್ಟಿಗಿತ್ತಿಯಾಗಿದ್ದ ಶಾರದಮ್ಮ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ ಎಂದರೆ ಯಾರು ನಂಬುತ್ತಾರೆ?! ಈ ವಿಷಯ ತಿಳಿದಾಗ ಗ್ರಾಮಸ್ಥರು, ಶಾರದಮ್ಮನ ಮಕ್ಕಳೇ ಆಸ್ತಿ ವಿಚಾರಕ್ಕೆ ಹಲ್ಲೆ ಮಾಡಿ, ಕೊಲೆಮಾಡಿ ಇವರೇ ನಡುರಾತ್ರಿ ನೈಸ್ ರಸ್ತೆ ಪಕ್ಕದ ತುಳಸೀಪುರ ಕೆರೆಗೆ ತಂದು ಹಾಕಿರಬಹುದು ಎಂದು ನಾನಾ ರೀತಿಯಲ್ಲಿ ಅನುಮಾನ ವ್ಯಕ್ತಪಡಿಸಿ ಇಂದಿಗೂ ಭಯದಲ್ಲೇ ಮಾತನಾಡಿ ಕೊಳ್ಳುತ್ತಿದ್ದಾರೆ!! ಸ್ಥಳೀಯರು ಹಾಗೂ ಪತ್ರಿಕೆಯ ಅನುಮಾನವೇನೆಂದರೆ, ತಲಘಟ್ಟಪುರ ಪೊಲೀಸರನ್ನೂ ಏನಾದ್ರು ಈ ಮಂಜುನಾಥ್ ಮತ್ತು ರಾಮಕೃಷ್ಣ ದುಡ್ಡು ಸುರಿದು 'ಕೊಲೆ' ಶಂಕೆಯನ್ನು ಮುಚ್ಚಿ ಹಾಕಲು ಬಳಸಿಕೊಂಡರಾ??! ಎಂದು ಶಾರದಮ್ಮನ ಸಂಬಂಧಿಕರು ಮಾತನಾಡಿ ಕೊಳ್ಳುತ್ತಿದ್ದಾರೆ!!

ಆದರೇ ಬೆಂಗಳೂರು ದಕ್ಷಿಣದಲ್ಲಿ ದಕ್ಷ ಡಿಸಿಪಿ ಅನಿತಾ ಹದ್ದಣ್ಣವರ್ ಐಪಿಎಸ್... ಅವರು ಇರುವುದರಿಂದ, ತನಿಖೆ ನಡೆದು ಸತ್ಯ ಹೊರ ಬರಬಹುದೆಂಬ ನಂಬಿಕೆ ಇದೆ. ಒಬ್ಬ ತಾಯಿಗೆ ಅನ್ಯಾಯವಾಗಿರೋ ಅನುಮಾನ ಇರುವುದರಿಂದ ತಲಘಟ್ಟಪುರದ ಪೊಲೀಸರನ್ನು ಒಳಗೊಂದು 'ತನಿಖೆ' ಮಾಡದೆ ಬಿಡಲಾರರು...ಎನ್ನಿಸುತ್ತಿದೆ! ಒಬ್ಬ ತಾಯಿಗೆ, ಅವಳ ಹೆಣ್ಣು ಮಕ್ಕಳಿಗೆ ಅನ್ಯಾಯವಾಗಿದ್ರೆ, ನ್ಯಾಯಯುತ ತನಿಖೆಯಿಂದ ಸತ್ಯ ಬೆಳಕಿಗೆ ಬರಲಿ ಎಂಬುದೇ ಪತ್ರಿಕೆಯ ಆಶಯ... ☯



# ಬಾಲಿವುಡ್ ಸ್ಟಾರ್ ಧರ್ಮೇಂದ್ರ ಕನ್ನಡಿಗರಿಗೂ ಈ ಪರಿ ಇಷ್ಟವಾಗುವುದೇಕೆಂದರೆ...

ಬಾಲಿವುಡ್‌ನ ಹಿರಿಯ ನಟ ಧರ್ಮೇಂದ್ರ ಅವರ ನಿಧನ ಬಾಲಿವುಡ್ ಆಚೆಗೂ ಚಿತ್ರ ರಸಿಕರ ಮನಸ್ಸಿಗೆ ತುಂಬಾ ನೋವು ತಂದಿದೆ. ಅದರಲ್ಲೂ ಚಂದನವನದ




ಮಂದಿಗೆ ಧರ್ಮೇಂದ್ರ ತುಸು ಹೆಚ್ಚೇ ಹತ್ತಿರವಾದವರು ಎನ್ನುವುದರಲ್ಲಿ ಎರಡು ಮಾತಿಲ್ಲ. ಕನ್ನಡದ ನಟರು ಮತ್ತು ಜನರ ಜತೆಗೆ ಅವರ ಒಡನಾಟ ಹೇಗಿತ್ತು ಎಂಬುದರ ಬಗ್ಗೆ ಹೇಳುವುದಾದರೆ...

ಬಾಲಿವುಡ್ ನಟ ಧರ್ಮೇಂದ್ರ ಅವರಿಗೂ ಸ್ಯಾಂಡಲ್ ವುಡ್‌ಗೂ ಇರುವ ನಂಟು 1970ರ ದಶಕದಿಂದಲೇ ಇತ್ತು ಎಂಬುದು ಆಶ್ಚರ್ಯವಾದರೂ ಸತ್ಯ. ಪೃಥ್ವಿರಾಜಕಪೂರ್ ನಟಿಸಿದ, 'ಸಾಕ್ಷಾತ್ಕಾರ' ಚಿತ್ರ ನೋಡಿದ ನಂತರ ಕನ್ನಡ ಚಿತ್ರರಂಗದ ಬಗ್ಗೆ ತುಸು ಆಸಕ್ತಿ ತೋರಿದ ಧರ್ಮೇಂದ್ರ, ಆನಂತರ ರಣರಕಂಠೀರವ, ಶ್ರೀಕೃಷ್ಣದೇವರಾಯ, ಭಲೇಜೋಡಿ ಮುಂತಾದ ಚಿತ್ರಗಳನ್ನು ನೋಡಿ ರಾಜಕುಮಾರ್ ಬಗ್ಗೆ ಗೌರವ ಮೂಡಿತು. ತಾವೂ ಸಹ ಒಂದು ಐತಿಹಾಸಿಕ ಚಿತ್ರದಲ್ಲಿ ಪಾತ್ರ ವಹಿಸುವ ಒಲವು ತೋರಿ ಹಿಂದಿ ಚಿತ್ರ ನಿರ್ಮಾಪಕರ ಬಳಿ ಮತ್ತು ಇವರ ಜತೆ ಹೀರೋಯಿನ್ ಆಗಿ ನಟಿಸಿದ ಧಾರವಾಡ ಮೂಲದ ಅಚ್ಚಕನ್ನಡತಿ ಲೀನಾ ಚಂದಾವರ್ಕರ್ ರೊಡನೆಯೂ ತಮ್ಮಇಚ್ಛೆ ವ್ಯಕ್ತಪಡಿಸಿದ್ದರು. ತತ್ಪರಿಣಾಮ ಒಂದೆರಡು ಐತಿಹಾಸಿಕ ಚಿತ್ರಗಳಲ್ಲಿ ನಟಿಸುವ ಅವಕಾಶ ದೊರಕಿತು.

ಇದಾದ ಕೆಲವೇ ತಿಂಗಳಲ್ಲಿ 'ಶೋಲೆ' ಸಿನಿಮಾ ಚಿತ್ರೀಕರಣವು ರಾಮನಗರ ರಾಮದೇವರ ಗುಡ್ಡದಲ್ಲಿ ಶುರುವಾಗಿತ್ತು. ಬೆಟ್ಟದ ಬುಡದಲ್ಲಿ ನಿರ್ಮಿಸಿದ ಸಿಪ್ಪಿನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಅಂದಾಜು 4 ವರ್ಷ ಕಾಲ ಶೂಟಿಂಗ್ ಜರುಗಿ ಇಲ್ಲಿನ ಮುಗ್ಧ ಜನರೊಡನೆ ತಾವೂ ಒಬ್ಬರಾಗಿ ಬೆರೆತು ಹೋದರು.

ಇವರಂತೇ ಬೋಲ್ಡ್ ಪೊಲಿಟಿಷಿಯನ್ ರೆಬೆಲ್ ಸ್ಟಾರ್ ಆಗಿದ್ದ ಅಂಬರೀಷ ರೊಡನೆ ಒಡನಾಟ ಹೆಚ್ಚಾಗಿತ್ತು. ಧರ್ಮೇಂದ್ರರನ್ನು ತುಂಬಾ ಹಚ್ಚಿಕೊಂಡಿದ್ದ ರಾಮನಗರ, ಬೆಂಗಳೂರಿನ ಅಭಿಮಾನಿಗಳಿಗೆ ಮನಸೋತರು. ಈ ಎಲ್ಲ ಕಾರಣದಿಂದ ಕನ್ನಡ ನಾಡು ನುಡಿ ಜನಮನ ಸಂಸ್ಕೃತಿ ಇತಿಹಾಸದ ಬಗ್ಗೆ ಇವರಲ್ಲಿ ಅಪಾರ ಗೌರವ ಮೂಡಿತು. ಇವರ ತನುಮನದೊಳಗೆ ಕನ್ನಡ ಕರ್ನಾಟಕ ಚಿರ ಸ್ಮರಣೀಯವಾಗಿ ಇವರ ಉಸಿರಿರುವ ತನಕ ಉಳಿದೇ ಇತ್ತು. ಹೀಗಾಗಿ ಕನ್ನಡಿಗರಿಗೂ ಸಹ ಅಚ್ಚಳಿಯದ ನೆನಪಾಗಿ ಉಳಿಯುತ್ತಾರೆ ಭಾರತೀಯ ಚಿತ್ರರಂಗದ ಹೀಮ್ಯಾನ್ ಧರ್ಮೇಂದ್ರ.



ಕಾಲಕ್ರಮೇಣ ಮುಂಬೈನಲ್ಲಿ ಡಾ.ರಾಜ್, ಕಲ್ಪನಾ ಆರತಿ ಮುಂತಾದವರು ನಟಿಸಿರುವ ದಾರಿತಪ್ಪಿದ ಮಗ ಸಿನಿಮಾ ಚಿತ್ರೀಕರಣ ಸಂದರ್ಭದಲ್ಲಿ ಒಮ್ಮೆ ಡಾ. ರಾಜಕುಮಾರ್ ಅವರನ್ನು ತಮ್ಮ ಬಂಗಲೆಗೆ ಆಹ್ವಾನಿಸಿ ಪಂಜಾಬಿ ಭೋಜನದ ಅತಿಥಿ ಸತ್ಕಾರ ನೀಡಿ ಗೌರವದಿಂದ ನಡೆಸಿಕೊಂಡಿದ್ದರು. ಈ ಅವಿಸ್ಮರಣೀಯ ದಿನದಂದು ಹಾಗೇ ಸುಮ್ಮನೆ ಧರ್ಮೇಂದ್ರ ಮತ್ತು ಡಾ.ರಾಜ್ ನಡುವೆ ನಡೆದ ಅಂದಿನ ಮಾತುಕತೆಯಲ್ಲಿ ಧರ್ಮೇಂದ್ರ ತಮ್ಮ ಮನದಾಳದ ಇಂಗಿತವನ್ನು ವರನಟನೊಡನೆ ಹಂಚಿಕೊಂಡಿದ್ದು ಹೀಗೆ.. 'ನಾನು ಸಾಯುವ ಮುನ್ನ ಒಂದೇ ಚಿತ್ರವಾದರೂ ಸರಿ ಕನ್ನಡ ಚಿತ್ರದಲ್ಲಿ ವಿಶೇಷವಾಗಿ ನಿಮ್ಮ(ಡಾ.ರಾಜಕುಮಾರ್) ಜತೆ ಮತ್ತು ಆಪ್ತಮಿತ್ರ ಅಂಬರೀಷ್ ಜತೆಗಿನ ಚಿತ್ರದಲ್ಲಿ ಅಭಿನಯಿಸುವ ಮಹದಾಸೆ ಇದೆ ಎಂದಿದ್ದರು. ಅದರೆ ದುರದೃಷ್ಟವಶಾತ್



ಇವರ ಮಹದಾಸೆ ಕಡೆಗೂ ಈಡೇರಲೇ ಇಲ್ಲ?!

ಪಂಜಾಬ್ ಮೂಲದ ಬಾಲಿವುಡ್ ಬಾದ್ ಶಾ 8.12.1935 ರಂದು ರೈತ ಕುಟುಂಬದಲ್ಲಿ ಜನಿಸಿದ್ದವರು. 1960–80 ದಶಕದ ಬಾಕ್ಸಾಫೀಸ್ ಬ್ಲಾಕ್ ಬಸ್ಟರ್ ಹಿಂದಿ ಪಂಜಾಬಿ ಸಿನಿಮಾ ರಂಗದ ಮೇರುನಟ. ಅಪ್ಪಟ ದೇಶಭಕ್ತ. ಖ್ಯಾತ ರಾಜಕಾರಣಿ. ಆಗಿನ ಕಾಲದ ಸುಂದರದ್ರೂಪಿ ಹೀರೋ. ಡ್ರೀಮ್ ಗರ್ಲ್ ಹೇಮಮಾಲಿನಿಯ ಮನಮೆಚ್ಚಿದ ಚೆಲುವ. ಹೇಮಾರನ್ನು ವರಿಸುವ ಮುನ್ನ ತಮ್ಮ 20ನೇ ವಯಸ್ಸಿಗೆ 1954ರಲ್ಲಿ ಪ್ರಕಾಶ್ ಕೌರ್ ಜತೆ ಮದುವೆಯಾದರು. ಈ ದಂಪತಿಗೆ ಒಟ್ಟು 4 ಮಕ್ಕಳು ಸನ್ನಿ ಡಿಯೋಲ್, ಬಾಬಿ ಡಿಯೋಲ್. ಅಜೀತಾ ಡಿಯೋಲ್ ಮತ್ತು ವಿಜೇತಾ ಡಿಯೋಲ್.

1971ರಲ್ಲಿ ಪ್ರೇಮಿಸಿ ವಿವಾಹವಾದ ಇವರ ತಾರಾ ಪತ್ನಿ ಹೇಮಮಾಲಿನಿಗೆ ಇಬ್ಬರು ಹೆಣ್ಣುಮಕ್ಕಳು. ಅಹಾನಾ ಡಿಯೋಲ್ಮತ್ತು ಇಶಾ ಡಿಯೋಲ್. ಧರ್ಮೇಂದ್ರರವರ ಮಕ್ಕಳೆಲ್ಲ ಹಿಂದಿ ಚಿತ್ರರಂಗದ ಖ್ಯಾತ ಕಲಾವಿದರು ಅನ್ನೋದು ನಿಮಗೆಲ್ಲ ಗೊತ್ತಿದೆ. 300ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದ ಸೂಪರ್ ಹೀರೋ ಧರ್ಮೇಂದ್ರ, ವಯೋಸಹಜ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದರು. ಚಿಕಿತ್ಸೆ ಫಲಿಸದೇ ದಿನಾಂಕ 24.11.2025 ಸೋಮವಾರ ಮುಂಬೈನ ಲೋನಾವಾಲದ ಫಾರ್ಮ್ ಹೌಸ್ ನಲ್ಲಿ ದೈವಾನರಾದರು.

ಈಗ್ಗೆ 15 ದಿನಗಳ ಹಿಂದೆ ಅವರು ಆಸ್ಪತ್ರೆಯಲ್ಲಿದ್ದಾಗಲೇ, ಬದುಕಿದ್ದಾಗಲೇ ಅವರ ಸಾವಿನ ಸುದ್ದಿ ಟಿವಿ ಗಳಲ್ಲಿ ಬಂದುಬಿಟ್ಟಿತ್ತು! ಅದನ್ನು ನೋಡಿ ನಗ್ತಾನೆ ಡಿಸ್ಚಾರ್ಜ್ ಆಗಿ ಮನೆಗೆ ಬಂದವರು ವಾರದಲ್ಲಿಯೇ ಫೇಕ್ ನ್ಯೂಸ್ ಅನ್ನು ನಿಜ ಮಾಡಿಬಿಟ್ರು! ಇವರ ಮೊದಲ ಪತ್ನಿ ಶ್ರೀಮತಿ ಪ್ರಕಾಶ್ ಕೌರ್ 2.11.1982ರಲ್ಲೇ ನಿಧನರಾಗಿದ್ದರು. ಧರ್ಮೇಂದ್ರ ಅವರು 'ಶೋಲೆ' ಸಿನಿಮಾದ ಮೂಲಕ ಕನ್ನಡಿಗರ ಮನಸೆಳೆದಿದ್ದರು. ಆ ಸಿನಿಮಾ ಬಾಲಿವುಡ್ ಗಡಿ ದಾಟಿ ಜಗತ್ತಿನೆಲ್ಲೆಡೆ ಗಮನಸೆದಿತ್ತು. ಅಂದಿನ ಸೂಪರ್ ಸ್ಟಾರ್ ಧರ್ಮೇಂದ್ರ ಜೊತೆ ಅಮಿತಾಬ್ ಬಚ್ಚನ್ ಸ್ನೇಹಿತರಾಗಿ ನಟಿಸಿ, ಅವರನ್ನೇ ಮೀರಿಸಿ ಬೆಳೆದರು ಅನ್ನೋದು ಓಪನ್ ಸೀಕ್ರೆಟ್!




**★ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ 300 ಎಕ್ರೆ ಜಮೀನು ಖರೀದಿಸಿದ್ದ ಧರ್ಮೇಂದ್ರ★**

ಬಾಲಿವುಡ್ ನಟ ಧರ್ಮೇಂದ್ರ ಬೆಂಗಳೂರಿನ ಇಲೆಕ್ಟ್ರಾನಿಕ್ ಸಿಟಿಯಲ್ಲಿ 300 ಎಕರೆ ಜಮೀನು ಖರೀದಿಸಿದ್ದರು ಎಂದು ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ತಿಳಿಸುತ್ತ, ಧರ್ಮೇಂದ್ರ ಜೊತೆಗಿನ ತಮ್ಮ ಒಡನಾಟವನ್ನು ಮೆಲುಕು ಹಾಕಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಧರ್ಮೇಂದ್ರ 300 ಎಕರೆ ಜಮೀನು ಖರೀದಿಸಿದ್ದರು. ಆಮೇಲೆ ಅದನ್ನು ಮಾರಿಬಿಟ್ಟರು. ಅದನ್ನು ಮಾರಾಟ ಮಾಡಿದ ಮೇಲೆ ಆ ಜಾಗಕ್ಕೆ ಚಿನ್ನದಂತಹ ಬೆಲೆ ಬಂತು. ಧರ್ಮೇಂದ್ರ ತುಂಬಾ ಒಳ್ಳೆಯ ಮನುಷ್ಯ. ಯಾವುದಕ್ಕೂ ಆಸೆ ಪಡುತ್ತಿರಲಿಲ್ಲ. ದೇವರು ಅವರಿಗೆ ಎಲ್ಲವನ್ನೂ ಕೊಟ್ಟ. ಯಾರು ಏನೇ ಹೇಳಿದರೂ ಹೇಮಮಾಲಿಯನ್ನ ತುಂಬಾ ಚೆನ್ನಾಗಿ ನೋಡಿಕೊಂಡರು. ಅವರಿಬ್ಬರ ಲವ್ ಸ್ಟೋರಿಯನ್ನ ನಾನು ಹತ್ತಿರದಿಂದ ನೋಡಿದ್ದೇನೆ ಎಂದರು.



ಧರ್ಮೇಂದ್ರ ನನಗೆ ತುಂಬಾ ಹತ್ತಿರದವರು. ಕರ್ನಾಟಕಕ್ಕೆ ಬಂದ ಸಂದರ್ಭ ಅಶೋಕಾ ಹೋಟೆಲ್‌ನಲ್ಲಿ ಇರುತ್ತಿದ್ದರು. ನಾನು, ಅಂಬರೀಷ್, ವಿಷ್ಣುವರ್ಧನ್ ಎಲ್ಲಾ ಜೊತೆಯಲ್ಲಿ ಇರುವ ಫೋಟೋಗಳು ವಿಷ್ಣುವರ್ಧನ್ ಬಳಿ ಇತ್ತು. ಅವರು ಮೊದಲಿಗೆ ಬಣ್ಣ ಹಚ್ಚಿ ಹೀರೋ ಆಗಿದ್ದೇ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ, ಅಲ್ಲಿಂದ ಅವರು ನಮಗೆ ಪರಿಚಯ. 8 ತಿಂಗಳ ಹಿಂದೆ ಅವರನ್ನು ಭೇಟಿ ಮಾಡಲು ಹೋಗಿದ್ದೆವು. ಅವರೊಂದಿಗೆ ಒಂದು ಸಿನಿಮಾ ಮಾಡುವ ಯೋಚನೆ ಕೂಡ ಇತ್ತು. ಆದರೆ ಅದು ಸಾಧ್ಯವಾಗಲಿಲ್ಲ ಎಂದು ಹೇಳುತ್ತಿದ್ದರು. ಧರ್ಮೇಂದ್ರ ಅಷ್ಟು ದೊಡ್ಡ ಮನುಷ್ಯರಾದರೂ ಸಹ ಬಂಗಾರದ ಮನುಷ್ಯ.

ಅವರಿಗೆ ಯಾವುದೇ ರೀತಿಯ ಅಹಂಕಾರ ಇರಲಿಲ್ಲ. ಯಾವುದೇ ನಿರ್ಮಾಪಕರು ಕೂಡ ಅವರನ್ನು ದೂರಲಿಲ್ಲ. ಇವತ್ತು ಅಮಿತಾಬ್ ಬಚ್ಚನ್ ದೊಡ್ಡ ಹೀರೋ ಆಗಿದ್ದಾರೆ ಅಂದ್ರೆ, ಅದಕ್ಕೆ



ಧರ್ಮೇಂದ್ರ ಕಾರಣ. ಅವರು ದೋಸೆ ಪ್ರಿಯರು. ಮೈಸೂರಿನ ಹೋಟೆಲ್‌ನಲ್ಲಿ ಸಾದಾ ದೋಸೆ ಎಲ್ಲ ಕೊಡಿಸಿದ್ದೆ. ಅದೆಲ್ಲಾ ಅವರಿಗೆ ಇಷ್ಟವಾಗುತ್ತಿತ್ತು. ಸಾಮಾನ್ಯವಾಗಿ ಎಂಟಿಆರ್‌ಗೆ ಹೋಗುತ್ತಿದ್ದರು. ಮೈಸೂರಿಗೆ ಹೋದರೆ ರಾಜ್ ಹೋಟೆಲ್‌ನಲ್ಲಿ ಇರುತ್ತಿದ್ದರು. ಇವರು ತುಂಬಾ ಒಳ್ಳೆಯ ಮನುಷ್ಯ. ಇಂತಹ ಮನುಷ್ಯ ಸಿಗೋದೇ ಕಷ್ಟ. ಯಾವಗ್ಲೋ ನೋಡಿದ್ರೂ ಯಾವತ್ತಿಗೂ ಮರೆಯುತ್ತಿರಲಿಲ್ಲ. ಸದಾ ನೆನಪಿನಲ್ಲಿಟ್ಟು ಕೊಳ್ಳುತ್ತಿದ್ದರು ಎಂದು ನೆನಪಿಸಿಕೊಂಡರು. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 30.11.2025

# ಅತ್ತಿಗೆ ಹೆಸರು ಬಾಯ್ಬಿಟ್ಟ ಧನ್ವೀರ್!



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳು ಮದ್ಯ ಸೇವಿಸುತ್ತಾ, ಸಿಗರೇಟ್ ಸೇದುತ್ತಾ ಪಾರ್ಟಿ ಮಾಡುತ್ತಿರುವ ವಿಡಿಯೋ ವೈರಲ್ ಆದ ಪ್ರಕರಣಕ್ಕೆ ಇದೀಗ ಭಾರೀ ತಿರುವು ಸಿಕ್ಕಿದೆ. ಈ ವಿಡಿಯೋ ಲೀಕ್ ಆರೋಪ ಎದುರಿಸುತ್ತಿರುವ ನಟ ದರ್ಶನ್ ಆಪ್ತ ಸ್ನೇಹಿತ ಧನ್ವೀರ್, ಸಿಸಿಬಿ ಮೊದಲನೇ ವಿಚಾರಣೆಯಲ್ಲಿ ತನಗೇನು ಗೊತ್ತಿಲ್ಲ ಎಂದು ಜಾರಿಕೊಂಡಿದ್ದರು. ಆದರೆ ಎರಡನೇ ಬಾರಿಯ ವಿಚಾರಣೆಯಲ್ಲಿ ಪರಪ್ಪನ ಅಗ್ರಹಾರ ಪೊಲೀಸರ ಎದುರು, ದರ್ಶನ್ ಪತ್ನಿ ಅತ್ತಿಗೆ ವಿಜಯಲಕ್ಷ್ಮಿ ಹೆಸರನ್ನು ಬಾಯ್ಬಿಟ್ಟಿದ್ದಾರೆ! ಇದರಿಂದ ವಿಜಯಲಕ್ಷ್ಮಿ ಅವರನ್ನೂ ತನಿಖಾಧಿಕಾರಿಗಳು ವಿಚಾರಣೆಗೆ ಕರೆಯುವ ಸಾಧ್ಯತೆ ಇದೆ.

ಕಳೆದ ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ವಿಡಿಯೋದಲ್ಲಿ ದರ್ಶನ್ ಸೇರಿದಂತೆ ಹಲವು ಕೈದಿಗಳು ಜೈಲಿನಲ್ಲೇ ಮದ್ಯಪಾನ, ಸಿಗರೇಟ್ ಸೇದುತ್ತಾ ಆನಂದದಲ್ಲಿರುವ ದೃಶ್ಯಗಳಿದ್ದವು. ಇದು ರಾಜ್ಯದಲ್ಲಿ ಭಾರೀ ಸಂಚಲನ ಮೂಡಿಸಿತ್ತು. ಜೈಲು ಆಡಳಿತದ ತಪ್ಪಿಗೆ ಈ ವಿಡಿಯೋ ಸಾಕ್ಷಿಯಾಗಿತ್ತು. ಈ ವಿಡಿಯೋ ಯಾರು ಲೀಕ್ ಮಾಡಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಪರಪ್ಪನ ಅಗ್ರಹಾರ ಪೊಲೀಸರು ತನಿಖೆ ಆರಂಭಿಸಿದ್ದರು. ಈ ಸಂಬಂಧ ದರ್ಶನ್ ಆಪ್ತ ಧನ್ವೀರ್ ಮೇಲೆ ಆರೋಪ ಬಂದಿತ್ತು.

ಮೊದಲ ಬಾರಿಗೆ ನೋಟಿಸ್ ನೀಡಿದಾಗ ಧನ್ವೀರ್ ವಿಚಾರಣೆಗೆ ಹಾಜರಾಗಿದ್ದರು. ಆದರೆ ಅವರು ಯಾವುದೇ ಮಾಹಿತಿ ನೀಡಿರಲಿಲ್ಲ. ಆ ನಂತರ ಎರಡನೇ ನೋಟಿಸ್ ನೀಡಲಾಯಿತು. ಈ ಬಾರಿ ಧನ್ವೀರ್ ಪೊಲೀಸರ ಮುಂದೆ ಬಾಯಿ ಬಿಟ್ಟಿದ್ದಾರೆ.

'ನಾನು ಆ ವಿಡಿಯೋವನ್ನು ವೈರಲ್ ಮಾಡಿಲ್ಲ. ಅದು ಹೇಗೆ ವೈರಲ್ ಆಯ್ತು ಅಂತ ನನಗೆ ಗೊತ್ತಿಲ್ಲ. ಆದರೆ ನಮಗೆ ಗೊತ್ತಿರೋ ಒಬ್ಬ ವಕೀಲರಿಂದ ಆ ವಿಡಿಯೋ ನನ್ನ ಬಳಿಗೆ ಬಂದಿತ್ತು. ನಾನು ಅದನ್ನು ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರಿಗೆ ಮಾತ್ರ ಫಾರ್ವರ್ಡ್ ಮಾಡಿದ್ದೆ...' ಎಂದು ಧನ್ವೀರ್ ಬಾಯಿ ಬಿಟ್ಟಿದ್ದಾರೆ.

ಧನ್ವೀರ್ ಹೇಳಿಕೆಯಲ್ಲಿ ವಿಜಯಲಕ್ಷ್ಮಿ ಹೆಸರು ಬರುತ್ತಿದ್ದಂತೆ ತನಿಖಾಧಿಕಾರಿಗಳು ತಕ್ಷಣ ಈ ವಿಷಯವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ವಿಜಯಲಕ್ಷ್ಮಿ ಅವರನ್ನು ವಿಚಾರಣೆಗೆ ಕರೆಸಬೇಕೆ... ಎಂಬ ಚರ್ಚೆ ಪೊಲೀಸ್ ಇಲಾಖೆಯಲ್ಲಿ ನಡೆದಿದೆ. ಧನ್ವೀರ್ ಇನ್ಮುಂದೆ ಕೂಡ ತನಿಖೆಗೆ ಸಂಪೂರ್ಣ ಸಹಕಾರ ನೀಡದಿದ್ದರೆ ವಿಜಯಲಕ್ಷ್ಮಿ ಅವರನ್ನು ಖಂಡಿತಾ ಕರೆಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇನ್ನು ವಿಡಿಯೋ ಯಾವ ಅಕೌಂಟ್‌ನಿಂದ ಅಪ್‌ಲೋಡ್ ಆಗಿದೆ, ಯಾರು ಮೊದಲು ಪೋಸ್ಟ್ ಮಾಡಿದ್ದಾರೆ ಎಂಬುದನ್ನು ಪತ್ತೆಹಚ್ಚಲು ಪೊಲೀಸರು ಮೆಟಾ ಕಂಪನಿಗೆ ಈಗಾಗಲೇ ಇಮೇಲ್ ಕಳುಹಿಸಿ ಮಾಹಿತಿ ಕೋರಿದ್ದಾರೆ. ಇದಲ್ಲದೆ ಜೈಲಿನಲ್ಲಿದ್ದ ಕೈದಿಗಳನ್ನೂ ವಿಚಾರಣೆ ಮಾಡಲಾಗುತ್ತಿದೆ. ಜೈಲಿನ ರಾಜಾತಿಥ್ಯ ವಿಡಿಯೋ ಲೀಕ್ ಪ್ರಕರಣ ಇದೀಗ ದರ್ಶನ್ ಕುಟುಂಬದತ್ತ ತಿರುಗಿದ್ದು, ಧನ್ವೀರ್ ಹೇಳಿಕೆಯಿಂದ ವಿಜಯಲಕ್ಷ್ಮಿ ಅವರು ತನಿಖೆ ಎದುರಿಸುವ ಸಾಧ್ಯತೆ ಹೆಚ್ಚಾಗಿದೆ!



☯



# ಹೇಮಾ ಮಾಲಿನಿಯನ್ನು ವಿವಾಹವಾಗಲು 'ಇಸ್ಲಾಂ' ಸೇರಿದ್ರೆ ಧರಮ್?!

ಹೇಮಾ ಮಾಲಿನಿ ಜೀವನ ಚರಿತ್ರೆ ಪುಸ್ತಕ ಹೇಮಾ ಮಾಲಿನಿ: ಬಿಯಾಂಡ್ ದಿ ಡ್ರೀಮ್ ಗರ್ಲ್ ಪುಸ್ತಕದಲ್ಲಿ ಲೇಖಕ ರಾಮ್ ಕಮಲ್ ಮುಖರ್ಜಿ ಅವರು, ಹಿಂದೂ ಧರ್ಮದಲ್ಲಿ ಮೊದಲ ಪತ್ನಿ ಇರುವಾಗಲೇ ಎರಡನೇ ಮದುವೆಯಾಗುವುದು ಅಪರಾಧ. ಈ ಕಾರಣಕ್ಕೆ ಧರ್ಮೇಂದ್ರ ಮುಸ್ಲಿಂ ಧರ್ಮಕ್ಕೆ ಮತಾಂತರವಾಗಿದ್ದರು! ಧರ್ಮೇಂದ್ರ ಅವರು ಜದಿಲಾವರ್ ಖಾನ್ ಕೇವಲ್ ಕೃಷ್ಣ' ಎಂಬುದಾಗಿಯೂ ಹೇಮಾ ಮಾಲಿನಿ ಅವರು 'ಆಯೇಷಾ ಬಿ' ಎಂದು ತಮ್ಮ ಹೆಸರುಗಳನ್ನು ಬದಲಾಯಿಸಿಕೊಂಡಿದ್ದರು! 1979ರಲ್ಲಿ 'ನಿಕಾಹ್' ಕೂಡ ನಡೆದಿತ್ತು ಎಂದು ಉಲ್ಲೇಖಿಸಿದ್ದು ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿತ್ತು! ಹೇಮಾಮಾಲಿನಿ ಅವರನ್ನು ಮದುವೆಯಾದ ಬಗ್ಗೆ ಧರ್ಮೇಂದ್ರ ಅವರು ಸರ್ಕಾರಿ ದಾಖಲೆಗಳಲ್ಲಿ ಎಲ್ಲಿಯೂ ಉಲ್ಲೇಖಿಸಿರಲಿಲ್ಲ.

2004ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಧರ್ಮೇಂದ್ರ ಅವರು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ಹೇಮಾ ಮಾಲಿನಿ ಹೆಸರಿನ ಆಸ್ತಿ ವಿವರಗಳನ್ನು ಬಹಿರಂಗ ಪಡಿಸಿರಲಿಲ್ಲ. ಅವರು ತಮ್ಮ ಮೊದಲ ಪತ್ನಿ ಪ್ರಕಾಶ್ ಕೌರ್ ಅವರ ಆಸ್ತಿ ವಿವರವನ್ನು ಮಾತ್ರ ಪ್ರಕಟಿಸಿದ್ದರು! ಇದು ವಿವಾದವಾಗುತ್ತಿದ್ದಂತೆ ಮಾಧ್ಯಮಕ್ಕೆ ಸ್ಪಷ್ಟನೆ ನೀಡಿದ್ದ ಅವರು, ಇದೊಂದು ಸುಳ್ಳು ಆರೋಪವಾಗಿದ್ದು, ನನ್ನ ಹಿತಾಸಕ್ತಿಗಳಿಗಾಗಿ ಧರ್ಮವನ್ನು ಬದಲಾಯಿಸುವ ವ್ಯಕ್ತಿಯಲ್ಲ.... ಎಂದು ತಿಳಿಸಿದ್ದರು!! ☯

# ಮರಳಿ ಬಾರದೂರಿಗೆ ಪಯಣಿಸಿದ ಉಮೇಶಣ್ಣ!



ಕನ್ನಡ ಚಿತ್ರರಂಗದ ಹಿರಿಯ ನಟ ಎಂ.ಎಸ್.ಉಮೇಶ್ ನಿಧನರಾಗಿದ್ದಾರೆ. ಅವರು ಇತ್ತೀಚೆಗೆ ಕಾಲು ಜಾರಿ ಬಿದ್ದು ಆಸ್ಪತ್ರೆಗೆ ದಾಖಲಾಗಿದ್ದರು. ಬಳಿಕ ಅವರನ್ನು ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಈ ವೇಳೆ ಉಮೇಶ್ ಅವರಿಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿತ್ತು. ಸದ್ಯ ಚಿಕಿತ್ಸೆ ಫಲಿಸದೆ ಅವರು ಕೊನೆಯುಸಿರೆಳೆದಿದ್ದಾರೆ. ಸರಿಸುಮಾರು 350ಕ್ಕೂ ಹೆಚ್ಚು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದ ಉಮೇಶ್ ಅವರು ತಮ್ಮ ಹಾಸ್ಯದ ಮೂಲಕ, ಹಾವ ಭಾವದ ಮೂಲಕ ನಕ್ಕು ನಲಿಸಿದ್ದರು. ಗೋಲ್ ಮಾಲ್ ರಾಧಾಕೃಷ್ಣ ಚಿತ್ರದಲ್ಲಿ ಅವರು 'ಅಯ್ಯಯ್ಯೋ ಅಪಾರ್ಥ ಮಾಡ್ಕೋಬೇಡಿ' ಎನ್ನುವ ಡೈಲಾಗ್ ಮನೆಮಾತಾಗಿತ್ತು.

ಶ್ರುತಿ ಸೇರಿದಾಗ ಚಿತ್ರದಲ್ಲಿ ಅಣ್ಣಾವ್ರ 'ಬೊಂಬೆ ಯಾಟವಯ್ಯ' ಹಾಡಿಗೆ ಉಮೇಶ್ ಅಭಿನಯ ಹೊಟ್ಟೆ ಉಣ್ಣಾಗಿಸುವಷ್ಟು ನಗಿಸಿತ್ತು. ಉಳಿದಂತೆ, ಒಂದಾಗಿ ಬಾಳು, ಗುರು ಶಿಷ್ಯರು, ಹಾಲು ಜೇನು,ಕಾಮನ ಬಿಲ್ಲು, ಅಪೂರ್ವ ಸಂಗಮ..... ಸೇರಿದಂತೆ ಕನ್ನಡದ ಬಹುತೇಕ ಸ್ಟಾರ್ ನಟರೊಂದಿಗೆ ಹಿಟ್ ಸಿನಿಮಾಗಳಲ್ಲಿ ಉಮೇಶ್ ನಟಿಸಿದ್ದಾರೆ. ವಯಸ್ಸು 80 ದಾಟಿದ್ದರೂ ಅವರು ಯುವಕರಂತಿದ್ದರು!

ಇವತ್ತಿನ ಕಾಲಘಟ್ಟದಲ್ಲಿ ಅವರಿಗೆ ಹೊಸ ಸಿನಿಮಾಗಳೆ ಸಿಗುತ್ತಿರಲಿಲ್ಲ. ಅಲ್ಲಿ ಇಲ್ಲಿ ಸಭೆ ಸಮಾರಂಭಗಳಿಗೆ ಕರೆದರೆ ಹೋಗುತ್ತಿದ್ದರು. ಅಲ್ಲಿಯೂ 'ಅಯ್ಯಯ್ಯೋ ಅಪಾರ್ಥ ಮಾಡ್ಕೋಬೇಡಿ' ಎಂಬ ಡೈಲಾಗ್ ಹೊಡೆದು ನಗಿಸುತ್ತಿದ್ದರು. ಕೋತಿಯಂತೆ ವರ್ತ್ರ ಎಂದು ಅಣಕಿಸುತ್ತಿದ್ದರು.

ಇಂಥ ವ್ಯಕ್ತಿಯ ದೇಹದ ಕೆಲ ಭಾಗಕ್ಕೆ ಕ್ಯಾನ್ಸರ್ ಹರಡಿಕೊಂಡಿದ್ದುದು, ವೈದ್ಯರು ಸರ್ಜರಿ ಮಾಡುವುದು ಕೂಡ ಕಷ್ಟ ಎಂದದ್ದು ದುರದೃಷ್ಟಕರ. ಇಷ್ಟಾದರೂ ಉಮೇಶಣ್ಣ ಅವರು ನಗು ನಗುತ್ತಲೇ ವಿಡಿಯೋ ಮೂಲಕ ಸ್ಪಷ್ಟನೆ ನೀಡಿದ್ದರು. ವೈದ್ಯರು ನನ್ನನ್ನು ಚೆನ್ನಾಗಿ ನೋಡಿಕೊಳ್ತಿದ್ದಾರೆ. ಅಭಿಮಾನಿಗಳು ಯಾರೂ ಆತಂಕಪಡಬೇಡಿ, ಆದಷ್ಟು ಬೇಗ ಹುಷಾರಾಗಿ ಬರುತ್ತೀನಿ... ಎಂದಿದ್ದರು! ನಂತರ ಅವರು ಮರಳಿ ಬಾರಲೇ ಇಲ್ಲ. ಮರಳಿ ಬಾರದೂರಿಗೆ ಪಯಣಿಸಿದರು!!

ಅಂದಹಾಗೆ, ಎಂ.ಎಸ್ ಉಮೇಶ್ ಅವರು ಮೈಸೂರಿನವರು. ಮೈಸೂರು



ಶ್ರೀಕಂಠಯ್ಯ ಉಮೇಶ್ ಅವರ ಪೂರ್ತಿ ಹೆಸರು. ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರ ಆಶೀರ್ವಾದದಿಂದ 'ಕಥಾ ಸಂಗಮ' ಚಿತ್ರದ ಮೂಲಕ ಬಣ್ಣ ಹಚ್ಚಿ, ತಿಮ್ಮರಾಯಿ ಪಾತ್ರದಲ್ಲಿ ಅದ್ಭುತವಾಗಿ ನಟಿಸಿ ರಾಜ್ಯ ಪ್ರಶಸ್ತಿ ಪಡೆದಿದ್ದರು! ನಂತರ 'ಮಕ್ಕಳ ರಾಜ್ಯ' ಚಿತ್ರದಲ್ಲಿ ಪೋಷಕ ನಟರಾಗಿ ಮಿಂಚಿ ಇಲ್ಲಿಯೂ ರಾಜ್ಯ ಪ್ರಶಸ್ತಿ ಗಿಟ್ಟಿಸಿದ್ದರು!! ಯಾವುದೇ ಸಿನಿಮಾ ಇರಲಿ, ಸಣ್ಣ ಪಾತ್ರವೇ ಇದ್ದರೂ ಅದರಲ್ಲೇ ವಿಶೇಷವಾಗಿ ನಟಿಸಿ ತಮ್ಮ ಛಾಪು ಒತ್ತುವುದರಲ್ಲಿ ನಿಸ್ಸೀಮರಾಗಿದ್ರು, ಉಮೇಶಣ್ಣ. ಹೀಗಾಗಿ, ಅವರನ್ನ ಇಂಡಸ್ಟ್ರಿಯಲ್ಲಿ 'ಬಣ್ಣದ ಗಂಟೆ' ಅಂತ ಕರೆಯಲಾಗುತ್ತಿತ್ತು. ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ...




☯

Vol. 41 No. 26 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==